ಪ್ರಜಾವಾಣಿ ಶನಿವಾರ • ಏಪ್ರಿಲ್ 5, 2025

# ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
# ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331



## Yelahanka
**MATHRU LAYOUT** Sale 60X40 North facing with house (G+F) Rs.13800/-sft Direct buyers only: 6366431903/ 9986388438

## Udupi
**KHB SITE** 1725 SQFT HEBRI TOWN AMIDST NATURE WESTERN GHATS 26 LAKHS OWNER CONTACT 9606866368

## Srirampura
**SALE 30X100,** Site, 1st cross,Single owner, 2 mins from metro, 17000/sqft, PH:9739732433

## House

## J P Nagar
**SALE JPNAGAR** 2nd Phase Corner Property 30x40 Duplex-House 3BHK 1700sqft Granite-flooring Price 4cr Classic Estates 9845302589

**HOUSE FOR** Sale at J.P Nagar Dollar's Layout, 4BHK, 51X49. 27K per sqft, West facing. Brokers excuse. Contact: 9538944624, 9480222767

## Tumkur
**DUPLEX HOUSE** FOR SALE, 2600 Sft. N/East Corner, ASHOKA NAGARA, TUMKUR. Brokers Excuse. 9449450364, 9448742496

## Srirampura
**HOUSE FOR** SALE in Sriramapuram, Land measuring 1500 sqft. Building 4000+. Ground+2. Covered Parking for 2 Cars. Contact: 9500995889, 9171918285.

## Flat

## Banashankari
**GURURAJA LAYOUT** Near Devegowda Petrol Bunk, New Luxury 4 BHK FLATS Sale, Ready to move. Call: 9449353535.

## Hebbal
**PRESTIGE MISTY** WATER Hebbal 4BHK, North Facing Flat 3.5Cr 20th Floor Semi-Furnished 2Carpark Vastu 9880211880

## Kanakapura Road
**POSH FLATS** 3 BHK/ 2 BHK at Kanakapura Road near Forum Mall/ Doddakallasandra Metro with Swimming pool, Car parks, Cauvery water, Generator, Vasthu. Narayannagar. Dr.Swamy- 9342247637. Promoters: Anika Projects.

**FLATS FOR Sale Near Metro Stations, Kanakapura Road. Price Starts from 35 Lakhs. Sarakki Homes, 9663676464.**

## Padmanabha Nagar
**BHARAT HOUSING SOCIETY** Near Padmanabhanagar New Luxury 3 BHK FLAT 2200 Sqft. Sale. Ready to Move. Call: 9449353535.

## Agricultural Land

## Magadi Road
**LAND FOR SALE** 3.34 acres RTC, 30guntas kharab on Magadi main road, 28kms from Bangalore. Highway facing. Contact. 9448061555/ 8310719986.





SALE
CHAMRAJPET
COMMERCIAL BUILDING
18,000 SFT,
RENTAL INCOME 7.5 LACS
SALE PRICE 12.50 CRORES
Call: 89713-79031 / 96111-99900







## Tumkur
**AGRICULTURE LAND** @ Chikkanayakanahalli Tumkur. NH-150A Prime Commercial Land 2.35 Acres with Trees & Houses, Power, Suitable for Petrol Bunk, School, etc. 6Cr. AND 9.5 Acres Agriculture Land, Coconut, Mango Farm, LakeSide. 2.5Cr. both Solar Fencing with Borewell. Only Genuine Buyers Contact Owner: 9448473165

## Commercial

## Majestic And Around
22500 sqft.
SITE for SALE
**East Face** Heart of Cottonpet Main Road, Bashyam Road (Near Poorvi Plaza), Near Super Talkies, Suitable for Commercial & Res. Apartment **9449751739, 6361767472**

## Joint Development

## Hennur
**JD OR** Built to suit Hennur Cross commercial converted land BBMP 'E' Katha, 22000 sqft available for JD or buit to suit. Mob: No. 8310828141/ 6364112404. Send your profile, proposal through whatsapp.

## REAL ESTATE BUYING

## Sites

## Banashankari
**BDA SITES** WANTED ARKAVATHY ANJANAPURA BANASHANKRI 6TH STAGE VISHWESWARAIA KEMPEGOWDA ANY BDA LAYOUT: 9845062822/ 8660751654

**BDA-SITE WANTED** @ Banashankari 6th Stage any Block 30x40, 40x60, 50x80 Immediate Settlement Contact: 98455-55666

## Kanakapura Road
**WANTED SITE'S** 30x40 40x60 BDA or Housing Society allotted Site with Clear Titles, Agent Excuse. Call: 9663454878.

## Multiple Locations
**WANTED BDA** SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

## BUILDERS ESSENTIAL

## Water Proofing
**LEAKAGE... LEAKAGE...** Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

## RENTAL PROPERTIES

## Accommodation Available

## Commercial
**RG PARADIES** UNLIMITED BIRYANI AC Restaurant Running Very Well with all Fecilites Interior Partyhall Mysore Road opposite Metropole Number 484 Contact: 9448483403

## Industrial And Factory
**AVAILABLE OF** Industrial Shed of 170000`sqft at Soukya Road, Whitefield. Available Built-to-Suit Warehouse 160000 sqft.`Vijipura, Hoskote Contact: 9341234288/ 9663224353/ 9845417487.

## BUSINESS

## Business to Business

## Agriculture
**WORRIED ABOUT** ur Agriculture Land,not Maintained,not Planned what to do,We Are here,Happy to Convert your plain Land to Agroforestry Farm all over Karnataka.Contact :7899039851

## Business



## PUBLIC NOTICE

**PUBLIC NOTICE**

Notice is hereby given to the general public that, our client intends to purchase the immovable property mentioned in the Schedule hereunder and hereinafter referred to as the **"Schedule Property"** along with all fixed assets and the structures, if any, standing thereon from **SRI. S. RAJ KUMAR.**

Any person having any claims, rights, title, or interests in respect of the Schedule Property or any part thereof including by way of sale, conveyance, assignment, transfer, exchange, gift, mortgage, lien, lease, sub-lease, tenancy, trust, maintenance, inheritance, possession, share, license or a claim in the nature of a dispute, suit, decree, other restrictive covenants, order of injunction, hypothecation, charge, attachment, requisition, acquisition, easement, encumbrance, covenant right of prescription or pre-emption or under any Agreement or other disposition or otherwise claiming howsoever, are hereby requested to make the same known in writing along with supporting documentary evidence to the undersigned within a period of 7 (Seven) days from the date of publication hereof, failing which the claims of such person/s will be deemed to have been waived and/or abandoned.

**SCHEDULE PROPERTY MENTIONED HEREIN ABOVE:**
All the piece and parcel of House property bearing Municipal No.11 (old Municipal No. 614/11), having E-PID No. 3233816279 (old PID No.60-105-11), formed in BDA Site No.614, measuring East to West 60feet and North to South 40 feet, totally measuring 2400 square feet along with residential building consisting of 1800 Square feet in the Ground Floor and 1800 Square on the First Floor, situated at 10th 'C' Main Road, 4th Block, Ward No.168- Pattabhiramnagar, Jayanagar, Bengaluru with all rights, including ways, water courses, advantages, easements, appurtenances belonging to or reputed to the above thereof and bounded by:
**EAST BY:** Road; **WEST BY:** Open Space and Burial Ground; **NORTH BY:** Site No.613; and **SOUTH BY:** Site No.615.
**Place:**Bangalore **Date:**05-4-2025

**VISHWAS.S,**
**Advocate & Consultant,**
**DHITI LAW CHAMBERS,**
HM Geneva House, No.409, Cunningham Road,Bangalore-52.
**Mob: 9880859592**

## REAL ESTATE SELLING

## Sites

## Anjanapura
**WANTED ANJANAPURA** Banashankari 6th Stage JPNagar Near Kanakapura Road Any Measurement Immediate Settlement Call: 9964627255

**BDA 30X40** South facing 1st Block Anjanapura 12,000/- Sft. 1490sft. corner 12,500/- Mahalakshmi Enterprise -9845144365

## Banashankari
**BANASHANKARI 6TH STAGE- BDA- AVAILABLE/ WANTED** 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

**SITE FOR SALE** Banashankari 6th Stage 3rd Block 30x40 North Facing, Price 13,500/- sq.feet. owner meeting. 9740148870.

**SITE FOR** Sale In Banashankari 6th Stage 6th Block 20X30 W/F 62Lakhs & 10th Block 20x30 S/F 62Lakhs Contact: 9535575774

**BANASHANKARI 6TH** Stage, 9th Block, BDA, 30x40sft, West Facing, Park attached, Rs.1.08Crore. Owner 9845259332

## BTM Layout



20x40 BDA NOC
SITE for SALE
**BTM** 4th Stage, 2nd Block, Near Nano Hospital Back, Sai Baba Temple, Saraswathipuram Layout, North Builder Spot, 'B' Katha. Rs. 90 lacs. Nego. **CALL : 9845286583**

## Basavanagudi
**BASAVANGUDI SALE** Site 70x90 East Posh Locality Near National College Circle. Rs 55k Negotiable: Shivu 9880004149

## Basaweshwaranagar
**40×60 BASVESHWARNAGAR** 30×41 Rajajinagar, 50×75 Malleshwapur, 80×10 Race Course Road Site's Residential, Commercial Sale: 8660075308

## Hebbal
**HEBBAL 30X35** House Sale Ground 1 BHK Two Carparking 1st 2 BHK 2nd 2 BHK 9845623970/ 9739400838

## Indiranagar
**"INDIRANAGAR 2ND_STAGE** 40x61, SITE WITH`OLD HOUSE, SOUTH FACING FOR_SALE PRICE:₹28K_P.SFT. "ARIES PROPERTY"- 9741134782/ 9448065721

## Jayanagar
**30X40 EAST** facing excellent residential (near Jayanagar Orthopadic Centre) old house site price. 3,25,00,000/- - Suraj Realtors -9845232711

## Kumaraswamy Layout
**40X60 BDA** SITE SALE, Kumaraswamy Layout, South Face, Extra Margin Land, Near 108 Ganesha Temple. 9886913658.

## Kempegowda Layout
**BDA-SITE FOR-SALE** 20x30 and 40x60 at_Good Location In_Nadaprabhu Kempegowda Layout Call:7676900174 6363496142

**NADAPRABHU KEMPEGOWDA** layout, Sir M.Vishweshwaraiah. Sites for sale. 20x30,30x40, 40x60, 50x80. Manjunatha 9742568746, 9900701637.

## Kalasipalya
**SALE- SITE** measuring 795Sqft at Thigalarapete, Kumbarpete Main Road, Dharmaraya Swamy Temple, Bengaluru. Call: 7829813088

## Mysore Road
**SLN-CITY NEAR** Kempe Gowda Layout Ajjanahalli, 40x60 East Facing Plot 3500/per sft. Contact Mayur 9880065015

**"25X40 CORNER** Near`Hejjala Railway Station BMRDA Approved 3000/- P.Sft, 30x40 BigBanyan Tree ₹19 Lakhs. 9845178335"

## Out-Station
**KHB SITE** 60X40 East Facing,Housing Board colony kempegowda Layout Near citizen public school Nanjanagudu.Owner :8310030380

## Rajarajeshwari Nagar
**UNIVERSITY LAYOUT** Rajarajeswari Nagar 30x40 SF Behind RR Nagar Police Station 17200/- Per Sqft: 9845488488

## Multiple Locations



## Padmanabha Nagar
**SALE A-** Khatha 30x40, Padmanabha Nagar, South Facing, Behind Maharaj Agrasen Hospital: 8971799337

## Nagarabhavi
**NAGARABHAVI NAGADEVANAHALLI** 35x40 West Facing 'B' Katha, Loan Available Near Ring Road, 7000/- PSft: 9845488488

**SALE: SITE** 30x60 Nagarabhavi 2nd Stage, 'A' Khata. Immediate Registration. Genuine Buyers. Contact: 6361819741.

**NAGARABHAVI RHCS** LAYOUT 2nd Stage BDA Approved 30x60 East Facing 40' Road 12500/- PSft: 9845488488

**AVAILABLE PAPAREDDYPALYA** A-khatha G+1+1 Rent`House North near`Deepa Complex Vishveshwaraiah 6th`North good location 40x60. 9448733456

## Ramanagar
**RESIDENTIAL CONVERTED** RCUDA Approved Site @ Ramanagar 10000Sqft Attached Rajiv Gandhi Health University 1500/- P.Sft Going Cheap. Owner- 9900115519

## Vishweshwariah Layout
**"VISHVESWARAIAH 6TH-BLOCK** 60ft Road 50x80 South facing Commercial Property with 75 Squares Building. 9845500019/ 7019314962"

**"VISHVESWARAIAH 1ST-BLOCK** 30x40 South/ West facing Site Sale Near 100`ft Road Genuine Buyers only: 9845268611"

**VISHWESHWARAIAH LAYOUT** 7th Block 20x30 West Facing Sites Available Near Ullal RTO Good Location: 9980433004

**BDA VISHWESHWARAIAH** LAYOUT 4TH BLOCK 50X80 EAST FACE 80FT ROAD PARALLEL 7750 NEGOTIABLE CONTACT: 8892901567

**VISHWESHWARAIAH 6TH** Block 30x40 North Facing Site No. 2297 Price 11500/- 40x60 West Facing: 9845793121

## JOB OPPORTUNITIES

## Domestic Helpers / Housekeeping
**WANTED HOUSE** maid with experience in cleaning and maintenance of house, must know to converse in English. Good Salary offered. Contact-9900966333

## Marketing & Sales
**WANTED**
**MARKETING EXECTIVE** for Builders & Developers office at Vijayanagar, Bangalore.
Good Salary & Commission
Qualification: Any Degree
Languages: English, Kannada & Hindi
Contact: 9008005029 / 7829000837

## Security & Detectives
**WANTED URGENTLY REQUIRED SECURITY FILED OFFICERS AND GENERAL MANAGERS FOR 35 YEARS OLD SECURITY AGENCY. EXPERIENCE IN SECURITY FIELD. CONTACT: CHANDRASHEKAR PATIL PHONE: 9844012530**

## PERSONAL

## Change of Name

**CHANGE OF NAME**
I, **Suresh @ Suresh Aghariya,** residing at # 18/6, 6th Cross, 9th F Main, Behind SLV Hotel, 1st Main, Hosahalli, Vijayanagar, Bengaluru-560040, declare that the above names pertain to me only & henceforth I shall be known as **SURESH** vide affidavit dated 04-04-2025, sworn before Notary Deepa M., Bengaluru.

**CHANGE OF NAME**
I, **PRAKASH THEJARAJ BAFNA (PRAKASH T BAFNA),** R/a No.15/2, TAP Merit Enclave, 4th Cross, Lakshmi Road, Bheemanna Garden, Shanti Nagar, Bengaluru-560027, have changed my name to **PRAKASH CHAND THEJARAJ** Vide affidavit dated 04.04.2025 sworn before Notary S.I. Balaguru, Bengaluru. Henceforth I shall be called as **PRAKASH CHAND THEJARAJ** only

**CAUTION NOTICE**
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಶನಿವಾರ, ಏಪ್ರಿಲ್ 5, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 94 | ಪುಟ 18

● www.prajavani.net

prajavani.net prajavani prajavani prajavani

# ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವಕ್ಫ್ ಮಸೂದೆ: ಮುಸ್ಲಿಮರಿಗೆ ಅನುಕೂಲವೇ ಅನನುಕೂಲವೇ?

ಚರ್ಚೆ

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 75,364 | 22,904 | ₹94,650 (ಬೆಂಗಳೂರು) | ₹98,500 (ಬೆಂಗಳೂರು) | 85.44 |

## ತಾಜ್ ಮಹಲ್ ಗಳಿಕೆ ₹297 ಕೋಟಿ

- 2020–24ರವರೆಗೆ ಟಿಕೆಟ್ ಮಾರಾಟ ಮೂಲಕ ತಾಜ್ ಮಹಲ್ ಗಳಿಸಿದ್ದು ₹297 ಕೋಟಿ
- ತಾಜ್ ಮಹಲ್ ಮೊದಲ ಸ್ಥಾನದಲ್ಲಿದ್ದರೆ ಕುತುಬ್ ಮಿನಾರ್ ಮತ್ತು ಕೆಂಪು ಕೋಟೆ ನಂತರದ ಸ್ಥಾನಗಳಲ್ಲಿವೆ
- 2023–24ರಲ್ಲಿ ಕುತುಬ್ ಮಿನಾರ್ ₹23.80 ಕೋಟಿ ಮತ್ತು ಕೆಂಪು ಕೋಟೆ ₹18.08 ಕೋಟಿ ಗಳಿಸಿದೆ



ಆಧಾರ: ಕೇಂದ್ರ ಸರ್ಕಾರವು ರಾಜ್ಯಸಭೆಗೆ ನೀಡಿದ ಮಾಹಿತಿ



## ವಕೀಲರಿಗೆ ಮೊಬೈಲ್ ಆ್ಯಪ್

ಮಂಗಳೂರು: ಮಂಗಳೂರು ವಕೀಲರ ಸಂಘವು ಸಂಘದ ಸದಸ್ಯರ ಅನುಕೂಲಕ್ಕಾಗಿ 'Mangalore Bar Association' ಮೊಬೈಲ್ ಆ್ಯಪ್ ಅನ್ನು ಅಭಿವೃದ್ಧಿಪಡಿಸಿದೆ.

ಈ ಆ್ಯಪ್ ಅನ್ನು ಜಿಲ್ಲಾ ನ್ಯಾಯಾಧೀಶ ಎಚ್.ಎಸ್. ಮಲ್ಲಿಕಾರ್ಜುನಸ್ವಾಮಿ ಅವರು ಶುಕ್ರವಾರ ಇಲ್ಲಿ ಬಿಡುಗಡೆಗೊಳಿಸಿದರು.

'ರಾಜ್ಯದಲ್ಲಿ ಈ ರೀತಿ ಆ್ಯಪ್ ಅಭಿವೃದ್ಧಿಪಡಿಸಿರುವ ಮೊದಲ ವಕೀಲರ ಸಂಘ ನಮ್ಮದು' ಎಂದು ವಕೀಲರ ಸಂಘದ ಅಧ್ಯಕ್ಷ ರಾಘವೇಂದ್ರ ಎಚ್.ವಿ. ಮಾಹಿತಿ ನೀಡಿದರು.

### ಚಿನಕುರುಳಿ

ಪ್ರಕಾಶ್ ಶೆಟ್ಟಿ




# ಆತ್ಮಹತ್ಯೆ: ಬಿಜೆಪಿಗೆ ಹೊಸ ಅಸ್ತ್ರ

## 'ಕೈ' ಶಾಸಕರ ವಿರುದ್ಧ ಕಿರುಕುಳ, ಬೆದರಿಕೆ ಆರೋಪ ● ತನ್ನೀರಾ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಡಗು ಜಿಲ್ಲೆಯ ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ (40) ಅವರು ನಗರದಲ್ಲಿ ಆತ್ಮಹತ್ಯೆ ಮಾಡಿಕೊಂಡ ಪ್ರಕರಣವು ಬಿಜೆಪಿ ಮತ್ತು ಕಾಂಗ್ರೆಸ್ ಮಧ್ಯೆ ಸಂಘರ್ಷದ ಕಿಡಿ ಹೊತ್ತಿಸಿದೆ.



ವಿನಯ್ ಸೋಮಯ್ಯ

ವಿನಯ್ ಸಾವಿಗೆ ಕೊಡಗು ಜಿಲ್ಲೆಯ ಇಬ್ಬರು ಕಾಂಗ್ರೆಸ್ ಶಾಸಕರು ಮತ್ತು ಅವರ ಬೆಂಬಲಿಗರೊಬ್ಬರು ಕಾರಣ ಎಂದು ಅವರ ಕುಟುಂಬದವರು ಆರೋಪಿಸಿದ್ದಾರೆ. ಆತ್ಮಹತ್ಯೆ ಸಂಬಂಧ, ಕಾಂಗ್ರೆಸ್ ಮುಖಂಡ ತನ್ನೀರಾ ಮೈನಾ ಎಂಬುವವರ ವಿರುದ್ಧ ಹೆಣ್ಣೂರು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ವಿನಯ್ ಆತ್ಮಹತ್ಯೆಗೂ ಮುನ್ನ ಬರೆದಿದ್ದಾರೆ ಎನ್ನಲಾದ ಪತ್ರ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ. ಅದರ ಆಧಾರದಲ್ಲಿ ಮುಖ್ಯಮಂತ್ರಿಯವರ ಕಾನೂನು ಸಲಹೆಗಾರರೂ ಆಗಿರುವ ವಿರಾಜಪೇಟೆ ಶಾಸಕ ಎ.ಎಸ್. ಪೊನ್ನಣ್ಣ ಮತ್ತು ಮಡಿಕೇರಿ ಶಾಸಕ ಡಾ. ಮಂಥರ್ ಗೌಡ ಹೆಸರನ್ನೂ ಎಫ್‌ಐಆರ್‌ನಲ್ಲಿ ಸೇರಿಸುವಂತೆ ಬಿಜೆಪಿ ಪಟ್ಟು ಹಿಡಿದಿದೆ.

11ನೇ ಪುಟ ನೋಡಿ



ಬಿಜೆಪಿ ಕಾರ್ಯಕರ್ತರು ಮಡಿಕೇರಿಯ ಜನರಲ್ ತಿಮ್ಮಯ್ಯ ವೃತ್ತದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು

### ವಿನಯ್ ವಿರುದ್ಧದ ಪ್ರಕರಣ ಏನು?

ಮಡಿಕೇರಿ: ವಾಟ್ಸ್‌ಆ್ಯಪ್‌ನಲ್ಲಿ ಪ್ರಕಟವಾದ ಪೋಸ್ಟ್ ಆಧರಿಸಿ, ಮಡಿಕೇರಿ ನಗರ ಠಾಣೆಯಲ್ಲಿ ವಿನಯ್ ಸೋಮಯ್ಯ ಅವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) 353(2), 3(5) ಅಡಿ ಫೆಬ್ರುವರಿ 5ರಂದು ಎಫ್‌ಐಆರ್ ದಾಖಲಾಗಿತ್ತು.

'ಎರಡು ಸಮುದಾಯಗಳ ನಡುವೆ ಸಂಘರ್ಷ ಉಂಟು ಮಾಡಿ ಜಿಲ್ಲೆಯಲ್ಲಿ ಶಾಂತಿ ಕದಡುವಂತಹ ಆಕ್ಷೇಪಾರ್ಹ ಸಂದೇಶವನ್ನು ಗ್ರೂಪ್‌ನಲ್ಲಿ ಹಾಕಿದ ರಾಜೇಂದ್ರ ಪಾಪು ಹಾಗೂ ಅದಕ್ಕೆ ಸಹಕರಿಸಿದ ಅಡ್ಮಿನ್‌ಗಳಾದ ವಿಷ್ಣು ನಾಚಪ್ಪ ಹಾಗೂ ವಿನಯ್ ಸೋಮಯ್ಯ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ತನ್ನೀರಾ ಮೈನಾ ದೂರು ನೀಡಿದ್ದರು.

11ನೇ ಪುಟ ನೋಡಿ

### ಮರಣ ಪತ್ರ: ಶಾಸಕರ ಹೆಸರು?

ಶಾಸಕರಾದ ಎ.ಎಸ್. ಪೊನ್ನಣ್ಣ, ಮಂಥರ್ ಗೌಡ ಹಾಗೂ ತನ್ನೀರಾ ಮೈನಾ ಅವರ ಹೆಸರನ್ನು ವಿನಯ್ ಅವರು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೂ ಮುನ್ನ ಬರೆದ ಮರಣ ಪತ್ರದಲ್ಲಿ ಉಲ್ಲೇಖಿಸಿದ್ದು, ಅದನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಮಾಡಿದ್ದರು ಎಂದು ಹೇಳಲಾಗಿದೆ.

'ವಾಟ್ಸ್‌ಆ್ಯಪ್ ಗ್ರೂಪ್‌ವೊಂದರ ಅಡ್ಮಿನ್ ಪೈಕಿ ನಾನೂ ಒಬ್ಬ (ಐದು ದಿನಗಳ ಹಿಂದೆ ಅಡ್ಮಿನ್ ಮಾಡಲಾಗಿತ್ತು). ನನ್ನನ್ನು ಹೊಣೆ ಮಾಡಿ ರಾಜಕೀಯ ಪ್ರೇರಿತವಾಗಿ ಎಫ್‌ಐಆರ್ ಹಾಕಿ ಅಡ್ಮಿನ್‌ಗಳನ್ನು ಕಿಡಿಗೇಡಿಗಳು ಅಂತ ಪರಿಚಯಿಸಿದ್ದಾರೆ' ಎಂದು ಬರೆಯಲಾಗಿದೆ.

11ನೇ ಪುಟ ನೋಡಿ

# ಕೆಪಿಸಿಸಿ: ಖಂಡ್ರೆ ಹೆಸರು ಮುನ್ನೆಲೆಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಲಿಂಗಾಯತ ಸಮುದಾಯದ ನಾಯಕರೂ ಆದ ಅರಣ್ಯ ಸಚಿವ ಈಶ್ವರ ಖಂಡ್ರೆ ಹೆಸರು ಮುನ್ನೆಲೆಗೆ ಬಂದಿದೆ. ಈ ಕುರಿತು ಮುಖ್ಯಮಂತ್ರಿಯೇ ಪಕ್ಷದ ಹೈಕಮಾಂಡ್ ಬಳಿ ಪ್ರಸ್ತಾಪ ಮಾಡಿದ್ದಾರೆ ಎನ್ನಲಾಗಿದೆ.



ಈಶ್ವರ ಖಂಡ್ರೆ

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಲೋಕಸಭಾ ಚುನಾವಣೆಯವರೆಗೆ ಕೆಪಿಸಿಸಿ ಅಧ್ಯಕ್ಷರಾಗಿ ಮುಂದುವರಿಯಲಿದ್ದಾರೆ ಎಂದು ಹೈಕಮಾಂಡ್ 2023ರಲ್ಲಿ ಪ್ರಕಟಿಸಿತ್ತು. ಲೋಕಸಭಾ ಚುನಾವಣೆ ಮುಗಿದು 10 ತಿಂಗಳು ಕಳೆದಿವೆ.

11ನೇ ಪುಟ ನೋಡಿ

### ವ್ಯಕ್ತಿಗಿಂತ ಪಕ್ಷ ಮುಖ್ಯ: ಡಿಕೆಶಿ

'ಪಕ್ಷ ಹೇಳಿದ ರೀತಿಯಲ್ಲಿ ಮುನ್ನಡೆಯುತ್ತೇನೆ. ಕೆಪಿಸಿಸಿ ಅಧ್ಯಕ್ಷನಾಗಿ ಐದು ವರ್ಷ ಸೇವೆ ಸಲ್ಲಿಸಿದ್ದೇನೆ. ಪಕ್ಷಕ್ಕೆ ಒಳ್ಳೆಯದಾಗುವುದು ಮುಖ್ಯ. ವ್ಯಕ್ತಿಗಿಂತ ಪಕ್ಷ ಮುಖ್ಯ' ಎಂದು ಶಿವಕುಮಾರ್ ಮಾರ್ಮಿಕವಾಗಿ ಹೇಳಿದರು.

ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ನಿಮ್ಮ ನಿಲುವೇನು ಎಂಬ ಪ್ರಶ್ನೆಗೆ ಅವರು ಮೇಲಿನಂತೆ ಉತ್ತರಿಸಿದರು.

'ಕಳೆದ ಹಲವಾರು ದಿನಗಳಿಂದ ಸೋನಿಯಾ ಗಾಂಧಿ ಅವರನ್ನು ಶಿವಕುಮಾರ್ ಭೇಟಿಯಾಗಿಲ್ಲ. ಭೇಟಿಯಾದರೆ ರಾಜ್ಯ ರಾಜಕಾರಣದಲ್ಲಿ ಬದಲಾವಣೆ ನಿಶ್ಚಿತ ಎಂಬ ಮಾತು ಇದೆಯಲ್ಲ' ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಭೇಟಿಯಾಗಿಲ್ಲ ಎಂದು ಹೇಳಿದವರು ಯಾರು? ಸಾಕ್ಷ್ಯವಾಗಿ ಫೋಟೊಗಳನ್ನು ತೋರಿಸಲೇ' ಎಂದು ಪ್ರಶ್ನಿಸಿದರು.

ಸದ್ಯಕ್ಕೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ಖಾಲಿ ಇಲ್ಲ. ಯಾರನ್ನು ಎಲ್ಲಿ ಕೂರಿಸಬೇಕು ಎಂಬುದು ಹೈಕಮಾಂಡ್‌ಗೆ ಗೊತ್ತಿದೆ. ಹೈಕಮಾಂಡ್ ಕೊಟ್ಟ ಜವಾಬ್ದಾರಿಯನ್ನು ನಿಭಾಯಿಸುತ್ತೇವೆ. ಸತೀಶ ಜಾರಕಿಹೊಳಿ ಆತ್ಮೀಯರು. ಕಾರ್ಯಾಧ್ಯಕ್ಷರಾಗಿ ಒಟ್ಟಿಗೆ ಕೆಲಸ ಮಾಡಿದ್ದೇವೆ. ಮುಂದೆಯೂ ಸಂಘಟನೆಗಾಗಿ ಕೆಲಸ ಮಾಡುತ್ತೇವೆ. ನಮ್ಮಲ್ಲಿ ಯಾವುದೇ ಪೈಪೋಟಿ ಇಲ್ಲ. ಯಾರೇ ಕೆಪಿಸಿಸಿ ಅಧ್ಯಕ್ಷರಾದರೂ ಖುಷಿ ಇದೆ. ಊಹಾಪೋಹದ ಪ್ರಶ್ನೆಗಳಿಗೆ ಉತ್ತರಿಸಲು ಸಾಧ್ಯವಿಲ್ಲ.

**ಈಶ್ವರ ಖಂಡ್ರೆ,** ಅರಣ್ಯ ಸಚಿವ

# ಕಾಫಿ, ಚಹಾದ ಜತೆಗೆ ತಿಂಡಿ ದರ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡೀಸೆಲ್, ಹಾಲು, ವಿದ್ಯುತ್ ಹಾಗೂ ಅಗತ್ಯ ವಸ್ತುಗಳ ದರ ಹೆಚ್ಚಳದ ಕಾರಣ ಕಾಫಿ, ಚಹಾ ಜತೆಗೆ ತಿಂಡಿಗಳ ದರವನ್ನು ಗರಿಷ್ಠ ₹5ರಷ್ಟು ಹೆಚ್ಚಿಸಲು ಹೋಟೆಲ್ ಮಾಲೀಕರು ನಿರ್ಧರಿಸಿದ್ದಾರೆ.

ಗ್ರಾಹಕರಿಗೆ ಹೊರೆಯಾಗದಂತೆ ದರ ಹೆಚ್ಚಿಸಲು ಬೃಹತ್ ಬೆಂಗಳೂರು ಹೋಟೆಲುಗಳ ಸಂಘ, ಹೋಟೆಲ್ ಮಾಲೀಕರಿಗೆ ನಿರ್ದೇಶನ ನೀಡಿದೆ. ಕಾಫಿ ಪುಡಿಯ ದರ ಹೆಚ್ಚಳವಾದ ಕಾರಣ ಎಲ್ಲ ಹೋಟೆಲ್‌ಗಳಲ್ಲಿ ಕಾಫಿ ದರವನ್ನು ಶೇ 10ರಿಂದ ಶೇ 15ರಷ್ಟು ಅಥವಾ ₹2ರಿಂದ ₹3 ಹೆಚ್ಚಳ ಮಾಡುವಂತೆ ಸಂಘವು ಸೂಚಿಸಿತ್ತು. ಇದರ ಬೆನ್ನಲ್ಲಿಯೇ ಹಲವು ಹೋಟೆಲ್‌ಗಳು ಕಾಫಿ ದರವನ್ನು ಹೆಚ್ಚಳ ಮಾಡಿದ್ದವು. ಈಗ ಹಾಲಿನ ದರವೂ ಏರಿದ ಕಾರಣ ಉಳಿದ ಹೋಟೆಲ್‌ಗಳು ಸಹ ಕಾಫಿ ಜತೆಗೆ ಚಹಾದ ದರವನ್ನೂ ₹2ರಿಂದ ₹3ರವರೆಗೆ ಹೆಚ್ಚಿಸಿವೆ.

ತಿಂಡಿ ದರಗಳನ್ನು ₹3ರಿಂದ ₹5ರವರೆಗೆ ಹೆಚ್ಚಳ ಮಾಡುವಂತೆ ಸಂಘವು ಹೋಟೆಲ್‌ಗಳಿಗೆ ತಿಳಿಸಿದೆ. ಇದರಿಂದಾಗಿ ಹೋಟೆಲ್‌ಗಳು ಶೀಘ್ರದಲ್ಲಿಯೇ ಗರಿಷ್ಠ ₹5ರವರೆಗೂ ದರ ಹೆಚ್ಚಿಸಲಿವೆ.

7ನೇ ಪುಟ ನೋಡಿ

# ಹೆಚ್ಚಾದ ಕಟೌಟ್, ಬ್ಯಾನರ್ ಹಾವಳಿ

## ಡಿಸಿಎಂ ಡಿ.ಕೆ. ಶಿವಕುಮಾರ್ ಆದೇಶ ನಿರ್ಲಕ್ಷ್ಯ; ತೆರವಿಗೆ ಮುಂದಾಗದ ಬಿಬಿಎಂಪಿ ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದ ಹಲವೆಡೆ ಶುಭ ಕೋರುವ ಫ್ಲೆಕ್ಸ್ ರಾರಾಜಿಸುತ್ತಿವೆ. ಸಚಿವರು, ಶಾಸಕರು, ಸ್ಥಳೀಯ ಮುಖಂಡರ ಹೆಸರಿನಲ್ಲಿ ಎಲ್ಲ ಪಕ್ಷಗಳ ನಾಯಕರಿರುವ ಫ್ಲೆಕ್ಸ್ ತೆರವುಗೊಳಿಸಲು ಬಿಬಿಎಂಪಿ ಅಧಿಕಾರಿಗಳು ಹಿಂಜರಿಯುತ್ತಿದ್ದಾರೆ.

ಮೈಸೂರು ರಸ್ತೆಯಲ್ಲಿರುವ ಗಾಳಿ ಆಂಜನೇಯ ದೇವಸ್ಥಾನದ ಸುತ್ತಮುತ್ತ ಕಾಂಗ್ರೆಸ್, ಬಿಜೆಪಿ ನಾಯಕರ ಕಟೌಟ್ ಹಾಗೂ ಬ್ಯಾನರ್‌ಗಳ ಹಾವಳಿ ಹೆಚ್ಚಾಗಿದ್ದು, ಹಲವೆಡೆ ರಸ್ತೆಯಲ್ಲೇ ಅಳವಡಿಸಿರುವುದರಿಂದ ಸಂಚಾರ ದಟ್ಟಣೆಗೂ ಕಾರಣವಾಗಿದೆ.

ಅರಮನೆ ಮೈದಾನದಲ್ಲಿ ಯುವ ಕಾಂಗ್ರೆಸ್ ಸಮಿತಿ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ನಡೆದಾಗ ಬಳ್ಳಾರಿ ರಸ್ತೆಯುದ್ದಕ್ಕೂ ಫ್ಲೆಕ್ಸ್, ಬ್ಯಾನರ್‌ಗಳನ್ನು ಅಳವಡಿಸಲಾಗಿತ್ತು. ಅದನ್ನು ಕಂಡಿದ್ದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಎಲ್ಲವನ್ನೂ ತೆರವುಗೊಳಿಸಿ, ದಂಡ ಹಾಕಿ, ಎಫ್‌ಐಆರ್ ದಾಖಲಿಸಲು ಸೂಚಿಸಿದ್ದರು. ಅದರಂತೆ 12 ಎಫ್‌ಐಆರ್ ದಾಖಲಿಸುವ ಜೊತೆಗೆ ₹12 ಲಕ್ಷ ದಂಡವನ್ನೂ ಬಿಬಿಎಂಪಿ ಅಧಿಕಾರಿಗಳು ವಿಧಿಸಿದ್ದರು.

ಮೈಸೂರು ರಸ್ತೆ–ಬಿಎಚ್‌ಇಎಲ್ ಜಂಕ್ಷನ್‌ನಲ್ಲಿ ಶಾಸಕ ಎಂ. ಕೃಷ್ಣಪ್ಪ ಹಾಗೂ ಅವರ ಮಕ್ಕಳಿಬ್ಬರ ಬೃಹತ್ ಕಟೌಟ್‌ಗಳನ್ನು ಸಂಚಾರ ದಟ್ಟಣೆ ನಿರ್ವಹಣೆಗೆ ಅಳವಡಿಸಿರುವ ಅತ್ಯಾಧುನಿಕ ತಂತ್ರಜ್ಞಾನದ ಕ್ಯಾಮೆರಾಗಳಿಗೆ ಅಡ್ಡಲಾಗಿ ಹಾಕಲಾಗಿದೆ.

ಈ ಜಂಕ್ಷನ್ ಅನ್ನು ಸುಮಾರು ₹20 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದ್ದು, ಚನ್ನಪಟ್ಟಣ ಗೊಂಬೆಗಳ ಪ್ರತಿಕೃತಿಗಳನ್ನೂ ಅಳವಡಿಸಲಾಗುತ್ತಿದೆ. ಆದರೆ, ಜಂಕ್ಷನ್‌ನಲ್ಲಿ ಕಟೌಟ್ ಹಾಗೂ ಬ್ಯಾನರ್ ಸದಾ ಕಾಲವೂ ರಾರಾಜಿಸುತ್ತಿರುತ್ತವೆ. ಬಿಬಿಎಂಪಿ ತೆರವು ಮಾಡುವುದಿಲ್ಲ ಎಂಬುದು ಸ್ಥಳೀಯರ ಆರೋಪ.

‘ವಿಜಯನಗರ, ಗೋವಿಂದರಾಜ ನಗರ, ಮೈಸೂರು ರಸ್ತೆ, ಜಂಕ್ಷನ್, ಪ್ರದೇಶಗಳಲ್ಲಿ ಶುಭ ಕೋರಿ ಫ್ಲೆಕ್ಸ್ ಹಾಕಲಾಗಿದೆ. ನಾಗರಿಕರು ಈ ಬಗ್ಗೆ ದೂರು ನೀಡಿದ್ದರೂ, ಬಿಬಿಎಂಪಿ ಅಧಿಕಾರಿಗಳು ತೆರವುಗೊಳಿಸಲು ಮುಂದಾಗುತ್ತಿಲ್ಲ. ಸಚಿವರು ಹೇಳಿದಾಗ ಮಾತ್ರ ಒಂದೆರಡು ದಿನ ಫ್ಲೆಕ್ಸ್ ತೆರವು ಕಾರ್ಯಾಚರಣೆ ನಡೆಸುತ್ತಾರೆ. ಬಿಬಿಎಂಪಿ ಅಧಿಕಾರಿಗಳು ಈ ವಿಷಯದಲ್ಲಿ ಜನರ ಕಣ್ಣೊರೆಸುವ ತಂತ್ರ ಮಾಡುತ್ತಿದ್ದಾರೆ. ನಂತರ ಫ್ಲೆಕ್ಸ್ ರಾರಾಜಿಸುತ್ತಲೇ ಇರುತ್ತವೆ’ ಎಂದು ವಿಜಯನಗರ ನಿವಾಸಿ ವಿಶ್ವನಾಥ ದೂರಿದರು.

‘ಸಚಿವರು ಹಾಗೂ ಶಾಸಕರ ಹೆಸರಿನಲ್ಲೇ ಹಲವು ಫ್ಲೆಕ್ಸ್ ಇವೆ. ಅವುಗಳನ್ನು ತೆರವುಗೊಳಿಸಲು ಮುಂದಾದರೆ ಹಿರಿಯ ಅಧಿಕಾರಿಗಳಿಂದ ನಮಗೆ ಒತ್ತಡಹಾಕಿ, ತೆರವುಗೊಳಿಸದಂತೆ ತಡೆಯಲಾಗುತ್ತದೆ.

ಕೆಲವು ಬಾರಿ ಅವರೇ ಕರೆ ಮಾಡಿ ಬೈಯ್ಯುತ್ತಾರೆ. ಇನ್ನು ಅವರಿಗೆ ದಂಡ ವಿಧಿಸುವುದು, ಕ್ರಮ ತೆಗೆದುಕೊಳ್ಳುವುದು ಕಷ್ಟಸಾಧ್ಯ. ಅವರ ಆಪ್ತರಿಗೆ ನೋಟಿಸ್ ಕೊಟ್ಟರೂ ಅದು ಪ್ರಯೋಜನಕ್ಕೆ ಬರುವುದಿಲ್ಲ’ ಎಂದು ಹೆಸರು ಹೇಳಲು ಇಚ್ಛಿಸದ ಬಿಬಿಎಂಪಿಯ ಅಧಿಕಾರಿಗಳು ಅಳಲು ತೋಡಿಕೊಂಡರು.





ಗಾಳಿ ಆಂಜನೇಯ ದೇವಸ್ಥಾನದ ಸುತ್ತಮುತ್ತ ರಾಜಕಾರಣಿಗಳು ಶುಭ ಕೋರುವ ಫ್ಲೆಕ್ಸ್ ರಾರಾಜಿಸುತ್ತಿವೆ (ಎಡಚಿತ್ರ) ಮೈಸೂರು ರಸ್ತೆ ಬಿಎಚ್‌ಇಎಲ್ ಜಂಕ್ಷನ್‌ನಲ್ಲಿ ಅಳವಡಿಸಲಾಗಿರುವ ಕಟೌಟ್‌ಗಳು ಪ್ರಜಾವಾಣಿ ಚಿತ್ರ

## ‘ಕೆರೆಗಳಿಗೆ ಕೊಳಚೆ ನೀರು ಹರಿಸಿದರೆ ದಂಡ’

**ಯಲಹಂಕ:** ಕೆರೆಗಳಿಗೆ ಕೊಳಚೆ ನೀರು ಬಿಡುವವರಿಗೆ ₹5 ಲಕ್ಷದವರೆಗೆ ದಂಡ ವಿಧಿಸುವುದರ ಜೊತೆಗೆ ಒಳಚರಂಡಿ ಸಂಪರ್ಕವನ್ನು ಕಡಿತಗೊಳಿಸಲಾಗುವುದು’ ಎಂದು ಶಾಸಕ ಎಸ್.ಆರ್.ವಿಶ್ವನಾಥ್ ಎಚ್ಚರಿಸಿದರು.

ಹಾರೋಹಳ್ಳಿ ಕೆರೆಯ ಆವರಣದಲ್ಲಿ ಅಳವಡಿಸಿರುವ ವಿದ್ಯುತ್ ದೀಪಗಳನ್ನು ಉದ್ಘಾಟಿಸಿ ಮಾತನಾಡಿದ ಅವರು,‘ಕ್ಷೇತ್ರ ವ್ಯಾಪ್ತಿಯಲ್ಲಿರುವ ಕೆರೆಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಸಾರ್ವಜನಿಕರು ಕೆರೆಗಳಿಗೆ ಕೊಳಚೆ ನೀರು ಸೇರದಂತೆ ಗಮನಹರಿಸಬೇಕು. ಕೆರೆಗಳು ಉಳಿದರೆ ನಮಗೆಲ್ಲ ಕುಡಿಯುವ ನೀರು ಸಿಗುತ್ತದೆ. ಪರಿಸರ ಚೆನ್ನಾಗಿರುತ್ತದೆ’ ಎಂದರು.

## ಪೌರಕಾರ್ಮಿಕರ ಸಮಾವೇಶ 7ರಂದು

**ಬೆಂಗಳೂರು:** ಕರ್ನಾಟಕ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘವು ಇದೇ 7ರಂದು ಬೆಳಿಗ್ಗೆ 11 ಗಂಟೆಗೆ ಅರಮನೆ ಮೈದಾನದಲ್ಲಿ (ಗಾಯತ್ರಿ ವಿಹಾರ) ಬೆಳ್ಳಿ ಮಹೋತ್ಸವ ಹಾಗೂ ಬೃಹತ್ ಸಮಾವೇಶ ಹಮ್ಮಿಕೊಂಡಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಮೈಸೂರು ನಾರಾಯಣ, ‘ಸಮಾವೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸುವರು.ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆ ವಹಿಸುತ್ತಾರೆ. ರಾಜ್ಯದಲ್ಲಿ 38 ಸಾವಿರ ಪೌರಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರಲ್ಲಿ 29 ಸಾವಿರ ಪೌರಕಾರ್ಮಿಕರ ಸೇವೆಯನ್ನು ಕಾಯಂಗೊಳಿಸಲಾಗಿದೆ. ಬಾಕಿ ಉಳಿದಿರುವ 9 ಸಾವಿರ ಪೌರಕಾರ್ಮಿಕರ ಸೇವೆಯನ್ನು ಕಾಯಂಗೊಳಿಸಬೇಕು’ ಎಂದು ಆಗ್ರಹಿಸಿದರು.

‘ಪೌರಕಾರ್ಮಿಕರಿಗೆ ಕೂಡ ಸರ್ಕಾರಿ ನೌಕರರಿಗೆ ನೀಡುವ ಆರೋಗ್ಯ ವಿಮೆ, ಬೆಳಗಿನ ಉಪಾಹಾರದಂತಹ ಯೋಜನೆಯನ್ನು ಜಾರಿ ಮಾಡಬೇಕು. ಕಸದ ವಾಹನ ಚಾಲಕರು, ನಿರ್ವಾಹಕರು ಸೇರಿ ಎಲ್ಲ ಸ್ವಚ್ಛತಾ ಕಾರ್ಮಿಕರ ಸೇವೆಯನ್ನು ಕಾಯಂಗೊಳಿಸಲು ಕ್ರಮ ಕೈಗೊಳ್ಳಬೇಕು. ಈ ಬಗ್ಗೆ ಸಮಾವೇಶದಲ್ಲಿಯೂ ಸರ್ಕಾರಕ್ಕೆ ಆಗ್ರಹಿಸಲಾಗುವುದು. ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ಹೋರಾಟ ನಡೆಸಲಾಗುವುದು’ ಎಂದು ಹೇಳಿದರು.

## ಡಿಎಂಕೆ ಜೊತೆ ರಾಜಕೀಯ ಮೈತ್ರಿಯಷ್ಟೇ: ಡಿಕೆಶಿ

**ನವದೆಹಲಿ:** ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಸಹಕಾರ ನೀಡುವಂತೆ ಇಂಡಿಯಾ ಮೈತ್ರಿಕೂಟದ ಡಿಎಂಕೆಯ ಮನವೊಲಿಸುವ ಸಾಧ್ಯತೆಯನ್ನು ತಳ್ಳಿ ಹಾಕಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ‘ಡಿಎಂಕೆಯೊಂದಿಗೆ ನಮ್ಮದು ರಾಜಕೀಯ ಉದ್ದೇಶದ ಮೈತ್ರಿ ಅಷ್ಟೇ’ ಎಂದು ಸ್ಪಷ್ಟಪಡಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಒಟ್ಟಿಗೆ ಕೆಲಸ ಮಾಡುವುದು ಬಿಡುವುದು ಅವರಿಗೆ ಬಿಟ್ಟ ವಿಚಾರ. ಅವರ ರಾಜಕಾರಣ ಅವರು ಮಾಡುತ್ತಾರೆ. ನಮ್ಮ ರಾಜಕಾರಣ ನಾವು ಮಾಡುತ್ತೇವೆ’ ಎಂದು ತಿಳಿಸಿದರು.

‘ಮೇಕೆದಾಟು ವಿಚಾರದಲ್ಲಿ 15 ದಿನಗಳಲ್ಲಿ ಕರ್ನಾಟಕದ ವಾದ ಆಲಿಸುವುದಾಗಿ ಸುಪ್ರೀಂ ಕೋರ್ಟ್ ಹೇಳಿತ್ತು. ಆದರೆ, ದಿನಾಂಕ ನಿಗದಿ ಮಾಡಿಲ್ಲ. ತಮಿಳುನಾಡಿನವರು ರಾಜಕೀಯವಾಗಿ ಸಹಕಾರ ನೀಡುವುದಿಲ್ಲ ಎಂಬುದು ಗೊತ್ತಿದೆ. ಅವರು ಸಣ್ಣಪುಟ್ಟ ಅಣೆಕಟ್ಟುಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ. ಇದರ ಬಗ್ಗೆ ನಾವು ತೊಂದರೆ ಕೊಡುವುದಿಲ್ಲ. ಈ ವಿಚಾರವನ್ನೂ ಸಚಿವರ ಗಮನಕ್ಕೆ ತರಲಾಗಿದೆ’ ಎಂದರು.

‘ಆಲಮಟ್ಟಿ ಅಣೆಕಟ್ಟು ಎತ್ತರ ಮಾಡಲು ಗೆಜೆಟ್ ಅಧಿಸೂಚನೆ ಹೊರಡಿಸಬೇಕು ಎಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೇವೆ. ಕೇಂದ್ರ ಜಲಶಕ್ತಿ ಸಚಿವರು ಕೃಷ್ಣಾ ನದಿ ಜಲಾನಯನ ಪ್ರದೇಶದ ರಾಜ್ಯಗಳ ಪ್ರತಿನಿಧಿಗಳನ್ನು ಕರೆಸಿ ಅಣೆಕಟ್ಟು ಎತ್ತರ ಹೆಚ್ಚಳದ ಬಗ್ಗೆ 15 ದಿನಗಳಲ್ಲಿ ಸಭೆ ನಡೆಸಿ ಚರ್ಚಿಸುವುದಾಗಿ ಭರವಸೆ ನೀಡಿದ್ದಾರೆ’ ಎಂದರು.

# ಕರಗ ಮಹೋತ್ಸವಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಇತಿಹಾಸ ಪ್ರಸಿದ್ಧ ಬೆಂಗಳೂರು ಕರಗ ಮಹೋತ್ಸವಕ್ಕೆ ಧ್ವಜಾರೋಹಣದ ಮೂಲಕ ಶುಕ್ರವಾರ ಚಾಲನೆ ದೊರೆಯಿತು.

ತಿಗಳರಪೇಟೆಯ ಧರ್ಮರಾಯ ಸ್ವಾಮಿ ದೇವಸ್ಥಾನದಲ್ಲಿ ಶುಕ್ರವಾರ ರಾತ್ರಿ ಧ್ವಜಾರೋಹಣ ಹಾಗೂ ರಥೋತ್ಸವ ನೆರವೇರಿತು. ಏ.12ರ ಶನಿವಾರ ರಾತ್ರಿ ಕರಗ ಶಕ್ತ್ಯೋತ್ಸವ, ಧರ್ಮರಾಯಸ್ವಾಮಿ ಮಹಾರಥೋತ್ಸವ ನಡೆಯಲಿದೆ.

ಲಕ್ಷಾಂತರ ಜನರು ಸೇರುವ ಕರಗ ಉತ್ಸವವನ್ನು ವಿಜೃಂಭಣೆಯಿಂದ ಆಯೋಜಿಸಲಾಗುತ್ತಿದೆ. ಧರ್ಮರಾಯ ಸ್ವಾಮಿ ದೇವಸ್ಥಾನಕ್ಕೆ ವಿದ್ಯುತ್ ದೀಪಾಲಂಕಾರ ಮಾಡಲಾಗಿದ್ದು, ಮುಂಭಾಗದಲ್ಲಿ ಭಕ್ತರು ನಿಲ್ಲುವುದಕ್ಕೆ ಹೆಂಚಿನ ಚಾವಣಿಯನ್ನು ಬಾಲಕೃಷ್ಣ ಅವರ ನೆರವಿನೊಂದಿಗೆ ಅಳವಡಿಸಲಾಗಿದೆ ಎಂದು ಧರ್ಮರಾಯ ಸ್ವಾಮಿ ದೇವಾಲಯದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೆ. ಸತೀಶ್ ತಿಳಿಸಿದರು.

ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ವತಿಯಿಂದ ಭಕ್ತಾದಿಗಳಿಗೆ, ವೀರಕುಮಾರರಿಗೆ ಹಣ್ಣುಗಳ ವಿತರಣೆ ಮಾಡಲಾಗುತ್ತದೆ. ವೀರಕುಮಾರರಿಗೆ ಆರತಿ ದೀಪದ ದಿನ ಹಾಗೂ ಹಸಿ ಕರಗದ ದಿನ ಕರಗದ ವಸ್ತ್ರ ವಿತರಿಸಲಾಗುತ್ತದೆ. ದೀಕ್ಷೆ ಪಡೆದವರಿಗೆ ದೇವಸ್ಥಾನದ ವತಿಯಿಂದ ಖಡ್ಗ ನೀಡಲಾಗುತ್ತದೆ ಎಂದರು.

ವಹ್ನಿ ಕುಲ ಕ್ಷತ್ರಿಯ ಮಹಿಳೆಯರ ಬೇಡಿಕೆಯನುಸಾರ, ಪ್ರಥಮ ಬಾರಿಗೆ ದೇವಸ್ಥಾನದ ವತಿಯಿಂದ ಒಂದು ಮನೆಗೆ ಒಂದು ಆರತಿ ದೀಪವನ್ನು ಉಚಿತವಾಗಿ ನೀಡಲಾಗುತ್ತದೆ. ಒಂಬತ್ತು ದಿನದ ಮಹೋತ್ಸವದಲ್ಲಿ ಪ್ರತಿ ದಿನ ಸಂಜೆ ಭಕ್ತರಿಗೆ ಶಾಸಕ ಎನ್.ಎ. ಹ್ಯಾರಿಸ್ ಅವರು ದಾಸೋಹ ಆಯೋಜಿಸಿದ್ದಾರೆ ಎಂದು ಸತೀಶ್ ಹೇಳಿದರು.



ಕರಗ ಮಹೋತ್ಸವದ ಸಿದ್ಧತೆಯಲ್ಲಿ ತೊಡಗಿದ್ದ ಕಾರ್ಮಿಕರು ಪ್ರಜಾವಾಣಿ ಚಿತ್ರ

### ಕಾರ್ಯಕ್ರಮಗಳ ವಿವರ

- **ಏಪ್ರಿಲ್ 5ರಿಂದ 8:** ಪ್ರತಿದಿನ ರಾತ್ರಿ 7.30ಕ್ಕೆ ವಿಶೇಷ ಪೂಜೆ ಮತ್ತು ಮಹಾಮಂಗಳಾರತಿ
- **ಏಪ್ರಿಲ್ 9:** ರಾತ್ರಿ 3ಕ್ಕೆ ಆರತಿ ದೀಪೋತ್ಸವ
- **ಏಪ್ರಿಲ್ 10:** ರಾತ್ರಿ 3ಕ್ಕೆ ಸಂಪಂಗಿಕೆರೆ ಅಂಗಳದ ಶಕ್ತಿ ಪೀಠದಲ್ಲಿ ‘ಹಸಿ ಕರಗ’
- **ಏಪ್ರಿಲ್ 12:** ರಾತ್ರಿ 12.30ಕ್ಕೆ ಕರಗ ಶಕ್ತ್ಯೋತ್ಸವ ಮತ್ತು ಶ್ರೀ ಧರ್ಮರಾಯ ಸ್ವಾಮಿ ರಥೋತ್ಸವ
- **ಏಪ್ರಿಲ್ 13:** ರಾತ್ರಿ 2 ಹಾಗೂ 4ಕ್ಕೆ ಪ್ರವಚನ, ದೇವಸ್ಥಾನದಲ್ಲಿ ಗಾವು ಶಾಂತಿ
- **ಏಪ್ರಿಲ್ 14:** ಸಂಜೆ 4 ಹಾಗೂ ರಾತ್ರಿ 12ಕ್ಕೆ ವಸಂತೋತ್ಸವ ಧ್ವಜಾರೋಹಣ

## ‘ವಿಕಸಿತ ಭಾರತ ಯುವ ಸಂಸತ್’

ಪ್ರಜಾವಾಣಿ ವಾರ್ತೆ

**ಯಲಹಂಕ:** ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನಾ ಘಟಕದ ವತಿಯಿಂದ ಜಿಲ್ಲಾಮಟ್ಟದ ‘ವಿಕಸಿತ ಭಾರತ ಯುವ ಸಂಸತ್-2025’ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಬೆಂಗಳೂರು ಗ್ರಾಮಾಂತರ, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳ ವ್ಯಾಪ್ತಿಯ 50ಕ್ಕೂ ಹೆಚ್ಚು ಕಾಲೇಜು ಹಾಗೂ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ‘ಒಂದು ರಾಷ್ಟ್ರ-ಒಂದು ಚುನಾವಣೆ’ ವಿಷಯದ ಕುರಿತು ಅಭಿಪ್ರಾಯಗಳನ್ನು ಯುವ ಅಭ್ಯರ್ಥಿಗಳು ಹಂಚಿಕೊಂಡರು. ಅಂತಿಮವಾಗಿ ಜಿಲ್ಲಾಮಟ್ಟದ ಸುತ್ತಿಗೆ 150 ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಸಾಮಾಜಿಕ ಕಾರ್ಯಕರ್ತೆ ಬೃಂದಾ ಅಡಿಗೆ ಹಾಗೂ ನೆಹರೂ ಯುವಕೇಂದ್ರದ ನಿರ್ದೇಶಕ ಅಶೋಕ್‌ಕುಮಾರ್ ತ್ಯಾಗಿ ಅವರು, ರಾಷ್ಟ್ರ ನಿರ್ಮಾಣದಲ್ಲಿ ಯುವಕರ ಪಾತ್ರದ ಮಹತ್ವದ್ದು ಎಂದರು. ಸಹ ಉಪಕುಲಪತಿ ಡಾ. ವಿದ್ಯಾಶಂಕರ್ ಶೆಟ್ಟಿ ಮಾತನಾಡಿದರು. ಕೇಂದ್ರ ಯುವಜನ ಮತ್ತು ಕ್ರೀಡಾ ಸಚಿವಾಲಯ, ರಾಷ್ಟ್ರೀಯ ಸೇವಾ ಯೋಜನೆ ಮತ್ತು ನೆಹರೂ ಯುವಕೇಂದ್ರ ಸಂಘಟನೆ ಸಹಯೋಗದಲ್ಲಿ ಕಾರ್ಯಕ್ರಮ ನಡೆಯಿತು. ಕುಲಸಚಿವ ಸಮೀನ ನೂರ್ ಅಹ್ಮದ್ ಪನಾಲಿ, ಡೀನ್ ಅನು ಸುಖ್‌ದೇವ್, ಎನ್‌ಎಸ್‌ಎಸ್ ಸಮನ್ವಯಾಧಿಕಾರಿ ರೇಣುಕ ಭಾಗ್ವತ್ ಇದ್ದರು.

ಯಲಹಂಕ, ಅಶೋಕನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರತ್ಯೇಕ ಅಪಘಾತ

# ಸೆಕ್ಯೂರಿಟಿ ಗಾರ್ಡ್, ಜಿಮ್ ತರಬೇತುದಾರ ಸಾವು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

**ಬೆಂಗಳೂರು:** ಯಲಹಂಕ ಹಾಗೂ ಅಶೋಕನಗರ ಸಂಚಾರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ನಡೆದ ಪ್ರತ್ಯೇಕ ಅಪಘಾತ ಪ್ರಕರಣಗಳಲ್ಲಿ ಸೆಕ್ಯೂರಿಟಿ ಗಾರ್ಡ್ ಮತ್ತು ಜಿಮ್ ತರಬೇತುದಾರ ಮೃತಪಟ್ಟಿದ್ದಾರೆ.

ಯಲಹಂಕ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಅಪಘಾತದಲ್ಲಿ ಮಣಿಪಾಲ್ ಅಕಾಡೆಮಿಯ ಸೆಕ್ಯೂರಿಟಿ ಗಾರ್ಡ್, ಅಸ್ಸಾಂನ ಅನೂಪ್(33) ಎಂಬುವವರು ಮೃತಪಟ್ಟಿದ್ದಾರೆ.

ಅನೂಪ್ ಅವರು ಕೆಲಸ ಮುಗಿಸಿಕೊಂಡು ಅಭಿಷೇಕ್ (28) ಅವರ ಜತೆಗೆ ಗುರುವಾರ ರಾತ್ರಿ ಬೈಕ್‌ನಲ್ಲಿ ತೆರಳುತ್ತಿದ್ದಾಗ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರೂ ಕೆಳಕ್ಕೆ ಬಿದ್ದಿದ್ದರು. ಗಂಭೀರವಾಗಿ ಗಾಯಗೊಂಡಿದ್ದ ಅನೂಪ್ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಯಲಹಂಕದ ನಿಟ್ಟೆ ಮೀನಾಕ್ಷಿ ಕಾಲೇಜು ಮುಖ್ಯರಸ್ತೆಯಲ್ಲಿ ಅಪಘಾತ ಸಂಭವಿಸಿದೆ. ಗಾಯಗೊಂಡಿರುವ ಅಭಿಷೇಕ್ ಅವರನ್ನು ಯಲಹಂಕದ ಶ್ರೀ ಸಾಯಿ ಅಶ್ವಿನಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಪೊಲೀಸರು ಹೇಳಿದರು. ಅತಿ ವೇಗದ ಚಾಲನೆಯೇ ಅಪಘಾತಕ್ಕೆ ಕಾರಣವೆಂದು ಪೊಲೀಸರು ತಿಳಿಸಿದ್ದಾರೆ.

**ಜಿಮ್ ತರಬೇತುದಾರ ಸಾವು:** ಅಶೋಕನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಶುಕ್ರವಾರ ಮುಂಜಾನೆ ಸಂಭವಿಸಿದ ಅಪಘಾತದಲ್ಲಿ ಜಿಮ್ ತರಬೇತುದಾರ ಮೃತಪಟ್ಟಿದ್ದಾರೆ.

ಬೊಮ್ಮನಹಳ್ಳಿಯ ಹೊಸಪಾಳ್ಯದ ಮೂರನೇ ಕ್ರಾಸ್ ನಿವಾಸಿ ಅಭಿಷೇಕ್ (29) ಮೃತಪಟ್ಟವರು.

'ಹೊಸೂರು ಲಷ್ಕರ್ ರಸ್ತೆಯ ಪೋತಲಪ್ಪ ಗಾರ್ಡನ್ ಕಡೆಯಿಂದ ಆನೆಪಾಳ್ಯ ಜಂಕ್ಷನ್ ಕಡೆಗೆ ಸ್ಕೂಟರ್‌ನಲ್ಲಿ ತೆರಳುತ್ತಿದ್ದರು. ಆಗ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು, ವಾಹನ ಸಮೇತ ರಸ್ತೆಗೆ ಉರುಳಿ ಬಿದ್ದಿದ್ದರು. ಅಭಿಷೇಕ್ ಅವರ ತಲೆ, ಹಣೆ ಹಾಗೂ ಮುಖಕ್ಕೆ ತೀವ್ರವಾದ ಗಾಯಗಳಾಗಿದ್ದವು. ಸ್ಥಳೀಯರು ಅಭಿಷೇಕ್ ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿ ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದರು.

## ಸುಲಿಗೆಗೆ ಯತ್ನ: ಇಬ್ಬರ ಬಂಧನ

**ಬೆಂಗಳೂರು:** ಖಾಸಗಿ ಕ್ಷಣಗಳ ವಿಡಿಯೊಗಳನ್ನು ಜಾಲತಾಣದಲ್ಲಿ ಹರಿಯಬಿಡುವುದಾಗಿ ಹಿರಿಯ ನಾಗರಿಕರೊಬ್ಬರನ್ನು ಬೆದರಿಸಿ, ಹಣ ಸುಲಿಗೆಗೆ ಯತ್ನಿಸಿದ ಇಬ್ಬರು ಆರೋಪಿಗಳನ್ನು ಕೋರಮಂಗಲ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೋರಮಂಗಲದ 68 ವರ್ಷದ ವ್ಯಕ್ತಿಯ ದೂರು ಆಧರಿಸಿ ಆರೋಪಿಗಳಾದ ಅಜಯ್ ಕುಮಾರ್, ಅಭಿ ಅವರನ್ನು ಬಂಧಿಸಲಾಗಿದೆ. ತಲೆ ಮರೆಸಿಕೊಂಡಿರುವ ಮತ್ತೊಬ್ಬ ಆರೋಪಿ, ಚಾಲಕ ಮೋಹನ್ ಪತ್ತೆಗೆ ಶೋಧ ಕಾರ್ಯ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'20 ದಿನಗಳ ಹಿಂದೆ ಅಜಯ್ ಕುಮಾರ್ ಮತ್ತು ಅಭಿ ಎಂಬುವವರು ದಾವಣಗೆರೆಯಲ್ಲಿ ನನ್ನನ್ನು ಭೇಟಿ ಮಾಡಿ, ಖಾಸಗಿ ವಿಡಿಯೊ ಬಗ್ಗೆ ಚರ್ಚಿಸಿದರು. ಕೆಲವು ವಿಡಿಯೊಗಳನ್ನು ನನ್ನ ವಾಟ್ಸ್‌ಆ್ಯಪ್‌ಗೆ ಕಳುಹಿಸಿದರು. ಅವುಗಳನ್ನು ಬಿಡುಗಡೆ ಮಾಡದಿರಲು ₹2 ಕೋಟಿ ನೀಡುವಂತೆ ಬೆದರಿಕೆ ಹಾಕಿದರು. ಆದರೆ ನಾನು ಆ ವಿಡಿಯೊಗಳನ್ನು ನೋಡಿದಾಗ, ಅದು ಎಡಿಟ್ ಮಾಡಿರುವುದು ಎಂಬುದು ಗೊತ್ತಾಯಿತು' ಎಂದು ದೂರಿನಲ್ಲಿ ತಿಳಿಸಿದ್ದಾರೆ.

'ಮಾರ್ಚ್ 17ರಂದು ಕೋರಮಂಗಲದ ಕಾಫಿ ಬಾರ್‌ನಲ್ಲಿ ನನ್ನನ್ನು ಭೇಟಿ ಮಾಡಿದ ಆರೋಪಿ ಅಜಯ್, ₹2 ಕೋಟಿಗೆ ಬೇಡಿಕೆ ಇರಿಸಿ, ಮಾತುಕತೆ ಬಳಿಕ ₹40 ಲಕ್ಷ ನೀಡುವಂತೆ ಕೇಳಿದ. ಹಣ ನೀಡದಿದ್ದರೆ 2–3 ದಿನಗಳಲ್ಲಿ ವಿಡಿಯೊಗಳನ್ನು ಬಿಡುಗಡೆ ಮಾಡುವುದಾಗಿ ಬೆದರಿಸಿದ' ಎಂದು ಹೇಳಿದ್ದಾರೆ.

ಆರೋಪಿಯ ಮೊಬೈಲ್ ಪರಿಶೀಲನೆ ನಡೆಸಲಾಗಿದ್ದು, ದೂರುದಾರರಿಗೆ ಸಂಬಂಧಿಸಿದ ಖಾಸಗಿ ವಿಡಿಯೊ ಪತ್ತೆಯಾಗಿಲ್ಲ. ಆರೋಪಿಗಳು ನಕಲಿ ವಿಡಿಯೊ ತೋರಿಸಿ ಬೆದರಿಸಿದ್ದಾರೆ ಎಂದು ಪೊಲೀಸರು ತಿಳಿಸಿದರು.

# ಸಿಸಿಬಿ ಕಾರ್ಯಾಚರಣೆ ಎಂಟು ಮಂದಿ ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಉದ್ಯೋಗ ಅರಸಿ ನಗರಕ್ಕೆ ಬರುತ್ತಿದ್ದ ಹೆಣ್ಣುಮಕ್ಕಳಿಗೆ ಉದ್ಯೋಗದ ಆಮಿಷವೊಡ್ಡಿ ವೇಶ್ಯಾವಾಟಿಕೆಗೆ ದೂಡುತ್ತಿದ್ದ ಆರೋಪದ ಮೇರೆಗೆ ಸಿಸಿಬಿ ಪೊಲೀಸರು ಎಂಟು ಮಂದಿಯನ್ನು ಬಂಧಿಸಿದ್ದಾರೆ.

ಮಧ್ಯವರ್ತಿಗಳಾದ ವಸೀಮ್, ಮನೋಹರ್, ಸೀನಾ, ಲೋಕೇಶ್ ಗೌಡ, ಲೋಕೇಶ್, ವಿಜಯ್, ಪ್ರಸಾದ್, ಸುರೇಶ್ ಅವರನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಿದ್ದಾರೆ. ಮಂಡ್ಯ, ಮೈಸೂರು ಭಾಗದ ಇಬ್ಬರು ಯುವತಿಯರು ಹಾಗೂ ಪಂಜಾಬ್, ದೆಹಲಿ, ಕೋಲ್ಕತ್ತಾದ ಹೆಣ್ಣುಮಕ್ಕಳನ್ನು ರಕ್ಷಿಸಲಾಗಿದೆ.

ಆರೋಪಿಗಳು ನಾಗರಬಾವಿ, ಮಡಿವಾಳ, ಬೊಮ್ಮನಹಳ್ಳಿ ಸೇರಿದಂತೆ ನಗರದ ಹಲವು ಪ್ರದೇಶಗಳಲ್ಲಿ ವೇಶ್ಯಾವಾಟಿಕೆ ನಡೆಸುತ್ತಿದ್ದರು. ಬಾಲಕಿ ಮತ್ತು ಏಳು ಯುವತಿಯರನ್ನು ರಕ್ಷಣೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ದೂರದ ಊರುಗಳಿಂದ ಉದ್ಯೋಗ ಅರಸಿ ನಗರಕ್ಕೆ ಬರುತ್ತಿದ್ದ ಹೆಣ್ಣುಮಕ್ಕಳನ್ನು ಗುರಿಯಾಗಿಸಿಕೊಂಡು ಕಾರ್ಯಾಚರಣೆ ನಡೆಸುತ್ತಿದ್ದ ಆರೋಪಿಗಳು, ಒಳ್ಳೆಯ ಉದ್ಯೋಗ ಕೊಡಿಸುವುದಾಗಿ ನಂಬಿಸುತ್ತಿದ್ದರು. ಧಾರಾವಾಹಿಗಳಲ್ಲಿ ಅವಕಾಶ ಕೊಡಿಸುವುದಾಗಿ, ಮಾಡೆಲ್ ಮಾಡುವುದಾಗಿ, ತಾರಾ ಹೋಟೆಲ್‌ಗಳಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸುತ್ತಿದ್ದರು. ಬಳಿಕ ಡ್ಯಾನ್ಸ್ ಬಾರ್ ಹಾಗೂ ವೇಶ್ಯಾವಾಟಿಕೆಗೆ ದೂಡುತ್ತಿದ್ದರು' ಎಂದು ಪೊಲೀಸರು ಹೇಳಿದ್ದಾರೆ.

## ನಗರದಲ್ಲಿ ಇಂದು

**ರಾಜ್ಯಮಟ್ಟದ ಕಾರ್ಯಾಗಾರ:** ಮುಖ್ಯ ಅತಿಥಿ: ಆರ್. ನಟರಾಜ್, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಆಯೋಜನೆ: ಶೇಷಾದ್ರಿಪುರಂ ಕಾನೂನು ಕಾಲೇಜು, ಸ್ಥಳ: ಸಮ್ಮೇಳನ ಸಭಾಂಗಣ, ಶೇಷಾದ್ರಿಪುರಂ ಎಜುಕೇಶನಲ್ ಟ್ರಸ್ಟ್, ಶೇಷಾದ್ರಿಪುರ, ಬೆಳಿಗ್ಗೆ 9

**28ನೇ ವಾರ್ಷಿಕ ಸಮ್ಮೇಳನ:** ಅತಿಥಿಗಳು: ಡಾ. ಅನುಪ್ ಅಗರ್‌ವಾಲ್, ಡಾ. ಅನೀಲ್ ಪಾಟೀಲ, ಡಾ. ಹರೀಶ್ ಮೂರ್ತಿ, ಆಯೋಜನೆ: ದಿ ಬೆಂಗಳೂರು ಆರ್ಥೋಪೆಡಿಕ್ ಸೊಸೈಟಿ, ಸ್ಥಳ: ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್, ಬೆಳಿಗ್ಗೆ 10.30

**ಎಫ್‌ಕೆಸಿಸಿಐ ಉದ್ಯೋಗ ಉತ್ಸವ:** ಮುಖ್ಯ ಅತಿಥಿಗಳು: ಶರಣ ಪ್ರಕಾಶ ಪಾಟೀಲ, ಇ.ವಿ. ರಮಣ ರೆಡ್ಡಿ, ಅಧ್ಯಕ್ಷತೆ: ಎಂ.ಜಿ. ಬಾಲಕೃಷ್ಣ, ಉಪಸ್ಥಿತಿ: ನಾಗರಾಜ ಎನ್.ಎಂ., ಆಯೋಜನೆ ಹಾಗೂ ಸ್ಥಳ: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ), ಕೆ.ಜಿ. ರಸ್ತೆ, ಬೆಳಿಗ್ಗೆ 10.30

**ಡಾ.ಬಾಬೂ ಜಗಜೀವನ್ ರಾಂ ಅವರ 118ನೇ ಜನ್ಮ ದಿನಾಚರಣೆ ಹಾಗೂ ಡಾ. ಬಾಬೂ ಜಗಜೀವನ್ ರಾಂ ಪ್ರಶಸ್ತಿ ಪ್ರದಾನ ಸಮಾರಂಭ:** ಉದ್ಘಾಟನೆ: ಸಿದ್ದರಾಮಯ್ಯ, ಡಿ. ಕೆ.ಶಿವಕುಮಾರ್, ಬಾಬೂ ಜಗಜೀವನ್‌ರಾಂ ಅವರ ಪ್ರತಿಮೆಗೆ ಗೌರವ ಸಮರ್ಪಣೆ: ಎಚ್.ಸಿ.ಮಹದೇವಪ್ಪ, ಉಪಸ್ಥಿತಿ: ಬಸವರಾಜ ಎಸ್. ಹೊರಟ್ಟಿ, ಯು.ಟಿ. ಖಾದರ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಸಮಾಜ ಕಲ್ಯಾಣ ಇಲಾಖೆ, ಸ್ಥಳ: ವಿಧಾನಸೌಧದ ಮೆಟ್ಟಿಲುಗಳು, ವಿಧಾನಸೌಧ, ಬೆಳಿಗ್ಗೆ 10.30




ಬಾಬೂ ಜಗಜೀವನ್ ರಾಂ

**ಉದ್ಯೋಗ ಮೇಳ: ಉದ್ಘಾಟನೆ:** ಎಸ್.ಟಿ.ಸೋಮಶೇಖರ್, ಉಪಸ್ಥಿತಿ: ಡಿ.ಕೆ.ಶಿವಕುಮಾರ್, ಅಧ್ಯಕ್ಷತೆ: ದೇವರಾಜ್ ಎನ್., ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ, ಸ್ಥಳ: ರಾಜರಾಜೇಶ್ವರಿ ತಾಂತ್ರಿಕ ಮಹಾವಿದ್ಯಾಲಯ, ರಾಮೋಹಳ್ಳಿ ಕ್ರಾಸ್, ದೊಡ್ಡ ಆಲದಮರದ ರಸ್ತೆ, ಕುಂಬಳಗೋಡು, ಬೆಳಿಗ್ಗೆ 10.30

**ರಾಸಾಯನಿಕ ವಿಪತ್ತು ನಿರ್ವಹಣಾ ಅಣಕು ಪ್ರದರ್ಶನ: ಆಯೋಜನೆ:** ಇಂಡಸ್ಟ್ರಿಯಲ್ ಟೌನ್‌ಶಿಪ್ ಅಥಾರಿಟಿ, ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ, ಸ್ಥಳ: ಆರಿಜೆನ್ ಆಂಕೊಲಾಜಿ, ಕೆಐಎಡಿಬಿ ಕೈಗಾರಿಕಾ ಪ್ರದೇಶ, ಎಲೆಕ್ಟ್ರಾನಿಕ್ ಸಿಟಿ, ಬೆಳಿಗ್ಗೆ 10.30

**ವಿಕ್ರಮ್ ಸಂಪತ್ ಅವರ 'ಸಾವರ್ಕರ್: ವಿವಾದಾಸ್ಪದ ವಾರಸಿಕೆ' ಭಾಗ–2 ಪುಸ್ತಕ ಬಿಡುಗಡೆ:** ಬಾಬು ಕೃಷ್ಣಮೂರ್ತಿ, **'ಶಿವನಿಗಾಗಿ ಕಾಯುತ್ತ' ಕೃತಿಯ ಮೂರನೇ ಮುದ್ರಣ ಬಿಡುಗಡೆ:** ಜಿ.ಬಿ. ಹರೀಶ್, ಸಂವಾದ: ವಿಕ್ರಮ್ ಸಂಪತ್, ಉಪಸ್ಥಿತಿ: ನರೇಂದ್ರ ಕುಮಾರ್ ಎಸ್.ಎಸ್., ಆಯೋಜನೆ: ಸಾಹಿತ್ಯ ಪ್ರಕಾಶನ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 11

**'ನ್ಯಾಯಯುತ ನೀರಿನ ಹಕ್ಕಿಗಾಗಿ' ಕಾರ್ಯಾಗಾರ ಹಾಗೂ ವಿಚಾರಸಂಕಿರಣ: ಸಭಾ ಕಾರ್ಯಕ್ರಮದ ಉದ್ಘಾಟನೆ:** ನಿರ್ಮಲಾನಂದನಾಥ ಸ್ವಾಮೀಜಿ, ಸಾನ್ನಿಧ್ಯ: ಸಿದ್ಧಲಿಂಗ ಸ್ವಾಮೀಜಿ, ಅಧ್ಯಕ್ಷತೆ: ಎಚ್.ಡಿ. ದೇವೇಗೌಡ, ಮುಖ್ಯ ಅತಿಥಿಗಳು: ಎಚ್.ಡಿ. ಕುಮಾರಸ್ವಾಮಿ, ಆರ್.ಅಶೋಕ, ರಾಮಲಿಂಗಾರೆಡ್ಡಿ, ಡಾ.ಸಿ. ಎನ್. ಮಂಜುನಾಥ್, ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಕೆಂಚಪ್ಪಗೌಡ, ವಿ.ಗೋಪಾಲಗೌಡ, ಎ.ಜೆ. ಸದಾಶಿವ, ಚಂದ್ರಶೇಖರಯ್ಯ, ಕಾರ್ಯಾಗಾರ ಹಾಗೂ ವಿಚಾರಸಂಕಿರಣದ ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ನಿರಂಜನಾನಂದಪುರಿ ಸ್ವಾಮೀಜಿ, ಉದ್ಘಾಟನೆ: ಸಿದ್ದರಾಮಯ್ಯ, ಮುಖ್ಯ ಅತಿಥಿಗಳು: ಎನ್. ಚಲುವರಾಯಸ್ವಾಮಿ, ಎಚ್.ಸಿ. ಮಹದೇವಪ್ಪ, ಕೆ.ವೆಂಕಟೇಶ್, ಸುನೀಲ್ ಬೋಸ್, ಆಯೋಜನೆ: ಕಾವೇರಿ ನದಿ ಸಂರಕ್ಷಣಾ ಸಮಿತಿ, ಸ್ಥಳ: ಕುವೆಂಪು ಕಲಾಕ್ಷೇತ್ರ, ಕೆಂಪೇಗೌಡ ಆಸ್ಪತ್ರೆ ಆವರಣ, ಕೆ.ಆರ್. ರಸ್ತೆ, ಬೆಳಿಗ್ಗೆ 10



ನಿರ್ಮಲಾನಂದ ನಾಥ ಸ್ವಾಮೀಜಿ

**ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ:** ಎನ್. ಸಂತೋಷ್ ಹೆಗ್ಡೆ, ಅಧ್ಯಕ್ಷತೆ: ಮಹೇಶ ಜೋಶಿ, ಪ್ರಶಸ್ತಿ ಪ್ರದಾನ: ಗೊ.ರು. ಚನ್ನಬಸಪ್ಪ, ಪ್ರಶಸ್ತಿ ಪುರಸ್ಕೃತರು: ಅ.ರಾ. ಮಿತ್ರ, ಉಪಸ್ಥಿತಿ: ಎಂ.ವಿ. ಸತ್ಯನಾರಾಯಣ, ಆಯೋಜನೆ ಹಾಗೂ ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 11



ಅ.ರಾ.ಮಿತ್ರ

**ಶ್ರೀರಾಮನವಮಿ ಉತ್ಸವ:** ವೀಣಾ ಮೂರ್ತಿ ವಿಜಯ್ ಶಿಷ್ಯರು ಹಾಗೂ ಎಂಎಲ್‌ಎ ಶಿಕ್ಷಣ ಸಂಸ್ಥೆ ವಿದ್ಯಾರ್ಥಿಗಳಿಂದ ಶಾಸ್ತ್ರೀಯ ನೃತ್ಯ, ಆಯೋಜನೆ: ಮಲ್ಲೇಶ್ವರಂ ಲೇಡಿಸ್ ಅಸೋಸಿಯೇಷನ್, ಶ್ರೀ ರಾಜರಾಜೇಶ್ವರಿ ಕಲಾನಿಕೇತನ, ಸ್ಥಳ: ರುಕ್ಕಮ್ಮ ರಾಘವಾಚಾರ್ ಸಭಾಂಗಣ, ಎಂ.ಎಲ್.ಎ. ಅಸೋಸಿಯೇಶನ್, ಮಲ್ಲೇಶ್ವರ, ಬೆಳಿಗ್ಗೆ 11

**ಯಕ್ಷಗಾನ-ಪ್ರಸಂಗ: 'ಕಾಯಕಲ್ಪ-ದ್ರೌಪದಿ ಪ್ರತಾಪ', ಮೇಳ: ಹನುಮಗಿರಿ ಮೇಳ, ಆಯೋಜನೆ:** ಯಕ್ಷಗಾನಾಭಿಮಾನಿ ವಕೀಲರು, ಸ್ಥಳ: ತರಳಬಾಳು ಕೇಂದ್ರದ ಸಭಾಂಗಣ, ಬಿಡಿಎ ಕಾಂಪ್ಲೆಕ್ಸ್ ಬಳಿ, ಆರ್.ಟಿ.ನಗರ, ಮಧ್ಯಾಹ್ನ 2

ಕೆ.ಜಿ. ಸುಬ್ರಹ್ಮಣ್ಯನ್ ಅವರ ಜನ್ಮ ಶತಮಾನೋತ್ಸವ ಕಲಾ ಪ್ರದರ್ಶನ: ಮುಖ್ಯ ಅತಿಥಿ: ಇಂದ್ರಪ್ರಮಿತ್ ರಾಯ್, ಗೌರವ ಅತಿಥಿ: ಎಸ್.ಎನ್. ಅಗರ್‌ವಾಲ್, ಅಧ್ಯಕ್ಷತೆ: ಬಿ.ಎಲ್. ಶಂಕರ್, ಆಯೋಜನೆ ಹಾಗೂ ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪ ರಸ್ತೆ, ಸಂಜೆ 5.30

**'ಅನುಗ್ರಹ' ಪೌರಾಣಿಕ ನಾಟಕ ಪ್ರದರ್ಶನ: ನಿರ್ದೇಶನ:** ಬಾಷ್ ರಾಘವೇಂದ್ರ, ತಂಡ: ಅಂತರಂಗ ಬಹಿರಂಗ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 4.30 ಮತ್ತು 7.30

**ಡಾ.ಬಾಬೂ ಜಗಜೀವನ್ ರಾಂ ಅವರ 118ನೇ ಜಯಂತಿ: ಉದ್ಘಾಟನೆ:** ಜಯಕರ್ ಎಸ್.ಎಂ., ಮುಖ್ಯ ಭಾಷಣ: ಭೀಮಾಶಂಕರ್ ಎಚ್.ಆರ್., ಮುಖ್ಯ ಅತಿಥಿಗಳು: ಶೇಕ್ ಲತೀಫ್, ಶ್ರೀನಿವಾಸ್ ಸಿ., ಸುನೀತ ಎಂ., ಕೆ.ಆರ್. ವೇಣುಗೋಪಾಲ್, ಸಿ. ಸೋಮಶೇಖರ್, ಪಿ.ಸಿ. ನಾಗೇಶ್, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ, ಡಾ.ಬಾಬೂ ಜಗಜೀವನ್ ರಾಂ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಸ್ಥಳ: ಪ್ರೊ. ವೆಂಕಟಗಿರಿಗೌಡ ಸ್ಮಾರಕ ಸಭಾಂಗಣ, ಜ್ಞಾನಭಾರತಿ, ಮಧ್ಯಾಹ್ನ 1.30

**32ನೇ ಶ್ರೀರಾಮನವಮಿ ಸಂಗೀತೋತ್ಸವ: ಸಂಗೀತ ಕಛೇರಿ:** ಉಪ್ಪಲಪು ಶ್ರೀನಿವಾಸು, ಆರ್.ಎಸ್.ಆರ್. ಶ್ರೀಕಾಂತ್, ಅನಿರುದ್ಧ ಭಾರದ್ವಾಜ್, ಶರತ್ ಕೌಶಿಕ್, 'ರಾಮಾಯಣ ಗೀತಾಯಾನಂ' ಸಂಗೀತ ಪಯಣ, ನಿರ್ದೇಶನ: ಟಿ.ಎಸ್. ಸತ್ಯವತಿ, ನಿರೂಪಣೆ: ಆರತಿ ಬಾಲಸುಬ್ರಮಣ್ಯಂ, ಸುಮನಾ ಕೆ.ಎಸ್., ಪಿಟೀಲು: ಟಿ.ಎಸ್. ಕೃಷ್ಣಮೂರ್ತಿ, ಮೃದಂಗ: ಎ.ಎಸ್.ಎನ್. ಸ್ವಾಮಿ, ಕೊಳಲು: ಎ.ಎನ್. ರಘು ಸಿಂಹ, ತಬಲಾ: ಮಾರುತಿ ಪ್ರಸಾದ್, ಆಯೋಜನೆ ಹಾಗೂ ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 4.45

**ರಂಗ ಸಂಭ್ರಮ:** ಮುಖ್ಯ ಅತಿಥಿಗಳು: ಎನ್. ಸಂತೋಷ್ ಹೆಗ್ಡೆ, ಮಹೇಶ ಜೋಶಿ, ಕೆ.ವಿ. ನಾಗರಾಜಮೂರ್ತಿ, ಬಲವಂತರಾವ್ ಪಾಟೀಲ, ಡಿ.ಎಸ್. ವಿಶ್ವನಾಥ್, ಅಂಬರೀಶ್, ಗುರುವಂದನೆ: ಕೆಂಚನೂರು ಶಂಕರ್, ಬಿ.ವಿ. ವೇಣುಗೋಪಾಲ್, ಆಯೋಜನೆ: ವಂದೇ ಮಾತರಂ ಲಲಿತಕಲಾ ಅಕಾಡೆಮಿ, ಸ್ಥಳ: ಸಂಸ ಬಯಲು ರಂಗಮಂದಿರ, ರವೀಂದ್ರ ಕಲಾಕ್ಷೇತ್ರ ಆವರಣ, ಜೆ.ಸಿ. ರಸ್ತೆ, ಸಂಜೆ 5

**'ಪ್ರವೀಣ್ ಪ್ರದೀಪ್ ಕಾನ್ಸರ್ಟ್':** ಗಾಯನ: ಪ್ರವೀಣ್ ಬಿ.ವಿ., ಪ್ರದೀಪ್ ಬಿ.ವಿ., ಎಂ.ಡಿ. ಪಲ್ಲವಿ, ವರುಣ್ ಪ್ರದೀಪ್, ಆಯೋಜನೆ: ಸಮುದ್ಯತಾ ಸಾಂಸ್ಕೃತಿಕ ಪ್ರತಿಷ್ಠಾನ, ಪ್ರವೀಣ್ ಪ್ರದೀಪ್ ಕ್ರಿಯೇಟಿವ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.30

**ಕವಿರಾಜ್ ಅವರ 'ಕವಿರಾಜ್ ಮಾರ್ಗದಲ್ಲಿ' ಪುಸ್ತಕ ಬಿಡುಗಡೆ:** ಆಯೋಜನೆ: ಹರಿವು ಬುಕ್ಸ್, ಸ್ಥಳ: ಕರ್ನಾಟಕ ಚಲನಚಿತ್ರ ಕಲಾವಿದರ ಭವನ, ಚಾಮರಾಜಪೇಟೆ, ಸಂಜೆ 5



ಕವಿರಾಜ್

**ಗ್ರಾಮೀಣ ಭಾಗದ ಗರ್ಭಿಣಿಯರನ್ನು ಗೌರವಿಸುವ ವಿಶೇಷ ಜಾಗೃತಿ ಅಭಿಯಾನ:** ಅಧ್ಯಕ್ಷತೆ: ಗೀತಾ ಪ್ರಿಯಾ, ಉಪಸ್ಥಿತಿ: ಮಹಾಲಕ್ಷ್ಮಿ, ಸ್ಥಳ: ಎಸ್‌ಆರ್‌ವಿ ಪ್ರಿವ್ಯೂ ಥಿಯೇಟರ್, ಮಲ್ಲೇಶ್ವರ 15ನೇ ಕ್ರಾಸ್, ಸಂಜೆ 4

**ಶ್ರೀರಾಮ ನವಮಿ ಸಂಗೀತೋತ್ಸವ:** ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ: ಶ್ರೀಕಾಂತಂ ನಾಗದೀಪ್ತಿ, ಶ್ರೀಕಾಂತಂ ನಾಗಪ್ರಣತಿ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಮತ್ತು ಆಂಜನೇಯ ಸ್ವಾಮಿಗಳ ದೇವಸ್ಥಾನ, 8ನೇ ಕ್ರಾಸ್, ಮಲ್ಲೇಶ್ವರ, ಸಂಜೆ 6

**ರಜತ ಸಂಭ್ರಮ, ಡಿ.ವಿ.ಜಿ. ನೆನಪು: ಕವಿತೆ ಓದು:** ಸಚಿನ್ ಮುಂಗಿಲ, ಮಹೇಶ್ ರಾವ್, ಗಮಕ: ಜಿ.ಎಸ್. ನಾರಾಯಣ, ನುಡಿ ನಮನ: ಭ.ರಾ. ವಿಜಯಕುಮಾರ್, ಗೀತ ಗಾಯನ: ಗಾಯತ್ರಿ ಕೇಶವ, ಸಂಧ್ಯಾಶ್ರೀ, ಆಯೋಜನೆ ಹಾಗೂ ಸ್ಥಳ: ಪಂಚಾಮೃತ ಸುಗಮ ಸಂಗೀತ ಅಕಾಡೆಮಿ, ವೇಮಣ್ಣ ಬಡಾವಣೆ, ದೊಡ್ಡಬೊಮ್ಮಸಂದ್ರ, ಸಂಜೆ 6.05

**ವಸಂತ ನವರಾತ್ರಿ ಶ್ರೀರಾಮೋತ್ಸವ:** ಸನಕ ಕಲಾಶಾಲೆ ವಿದ್ಯಾರ್ಥಿಗಳಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

25ನೇ ವರ್ಷದ ಪ್ರವಚನ ವಾಹಿನಿ: ಭರತನಾಟ್ಯ: ಅನುಸ್ವರ ಪಿ.ಎಸ್., ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

***

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

# ವೀರಲೋಕ: ₹1.32 ಕೋಟಿ ವಹಿವಾಟು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವೀರಲೋಕ ಪ್ರಕಾಶನ ಸಂಸ್ಥೆಯು 2024-25ನೇ ಹಣಕಾಸು ವರ್ಷದಲ್ಲಿ ₹1.32 ಕೋಟಿ ವಹಿವಾಟು ನಡೆಸಿದೆ. ನಿವ್ವಳ ಆದಾಯ ₹19.80 ಲಕ್ಷ ಹಾಗೂ ಹತ್ತು ಜನರಿಗೆ ಉದ್ಯೋಗ ನೀಡಲಾಗಿದೆ ಎಂದು ಸಂಸ್ಥೆ ತಿಳಿಸಿದೆ.

'ಶಾಲಾ ಪಠ್ಯಪುಸ್ತಕ, ಸರ್ಕಾರಿ ಟೆಂಡರ್, ನೋಟ್ ಪುಸ್ತಕ ಸೇರಿದಂತೆ ಇನ್ನೂ ಹತ್ತು ಹಲವು ಅವಕಾಶಗಳೆಡೆಗೆ ಪ್ರಕಾಶನ ಸಂಸ್ಥೆಗಳು ಮುಖ ಮಾಡಿದರೆ ಇದಕ್ಕಿಂತ ಹತ್ತು ಪಟ್ಟು ಹೆಚ್ಚಿನ ವಹಿವಾಟನ್ನು ದಾಖಲಿಸಬಹುದು. ಆದ್ದರಿಂದ ಸ್ತ್ರೀ ಶಕ್ತಿ ಸಂಘಗಳು ಮತ್ತು ನವೋದ್ಯಮಗಳ ಬಗ್ಗೆ ಯೋಚಿಸುವವರು ಕನ್ನಡ ಪುಸ್ತಕೋದ್ಯಮದ ಬಗ್ಗೆಯೂ ಯೋಚಿಸಲಿ ಮತ್ತು ಹೊಸಬರು ಈ ಕ್ಷೇತ್ರಕ್ಕೆ ಬರುವಂತಾಗಲೆಂದು ಆಶಿಸುವೆ' ಎಂದು ಸಂಸ್ಥೆಯ ಮುಖ್ಯಸ್ಥ ವೀರಕಪುತ್ರ ಶ್ರೀನಿವಾಸ ತಿಳಿಸಿದ್ದಾರೆ.

## ಮುಂಬೈ ರೇಸ್

### 'ಟೈಮ್ ಅಂಡ್ ಟೈಡ್' ಗೆಲ್ಲುವ ನಿರೀಕ್ಷೆ

ಜವಾರೆ ಎಸ್ ಪೂನಾವಾಲ ಸ್ಪ್ರಿಂಟರ್ಸ್ ಚಾಲೆಂಜ್ ಶನಿವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಟೈಮ್ ಅಂಡ್ ಟೈಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಸಂಜೆ 4:45ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

**1ನೇ ರೇಸ್:** ಕಾಂಟಿನೆಂಟಲ್ ಡ್ರಿಫ್ಟ್ 1, ಜಕಾಪ 5, ಆಪರೇಷನ್ ಫಿನಾಲೆ 6
**2ನೇ ರೇಸ್:** ಲಾ ಡೋಲ್ಸ್ ವಿಟ 7, ಡಾಕ್ಟರ್ ಡಾಲಿ 1, ಅಲೆಕ್ಸಾಂಡ್ರಸ್ 4
**3ನೇ ರೇಸ್:** ಪರ್ಫೆಕ್ಟ್ ಲೆಜೆಂಡ್ 3, ಮೈಟಿ ಸ್ಪ್ಯಾರೊ 8, ಷಗಾಲ್ 2
**4ನೇ ರೇಸ್:** ಮೆರ್ಲಾಟ್ 13, ಜ್ಯಾಕ್‌ಸನ್ 4, ಬಿಷಪ್ 7
**5ನೇ ರೇಸ್:** ಆರ್ಡಕನ್ 3, ಮಿಸ್ಟಿ 7, ಬಷೀರ್ 9
**6ನೇ ರೇಸ್:** ಟೈಮ್ ಅಂಡ್ ಟೈಡ್ 1, ಮಿಸ್ ಅಮೇರಿಕನ್ ಪೀ 3, ಮ್ಯಾಗಿಲೆಟೊ 2
**7ನೇ ರೇಸ್:** ಡಿವೈನ್ ಸ್ಟಾರ್ 1, ಚೆಲ್ಸಿಯಾ 5, ಮೊಜೊ 7

**ಉತ್ತಮ ಬೆಟ್: ಕಾಂಟಿನೆಂಟಲ್ ಡ್ರಿಫ್ಟ್**

| ಜಾಕ್‌ಪಾಟ್‌ಗೆ | ಟ್ರಿಬಲ್ |
|---|---|
| 3,4,5,6,7 | 4,5,6 |

ಸಂಕ್ಷಿಪ್ತ ಸುದ್ದಿ

## ನಾಳೆ ರಕ್ತದಾನ ಶಿಬಿರ

**ಬೆಂಗಳೂರು:** ಉಡುಪಿಯ ಅಭಯ ಹಸ್ತ ಚಾರಿಟಬಲ್ ಟ್ರಸ್ಟ್ ಇದೇ ಭಾನುವಾರ ಬೆಳಿಗ್ಗೆ 8.30ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಡಾ.ರಾಜ್‌ಕುಮಾರ್ ರಸ್ತೆಯಲ್ಲಿರುವ ರಾಜರಾಜೇಶ್ವರಿ ಕಲ್ಯಾಣ ಮಂಟಪದಲ್ಲಿ 250ನೇ ರಕ್ತದಾನ ಶಿಬಿರ ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಟ್ರಸ್ಟ್‌ನ ಬೆಂಗಳೂರು ವಿಭಾಗದ ಸಂಚಾಲಕ ರಾಘವೇಂದ್ರ ಮರವಂತೆ, 'ಈ ಶಿಬಿರವನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಉದ್ಘಾಟಿಸುತ್ತಾರೆ. ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಹಾಗೂ ಟೀಮ್ ಶಕ್ತಿನೋನಿ ಸಹಯೋಗದಲ್ಲಿ ಈ ಶಿಬಿರ ಹಮ್ಮಿಕೊಳ್ಳಲಾಗಿದೆ. ಟ್ರಸ್ಟ್ ವತಿಯಿಂದ ಕಳೆದ ಐದು ವರ್ಷಗಳಲ್ಲಿ 32 ಸಾವಿರ ಯೂನಿಟ್ ರಕ್ತವನ್ನು ಸಂಗ್ರಹಿಸಲಾಗಿದೆ' ಎಂದು ತಿಳಿಸಿದರು.

'ಭಾನುವಾರ ನಡೆಯುವ ಶಿಬಿರದಲ್ಲಿ 500 ಯೂನಿಟ್ ರಕ್ತ ಸಂಗ್ರಹಿಸುವ ಗುರಿ ಹೊಂದಲಾಗಿದೆ' ಎಂದು ಹೇಳಿದರು.

## ₹800 ಕೋಟಿ ಅನುದಾನಕ್ಕೆ ಖಂಡ್ರೆ ಮನವಿ

**ನವದೆಹಲಿ:** ಮಾನವ-ಆನೆ ಸಂಘರ್ಷ ತಡೆಗೆ ರೈಲ್ವೆ ಬ್ಯಾರಿಕೇಡ್ ನಿರ್ಮಿಸಲು, ಸ್ವಯಂಪ್ರೇರಿತವಾಗಿ ಅರಣ್ಯವಾಸಿಗಳ ಸ್ಥಳಾಂತರಕ್ಕೆ ಕಾಂಪಾ ನಿಧಿಯಿಂದ ₹800 ಕೋಟಿ ಮಂಜೂರು ಮಾಡುವಂತೆ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಅವರು ಕೇಂದ್ರಕ್ಕೆ ಬೇಡಿಕೆ ಸಲ್ಲಿಸಿದ್ದಾರೆ.

ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವ ಭೂಪೇಂದರ್ ಯಾದವ್ ಅವರನ್ನು ಶುಕ್ರವಾರ ಇಲ್ಲಿ ಭೇಟಿ ಮಾಡಿ ಮನವಿ ಸಲ್ಲಿಸಿದರು. ಬಳಿಕ ಮಾತನಾಡಿದ ಖಂಡ್ರೆ, 'ಪರಿಹಾರಾತ್ಮಕ ಅರಣ್ಯೀಕರಣ ನಿಧಿ ನಿರ್ವಹಣೆ ಮತ್ತು ಯೋಜನಾ ಪ್ರಾಧಿಕಾರದಡಿ ರಾಜ್ಯಕ್ಕೆ ಕೂಡಲೇ ಹಣ ಬಿಡುಗಡೆ ಮಾಡಬೇಕು ಎಂದು ಮನವಿ ಸಲ್ಲಿಸಿದ್ದೇನೆ' ಎಂದರು.

## ಹ್ಯಾಕಥಾನ್ ಸ್ಪರ್ಧೆ

**ಬೆಂಗಳೂರು:** ರಾಜಾಜಿನಗರದಲ್ಲಿರುವ ಎಸ್. ನಿಜಲಿಂಗಪ್ಪ ಕಾಲೇಜಿನ ಕಂಪ್ಯೂಟರ್ ಅಪ್ಲಿಕೇಶನ್ ವಿಭಾಗದಿಂದ ಏಪ್ರಿಲ್ 5ರಂದು 'ಹ್ಯಾಕ್ ಮಾರ್ಚ್ 2025' ಹ್ಯಾಕಥಾನ್ ಸ್ಪರ್ಧೆ ಆಯೋಜಿಸಲಾಗಿದೆ. ವಿವಿಧ ಕಾಲೇಜುಗಳಿಂದ 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಲಿದ್ದು, ತಂತ್ರಜ್ಞಾನ ಕ್ಷೇತ್ರದಲ್ಲಿ ಜ್ಞಾನದ ವಿಸ್ತರಣೆ ಮತ್ತು ನವೀನ ಪರಿಹಾರಗಳನ್ನು ಅಭಿವೃದ್ಧಿಪಡಿಸಲು ಅವಕಾಶವನ್ನು ಒದಗಿಸುತ್ತದೆ ಎಂದು ಪ್ರಕಟಣೆ ತಿಳಿಸಿದೆ.

'ಪ್ರೋಗ್ರಾಮಿಂಗ್ ಕೌಶಲಗಳ ಅಭಿವೃದ್ಧಿಗೆ ಅವಕಾಶವಿದ್ದು, ಇದು ಭವಿಷ್ಯದ ವೃತ್ತಿಜೀವನದಲ್ಲಿಯೂ ಸಹಾಯಕವಾಗುತ್ತದೆ. ಕೋಡ್ ಬರೆಯುವುದು ಮಾತ್ರವಲ್ಲದೆ, ತಂತ್ರಾಂಶ ಮತ್ತು ಉಪಕರಣಗಳನ್ನು ರೂಪಿಸಿ, ಕಾನ್ಸೆಪ್ಟ್ ಪ್ರೂಫ್ ಅಥವಾ ಪ್ರೋಟೋಟೈಪ್ ಅಭಿವೃದ್ಧಿಪಡಿಸಲು ವಿದ್ಯಾರ್ಥಿಗಳು ಅವಕಾಶ ಪಡೆಯುತ್ತಾರೆ' ಎಂದು ತಿಳಿಸಲಾಗಿದೆ.

## ಮುತ್ಯಾಲಮ್ಮ ದೇವಿ ರಥೋತ್ಸವ

**ಬೆಂಗಳೂರು:** ಶಿವಾಜಿನಗರ ಸೆಪಿಂಗ್ಸ್ ರಸ್ತೆಯಲ್ಲಿರುವ ಮುತ್ಯಾಲಮ್ಮ ದೇವಿ ದೀಪೋತ್ಸವ ಏಪ್ರಿಲ್ 8ರಂದು ಹಾಗೂ ರಥೋತ್ಸವ ಏಪ್ರಿಲ್ 9ರಂದು ನಡೆಯಲಿದೆ. ಏಪ್ರಿಲ್ 16ರಂದು ಶಯನೋತ್ಸವದೊಂದಿಗೆ ಈ ವರ್ಷದ ರಥೋತ್ಸವ ಕಾರ್ಯಕ್ರಮ ಪೂರ್ಣಗೊಳ್ಳಲಿದೆ ಎಂದು ಆಡಳಿತ ಮಂಡಳಿ ಹಾಗೂ ಪ್ರಧಾನ ಅರ್ಚಕ ಆರ್. ಸುಬ್ರಮಣಿ ತಿಳಿಸಿದ್ದಾರೆ.

## ಭಾನುವಾರ ಮಾಂಸ ಮಾರಾಟ ನಿಷೇಧ

**ಬೆಂಗಳೂರು:** ಶ್ರೀರಾಮನವಮಿ ಪ್ರಯುಕ್ತ ಬಿಬಿಎಂಪಿ ವ್ಯಾಪ್ತಿಯ ಕಸಾಯಿಖಾನೆಯಲ್ಲಿ ಪ್ರಾಣಿವಧೆ ಹಾಗೂ ಮಳಿಗೆಗಳಲ್ಲಿ ಮಾಂಸ ಮಾರಾಟವನ್ನು ಏಪ್ರಿಲ್ 6ರ ಭಾನುವಾರದಂದು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಪಶುಪಾಲನೆ ವಿಭಾಗದ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

## 'ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ'ಗೆ ಆಹ್ವಾನ

**ಬೆಂಗಳೂರು:** ಸ್ವಾಭಿಮಾನಿ ಕರ್ನಾಟಕ ವೇದಿಕೆಯು 'ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ'ಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ 2024ರಲ್ಲಿ ಪ್ರಕಟಗೊಂಡ ಪುಸ್ತಕಗಳನ್ನು ಲೇಖಕರು ಮತ್ತು ಪ್ರಕಾಶಕರಿಂದ ಆಹ್ವಾನಿಸಿದೆ.

ಆಯ್ಕೆಯಾದ ನಾಲ್ಕು ಕೃತಿಗಳಿಗೆ ತಲಾ ₹5 ಸಾವಿರ ನಗದು ಬಹುಮಾನ ನೀಡಲಾಗುತ್ತದೆ. ಪುಸ್ತಕದ ಮೂರು ಪ್ರತಿಗಳನ್ನು ಮೇ 10ರೊಳಗೆ ದ್ವಾರನಕುಂಟೆ ಪಾತಣ್ಣ, ಅಧ್ಯಕ್ಷರು, ಸ್ವಾಭಿಮಾನಿ ಕರ್ನಾಟಕ ವೇದಿಕೆ, ನಂ.118, ಹೊಂಬೆಳಕು, ಎಚ್‌ಎಂಟಿ ಬಡಾವಣೆ, ನಾಗಸಂದ್ರ ಅಂಚೆ, ಬೆಂಗಳೂರು –560073 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ. ಸಂಪರ್ಕಕ್ಕೆ: 9686073837

ಬೇಸಿಗೆ ಬೇಗೆ ತಣಿಸಲು ಕೆಸರಿನ ಹೊಂಡ • ಸ್ಪ್ರಿಂಕ್ಲರ್ ಮೂಲಕ ನೀರು ಸಿಂಪಡಣೆ • ಪ್ರಾಣಿಗಳ ಮಾನಸಿಕ, ದೈಹಿಕ ಆರೋಗ್ಯಕ್ಕೆ ಒತ್ತು

# ಬನ್ನೇರುಘಟ್ಟ ಪ್ರಾಣಿಗಳಿಗೆ ಐಸ್‌ಕ್ಯಾಂಡಿ, ಲಾಲಿಪಾಪ್


ಆಹಾ.. ಎಂಥಾ ರುಚಿ...


ಎಲ್ಲಾ ಐಸ್ ಕ್ಯಾಂಡಿಗಾಗಿ... ಮರದಲ್ಲಿ ನೇತು ಹಾಕಿರುವ ತರಕಾರಿ ಕ್ಯಾಂಡಿ ಸವಿದ ಕೋತಿ


ಒಳಗಡೆ ಏನಿರಬಹುದು?: ಹಣ್ಣು ತಿನ್ನುವ ಮುನ್ನ ಪರೀಕ್ಷಿಸಿದ ಕರಡಿ

ಪ್ರಜಾವಾಣಿ ವಾರ್ತೆ


**ಆನೇಕಲ್:** ತಾಲ್ಲೂಕಿನ ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಬೇಸಿಗೆಯ ಬೇಗೆ ತಣಿಸಲು ಪ್ರಾಣಿಗಳಿಗೆ ಹಣ್ಣಿನಿಂದ ತಯಾರಿಸಿದ ಐಸ್‌ಕ್ಯಾಂಡಿ ನೀಡಲಾಗುತ್ತಿದೆ. ಬಿಸಿಲಿನ ಬೇಗೆಗೆ ವನ್ಯಪ್ರಾಣಿಗಳಲ್ಲಿ ನಿರ್ಜಲೀಕರಣ ಆಗದಂತೆ ಆಹಾರ ನೀಡಲಾಗುತ್ತಿದೆ. ಅಲ್ಲದೆ ಉದ್ಯಾನದಲ್ಲಿ ಹೊಂಡಗಳಲ್ಲಿ ನೀರು ತುಂಬಿಸಿ ಪ್ರಾಣಿಗಳು ಜಲಕ್ರೀಡೆ ಆಡಲು ಅನುಕೂಲಕರ ವಾತಾವರಣ ಸೃಷ್ಟಿಸಲಾಗಿದೆ.

ಬಿರು ಬೇಸಿಗೆಯಲ್ಲಿ ಪ್ರಾಣಿಗಳು ತಂಪು ವಾತಾವರಣ ಬಯಸುತ್ತವೆ. ಹಾಗಾಗಿ ಸ್ಪ್ರಿಂಕ್ಲರ್ ಮೂಲಕ ನೀರು ಸಿಂಪಡಿಸಲಾಗುತ್ತಿದೆ. ಕೆಲವು ಪ್ರಾಣಿಗಳು ಕೆಸರಿನಲ್ಲಿ ರಲು ಇಚ್ಛಿಸುತ್ತವೆ. ಹೀಗಾಗಿ ಹೊಂಡ ಸಿದ್ಧಪಡಿಸಿದ್ದು, ಅಲ್ಲಿ ಸಮಯ ಕಳೆಯುತ್ತವೆ. ತರಕಾರಿಗಳು, ಹಣ್ಣುಗಳನ್ನು ಬಳಸಿ ತಯಾರಿಸಿದ ಲಾಲಿಪಾಪ್ ಮತ್ತು ಐಸ್‌ಕ್ಯಾಂಡಿ ನೀಡಲಾಗುತ್ತಿದೆ.

ಪ್ರಾಣಿಗಳು ತಮ್ಮ ಅಗತ್ಯಕ್ಕೆ ಅನುಗುಣವಾಗಿ ಇವುಗಳನ್ನು ಸೇವಿಸುವ ಮೂಲಕ ಜೊತೆಗೆ ಬೇಸಿಗೆಯಲ್ಲಿ ತಂಪಾಗಿರಲು ವ್ಯವಸ್ಥೆ ಮಾಡಲಾಗಿದೆ ಎಂದು ಉದ್ಯಾನದ ಬಯೋಲಜಿಸ್ಟ್ ಐಶ್ವರ್ಯ ತಿಳಿಸಿದರು.

ತಾಲ್ಲೂಕಿನಾದ್ಯಂತ ಇತ್ತೀಚಿನ ದಿನಗಳಲ್ಲಿ ಬೇಸಿಗೆಯ ಬೇಗೆ ಹೆಚ್ಚಾಗಿದೆ. 38-40 ಡಿಗ್ರಿ ತಾಪಮಾನವಿದೆ. ಈ ತಾಪಮಾನದಿಂದ ತಂಪಾಗುವಂತೆ ಮಾಡಲು ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ವಿವಿಧ ಚಟುವಟಿಕೆ ರೂಪಿಸಲಾಗಿದೆ. ಮಂಗ, ಕರಡಿಗಳಿಗೆ ವಿಶೇಷ ಆಹಾರ ನೀಡಲಾಗುತ್ತಿದೆ ಎಂದು ತಿಳಿಸಿದರು.

ಕಾಡಿನಲ್ಲಿರುವ ಪ್ರಾಣಿಗಳು ತೀವ್ರ ತಾಪಮಾನ ಸಹಿಸಿಕೊಳ್ಳಲು ಶಕ್ತಿ ಹೊಂದಿವೆ. ಆದರೆ ಮೃಗಾಲಯಗಳಲ್ಲಿರುವ ಪ್ರಾಣಿಗಳಿಗೆ ಆಗುವುದಿಲ್ಲ. ಹೀಗಾಗಿ ಪರಿಸರದಲ್ಲಿ ಋತುಮಾನನಕ್ಕೆ ತಕ್ಕ ಬದಲಾವಣೆ ಮತ್ತು ಅವುಗಳ ನಿರ್ವಹಣೆ ಮಾಡಬೇಕು. ಸಮರ್ಪಕ ಆಹಾರ ಪೂರೈಸುವುದರಿಂದ ಮೃಗಾಲಯದಲ್ಲಿರುವ ಪ್ರಾಣಿಗಳ ಮಾನಸಿಕ ಮತ್ತು ದೈಹಿಕ ಚಟುವಟಿಕೆ ಸುಧಾರಿಸುತ್ತದೆ. ಬಿಸಿಲಿನ ಸಮಯದಲ್ಲಿ ಪ್ರಾಣಿ–ಪಕ್ಷಿಗಳನ್ನು ತಂಪಾಗಿರಿಸುವುದರ ಜತೆಗೆ ಅವುಗಳ ನಡವಳಿಕೆಯೂ ಸಹಜವಾಗಿರುವುದನ್ನು ಕಾಣಬಹುದು.


ಕ್ಯಾಂಡಿ ತಿನ್ನುವುದನ್ನು ಯಾರಾದರೂ ನೋಡುತ್ತಿದ್ದಾರಾ?


ಇದೇನಿದು ಮರದಲ್ಲಿ ಹೊಸ ಹಣ್ಣು?.... ನರಿಗಳಿಗಾಗಿ ಮರದಲ್ಲಿ ಕಟ್ಟಿರುವ ಹಣ್ಣಿನ ಐಸ್‌ಕ್ಯಾಂಡಿ


ಒಂದು ಕಲ್ಲಂಗಡಿ ಸಾಕಾಗಲ್ಲ... ಕಲ್ಲಂಗಡಿ ಹಣ್ಣು ಸೇವಿಸಿದ ಆನೆ

## ಕೃತಕ ಜಲಪಾತದಲ್ಲಿ ಪ್ರಾಣಿಗಳ ಜಲಕ್ರೀಡೆ

ಜಿರಾಫೆ, ಹುಲಿಗಳನ್ನು ಇಟ್ಟಿರುವ ಪ್ರಾಣಿ ಸಂಗ್ರಹಾಲಯದ ಆವರಣಗಳಲ್ಲಿ ಸ್ಪ್ರಿಂಕ್ಲರ್ ಮೂಲಕ ನೀರು ಸಿಂಪಡಣೆ ಮತ್ತು ಬಿಸಿಲಿನಿಂದ ತಪ್ಪಿಸಿಕೊಳ್ಳಲು ಶೆಲ್ಟರ್ ನಿರ್ಮಿಸಲಾಗಿದೆ. ನೀರುಕುದುರೆಗಳಿಗೆ ತಂಪಾದ ಕಲ್ಲಂಗಡಿ ಐಸ್ ಬ್ಲಾಕ್‌ಗಳು ಮತ್ತು ಹಣ್ಣು ನೀಡಲಾಗುತ್ತಿದೆ. ಕರಡಿ ಆವರಣದಲ್ಲಿ ಸ್ವಇಚ್ಛೆಯಿಂದ ಸ್ನಾನ ಮಾಡಿ ತಂಪಾಗಿಸಿಕೊಳ್ಳಲು ಕೃತಕ ಜಲಪಾತ ನಿರ್ಮಿಸಲಾಗಿದೆ. ಬಿಸಿಲಿನ ಶಾಖದಿಂದ ತಪ್ಪಿಸಿಕೊಳ್ಳಲು ಕರಡಿಗಳಿಗೆ ಮಿಶ್ರ ಹಣ್ಣು ಮತ್ತು ತರಕಾರಿಗಳ ಐಸ್ ಬ್ಲಾಕ್ ಮತ್ತು ಎಳನೀರು ನೀಡಲಾಗುತ್ತಿದೆ. ಕೋತಿಗಳಿಗೆ ಹೆಚ್ಚಿನ ತಾಪಮಾನದ ಸಮಯದಲ್ಲಿ ತಂಪಾಗಿರಿಸಲು ಹಣ್ಣುಗಳು ಮತ್ತು ತರಕಾರಿಗಳಿಂದ ಮಾಡಿದ ಐಸ್ ಕ್ಯಾಂಡಿ ಮತ್ತು ಬ್ಲಾಕ್ ನೀಡಲಾಗುತ್ತದೆ. ಥಾಮಿನ್ ಜಿಂಕೆ ಮತ್ತು ಎಮುಗಳಂತಹ ಇತರ ಜಾತಿಗಳ ಪ್ರಾಣಿ ಮತ್ತು ಪಕ್ಷಿಗಳ ಆವರಣದಲ್ಲಿ ಕೆಸರು ಗುಂಡಿ ಇದ್ದು, ಅವುಗಳನ್ನು ತಂಪಾಗಿಡಲು ಅನುಕೂಲತೆ ಒದಗಿಸಲಾಗಿದೆ.


ಕೆಸರು ಹೊಂಡದಲ್ಲಿ ಟರ್ಕಿ ಕೋಳಿಗಳ ಕುಟುಂಬದ ಜಲಕ್ರೀಡೆ

## ಸುದ್ದಿ 2 ನಿಮಿಷ

### ಭೂಕಕ್ಷೆಗೆ ಮರಳಿದ 'ಪಿಒಇಎಂ–4'

**ಬೆಂಗಳೂರು (ಪಿಟಿಐ):** ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ನಾಲ್ಕನೇ ಆವೃತ್ತಿಯ ಪಿಒಇಎಂ–4 ವಾಹಕವು ಶುಕ್ರವಾರ ಯಶಸ್ವಿಯಾಗಿ ಭೂಕಕ್ಷೆಗೆ ಮರುಪ್ರವೇಶಿಸಿದೆ.

'ಅಂತಿಮವಾಗಿ, ಪಿಒಇಎಂ–4 ಭಾರತೀಯ ಕಾಲಮಾನ ಮಧ್ಯಾಹ್ನ 2.44 ಗಂಟೆಗೆ ಭೂಕಕ್ಷೆಗೆ ಮರಳಿತು' ಎಂದು ಇಸ್ರೊ 'ಎಕ್ಸ್'ನಲ್ಲಿ ಪ್ರಕಟಿಸಿದೆ.

'ಸುರಕ್ಷಿತವಾಗಿ ಭೂಕಕ್ಷೆಗೆ ಮರಳಿರುವುದು ಬಾಹ್ಯಾಕಾಶ ಕ್ಷೇತ್ರದಲ್ಲಿ ಇಸ್ರೊದ ಬದ್ಧತೆ, ಸಾಧನೆಗೆ ಮತ್ತೊಂದು ಗರಿ. ಇಸ್ರೊ ದೀರ್ಘಾವಧಿ ಸುಸ್ಥಿರತೆಗೆ ಒತ್ತು ನೀಡಿರುವುದನ್ನು ಇದು ಬಿಂಬಿಸಿದೆ' ಎಂದು ತಿಳಿಸಿದೆ.

ಕಳೆದ ವರ್ಷ ಡಿಸೆಂಬರ್ 20ರಂದು ಪಿಎಸ್‌ಎಲ್‌ವಿ–ಸಿ60 ವಾಹಕದ ಮೂಲಕ ಸ್ಪೇಡ್‌ಎಕ್ಸ್ ಜೋಡಿ ಉಪಗ್ರಹಗಳನ್ನು ಉಡಾವಣೆ ಮಾಡಲಾಗಿತ್ತು. ಇವುಗಳನ್ನು 475 ಕಿ.ಮೀ ಎತ್ತರದಲ್ಲಿ ಸೇರ್ಪಡೆಗೊಳಿಸುವ (ಡಾಕಿಂಗ್) ಪ್ರಕ್ರಿಯೆಯನ್ನು ಪಿಒಇಎಂ ಯಶಸ್ವಿಯಾಗಿ, ಕಕ್ಷೆಯಲ್ಲಿರುವಾಗಲೇ ನಿಭಾಯಿಸಿತ್ತು ಎಂದು ಹೇಳಿದೆ.

### ಶಿಕ್ಷಕಿ ಹೊಡೆತದಿಂದ ವಿದ್ಯಾರ್ಥಿ ಕಣ್ಣಿಗೆ ಹಾನಿ: ದೂರು ದಾಖಲು



**ಚಿಂತಾಮಣಿ:** ಸರ್ಕಾರಿ ಶಾಲಾ ಶಿಕ್ಷಕಿಯೊಬ್ಬರು ಒಂದನೇ ತರಗತಿ ಬಾಲಕನ ಬಲಗಣ್ಣಿಗೆ ಹೊಡೆದ ಪರಿಣಾಮ ಹಾನಿಯಾಗಿದೆ ಎಂದು ಆರೋಪಿಸಲಾಗಿದೆ. ಶಿಕ್ಷಕಿ ವಿರುದ್ಧ ಸೂಕ್ತ ಕ್ರಮಕ್ಕೆ ಆಗ್ರಹಿಸಿ ಕ್ಷೇತ್ರ ಶಿಕ್ಷಣಾಧಿಕಾರಿಗೆ ಮನವಿ ಸಲ್ಲಿಸಿ ಒಂದು ತಿಂಗಳು ಕಳೆದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ದೂರಿದ ಬಾಲಕನ ತಂದೆ-ತಾಯಿ, ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಮುಂದೆ ಶುಕ್ರವಾರ ಧರಣಿ ನಡೆಸಿದರು.

ಮುರುಗಮಲ್ಲ ಹೋಬಳಿ ಯಗವಕೋಟೆ ಗ್ರಾಮದ ನಟರಾಜ್-ಅಂಜಲಿ ದಂಪತಿ ಪುತ್ರ ಯಶ್ವಂತ್ (8) ಕಣ್ಣಿಗೆ ಹಾನಿಯಾಗಿರುವ ಬಾಲಕ. ಶಾಲೆ ಶಿಕ್ಷಕಿ ಸರಸ್ವತಮ್ಮ ಕೋಲಿನಿಂದ ಹೊಡೆದ ಪರಿಣಾಮ ಬಾಲಕನ ಬಲಗಣ್ಣಿಗೆ ಹಾನಿಯಾಗಿದೆ ಎಂದು ತಾಯಿ ಅಂಜಲಿ ದೂರಿದ್ದಾರೆ. 'ಕಣ್ಣು ನೋವು ವಾಸಿಯಾಗದ ಕಾರಣ ಚಿಕ್ಕಬಳ್ಳಾಪುರ ಆಸ್ಪತ್ರೆಗೆ ಹೋದಾಗ ಕಣ್ಣಿನ ನರ ಮುರಿದಿದೆ. ಶಸ್ತ್ರಚಿಕಿತ್ಸೆ ಮಾಡಬೇಕು ಎಂದು ವೈದ್ಯರು ತಿಳಿಸಿದರು. ಆಸ್ಪತ್ರೆಯ ಎಲ್ಲ ಖರ್ಚು ಭರಿಸುವುದಾಗಿ ಶಾಲೆಯವರು ಭರವಸೆ ನೀಡಿದ್ದರೂ ಅದನ್ನು ಈಡೇರಿಸಲಿಲ್ಲ' ಎಂದು ತಂದೆ– ತಾಯಿ ದೂರಿದರು.

## 'ವಲಸಿಗರು– ವಿದೇಶಿಯರ ಮಸೂದೆ'ಗೆ ರಾಷ್ಟ್ರಪತಿ ಅಂಕಿತ

**ನವದೆಹಲಿ (ಪಿಟಿಐ):** 'ವಲಸಿಗರು ಮತ್ತು ವಿದೇಶಿಯರ ಮಸೂದೆ 2025'ಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಶುಕ್ರವಾರ ಅಂಕಿತ ಹಾಕಿದ್ದು, ಕೇಂದ್ರ ಈ ಬಗ್ಗೆ ಗೆಜೆಟ್ ಅಧಿಸೂಚನೆ ಹೊರಡಿಸಿದೆ.

ಈಗ ಇದು ಕಾಯ್ದೆಯಾಗಿದೆ. ಇದರ ಪ್ರಕಾರ, ನಕಲಿ ಪಾಸ್‌ಪೋರ್ಟ್ ಅಥವಾ ವೀಸಾ ಬಳಸಿ ದೇಶಕ್ಕೆ ಬಂದಿರುವ ಅಥವಾ ದೇಶದಲ್ಲಿ ನೆಲೆಯೂರಿರುವ ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಏಳು ವರ್ಷ ಸಜೆ ಮತ್ತು ₹10 ಲಕ್ಷದವರೆಗೂ ದಂಡ ವಿಧಿಸಲು ಅವಕಾಶವಿದೆ.

## ₹24 ಕೋಟಿ ಆಸ್ತಿ ವಶ


ವಿಶ್ವೇಶ್ವರಯ್ಯ ಬಡಾವಣೆಯ 7ನೇ ಬ್ಲಾಕ್‌ನಲ್ಲಿ ಅನಧಿಕೃತವಾಗಿ ನಿರ್ಮಿಸಿದ್ದ ಶೆಡ್‌ಗಳನ್ನು ತೆರವುಗೊಳಿಸಲಾಯಿತು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ಮುಂದುವರೆಸಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ), ವಿಶ್ವೇಶ್ವರಯ್ಯ ಬಡಾವಣೆಯ 7ನೇ ಬ್ಲಾಕ್‌ನಲ್ಲಿ ₹24 ಕೋಟಿ ಮೌಲ್ಯದ ಆಸ್ತಿಯನ್ನು ಶುಕ್ರವಾರ ವಶಪಡಿಸಿಕೊಂಡಿದೆ.

ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿ, ಗಿಡದಕೋನೇನಹಳ್ಳಿ ಗ್ರಾಮದ ಸರ್ವೆ ನಂಬರ್ 51ರಲ್ಲಿನ 12 ಗುಂಟೆ ಪ್ರದೇಶದಲ್ಲಿ ಅನಧಿಕೃತವಾಗಿ ನಿರ್ಮಾಣವಾಗಿದ್ದ ಶೆಡ್ ಅನ್ನು ತೆರವುಗೊಳಿಸಿ, ಸ್ವತ್ತನ್ನು ಪ್ರಾಧಿಕಾರವು ವಶಪಡಿಸಿಕೊಂಡಿತು.

ಕಾರ್ಯಾಚರಣೆಯನ್ನು ಸ್ಥಳೀಯ ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ಬಿಡಿಎ ಕಾರ್ಯನಿರತ ಪಡೆಯ ಎಸ್‌ಪಿ, ಪಶ್ಚಿಮ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ರವಿಕುಮಾರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಕೈಗೊಂಡರು.

## ಚಿಲ್ಲರೆ ಮದ್ಯ ಮಾರಾಟ: ಲಾಭಾಂಶ ಹೆಚ್ಚಿಸಲು ಆಗ್ರಹ

ಪ್ರಜಾವಾಣಿ ವಾರ್ತೆ



**ಬೆಂಗಳೂರು:** ಚಿಲ್ಲರೆ ಮದ್ಯ ಮಾರಾಟದ ಮೇಲೆ ಶೇಕಡ 20ರಷ್ಟು ಲಾಭಾಂಶ, ಅಬಕಾರಿ ಶುಲ್ಕ ಕಡಿತ ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಬೆಂಗಳೂರು ನಗರ ಮದ್ಯ ವ್ಯಾಪಾರಿಗಳ ಸಂಘವು ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಲೋಕೇಶ್, 'ಚಿಲ್ಲರೆ ಮದ್ಯ ಮಾರಾಟದ ಮೇಲೆ ಸದ್ಯ ಶೇ 10ರಷ್ಟು ಲಾಭಾಂಶವಿದೆ. ಕನಿಷ್ಠ ಶೇ 20ರಷ್ಟಾದರೂ ಲಾಭಾಂಶ ಒದಗಿಸಬೇಕು. ನವದೆಹಲಿ ಸೇರಿ ವಿವಿಧ ರಾಜ್ಯಗಳಲ್ಲಿ ಕರ್ನಾಟಕಕ್ಕೆ ಹೋಲಿಸಿದಲ್ಲಿ ಅಬಕಾರಿ ಶುಲ್ಕ ಕಡಿಮೆ ಇದೆ. ಆದ್ದರಿಂದ ಇಲ್ಲಿ ಅಬಕಾರಿ ಶುಲ್ಕವನ್ನು ಕಡಿಮೆ ಮಾಡಬೇಕು. ಯಾವುದೇ ಕಾರಣಕ್ಕೂ ಸನ್ನದು ಶುಲ್ಕವನ್ನು ಹೆಚ್ಚಳ ಮಾಡಬಾರದು. ಇತ್ತೀಚಿನ ವರ್ಷಗಳಲ್ಲಿ ಮಳಿಗೆಗಳ ಸಂಖ್ಯೆ ಮಾತ್ರ ಹೆಚ್ಚಳವಾಗಿದ್ದು, ಮದ್ಯ ಮಾರಾಟ ಗಣನೀಯವಾಗಿ ವೃದ್ಧಿಯಾಗಿಲ್ಲ' ಎಂದರು.

ಸಂಘದ ಪ್ರಧಾನ ಕಾರ್ಯದರ್ಶಿ ಕರುಣಾಕರ ಹೆಗ್ಡೆ, 'ಸರ್ಕಾರವು ನಮ್ಮಿಂದ ₹40 ಸಾವಿರ ಕೋಟಿ ವರಮಾನವನ್ನು ನಿರೀಕ್ಷಿಸುತ್ತದೆ. ಆದರೆ, ಮದ್ಯ ಮಾರಾಟಕ್ಕೆ ಪೂರಕವಾದ ವಾತಾವರಣವನ್ನು ಕಲ್ಪಿಸಿಲ್ಲ. ಸಿ.ಎಲ್– 2 (ವೈನ್ ಶಾಪ್) ಪರವಾನಗಿ ಹೊಂದಿರುವ ಮದ್ಯ ಮಾರಾಟ ಮಳಿಗೆಗಳಲ್ಲಿ ಮದ್ಯ ಸೇವಿಸಲು ಅವಕಾಶ ನೀಡಬೇಕು. ಇದರಿಂದ ಸಾರ್ವಜನಿಕ ಪ್ರದೇಶದಲ್ಲಿ ಮದ್ಯಪಾನ ಮಾಡುವುದನ್ನು ತಡೆಯಲು ಸಾಧ್ಯ' ಎಂದು ಹೇಳಿದರು.

## ಶಿಕ್ಷಣ ಸಹಕಾರ: ಪೆರುಗ್ವೆ–ಕಾಂಬೋಡಿಯಾ ಆಸಕ್ತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಭಾರತದಲ್ಲಿರುವ ಪೆರುಗ್ವೆ ರಾಯಭಾರಿ ಫ್ಲೆಮಿಂಗ್ ಡುವಾರ್ಟೆ ಹಾಗೂ ಕಾಂಬೋಡಿಯಾದ ಕಾನ್ಸುಲ್ ಕಾರ್ತಿಕ್ ತಲ್ಲಂ ನೇತೃತ್ವದ ನಿಯೋಗ ಶುಕ್ರವಾರ ಬೆಂಗಳೂರು ನಗರ ವಿಶ್ವವಿದ್ಯಾಲಯದ (ಬಿಸಿಯು) ಜ್ಞಾನಜ್ಯೋತಿ ಕ್ಯಾಂಪಸ್‌ಗೆ ಭೇಟಿ ನೀಡಿತು.

ಬಿಸಿಯು ಸಿಂಡಿಕೇಟ್ ಸದಸ್ಯ ಬಿ.ಆರ್.ಸುಪ್ರೀತ್ ಅವರ ಆಹ್ವಾನದ ಮೇರೆಗೆ ಭೇಟಿ ನೀಡಿದ ಪೆರುಗ್ವೆ–ಕಾಂಬೋಡಿಯಾ ನಿಯೋಗ, ಶೈಕ್ಷಣಿಕ ಸಹಭಾಗಿತ್ವ ಕುರಿತು ಬಿಸಿಯು ಕುಲಪತಿ ಪ್ರೊ. ಲಿಂಗರಾಜ ಗಾಂಧಿ ಹಾಗೂ ಹಿರಿಯ ಪ್ರಾಧ್ಯಾಪಕರು ಹಾಗೂ ಆಡಳಿತ ವರ್ಗದೊಂದಿಗೆ ಚರ್ಚೆ ನಡೆಸಿತು. ಶೈಕ್ಷಣಿಕ ಮತ್ತು ಸಂಶೋಧನಾ ಸಹಯೋಗದ ಅವಕಾಶಗಳ ಕುರಿತು ಪರಾಮರ್ಶಿಸಿತು.

ಲಿಂಗರಾಜ ಗಾಂಧಿ ಅವರು, 'ಪ್ರಸ್ತುತ ವಿಶ್ವವಿದ್ಯಾಲಯವು ಹೊಸ ಪೀಳಿಗೆಯ ಅಗತ್ಯಗಳಿಗೆ ಅನುಗುಣವಾಗಿ ವಿಜ್ಞಾನ ಮತ್ತು ತಂತ್ರಜ್ಞಾನ, ವಾಣಿಜ್ಯ ಮತ್ತು ಆಡಳಿತ ಹಾಗೂ ಮಾನವಿಕ ಶಾಸ್ತ್ರ ವಿಭಾಗಗಳಲ್ಲಿ ನೂತನ ಕೋರ್ಸ್‌ಗಳನ್ನು ಆರಂಭಿಸಿದೆ. 12 ವಿದೇಶಿ ವಿಶ್ವವಿದ್ಯಾಲಯಗಳೊಂದಿಗೆ ಸಹಭಾಗಿತ್ವ ಹೊಂದಿದೆ' ಎಂದು ವಿವರಿಸಿದರು.



ಶೈಕ್ಷಣಿಕ ಸಹಭಾಗಿತ್ವ ಕುರಿತ ಚರ್ಚೆಯಲ್ಲಿ ಬಿಸಿಯು ವಿತ್ತಾಧಿಕಾರಿ ಎಂ.ವಿ. ವಿಜಯಲಕ್ಷ್ಮಿ, ಕುಲಸಚಿವರಾದ ಟಿ.ಜವರೇಗೌಡ, ಪ್ರೊ. ಬಿ.ರಮೇಶ್, ಪೆರುಗ್ವೆ ರಾಯಭಾರಿ ಫ್ಲೆಮಿಂಗ್ ಡುವಾರ್ಟೆ, ಕುಲಪತಿ ಪ್ರೊ.ಲಿಂಗರಾಜ ಗಾಂಧಿ, ಸಿಂಡಿಕೇಟ್ ಸದಸ್ಯ ಬಿ.ಆರ್. ಸುಪ್ರೀತ್, ಕಾಂಬೋಡಿಯಾದ ಕಾನ್ಸುಲ್ ಕಾರ್ತಿಕ್ ತಲ್ಲಂ, ನಿಯೋಗದ ಸದಸ್ಯ ನವಾಬ್ ನಜಾಫ್ ಆಲಿ ಖಾನ್ ಭಾಗವಹಿಸಿದ್ದರು

ಬಿಸಿಯು ಜೊತೆ ಶೈಕ್ಷಣಿಕ ಸಹಭಾಗಿತ್ವ ಕುರಿತು ಆಸಕ್ತಿ ವ್ಯಕ್ತಪಡಿಸಿದ ಫ್ಲೆಮಿಂಗ್ ಡುವಾರ್ಟೆ, 'ಶೀಘ್ರದಲ್ಲೇ ಶಿಕ್ಷಣ ಸಚಿವರ ನೇತೃತ್ವದ ನಿಯೋಗ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಲಿದೆ. ಆಗ ಒಡಂಬಡಿಕೆ ಮಾಡಿಕೊಳ್ಳುತ್ತೇವೆ. ಶೈಕ್ಷಣಿಕ ವಿನಿಯಮ ಕಾರ್ಯಕ್ರಮವನ್ನೂ ರೂಪಿಸುತ್ತೇವೆ' ಎಂದು ಪ್ರಕಟಿಸಿದರು.

ಸಿಂಡಿಕೇಟ್ ಸದಸ್ಯರಾದ ಪ್ರೊ. ಲಕ್ಷ್ಮಿನಾರಾಯಣ, ಜಾಗತಿಕ ಭಾಷೆಗಳ ಕೇಂದ್ರದ ಅಧ್ಯಕ್ಷೆ ಪ್ರೊ. ಜ್ಯೋತಿ ವೆಂಕಟೇಶ್ ಹಾಗೂ ವಿವಿಧ ನಿಕಾಯಗಳ ಡೀನ್ ಮತ್ತು ವಿಭಾಗ ಮುಖ್ಯಸ್ಥರು ಉಪಸ್ಥಿತರಿದ್ದರು.

ಜಲಮಂಡಳಿಯ ಕಾಮಗಾರಿ • ಕರಿಓಬನಹಳ್ಳಿ–ಅಂದ್ರಹಳ್ಳಿ ರಸ್ತೆಯಲ್ಲಿ ಸಂಚಾರ ಸಂಕಟ

# ಗುಂಡಿಗಳ ರಸ್ತೆಯಲ್ಲಿ ಹುಡುಕಬೇಕು ಡಾಂಬರು

• ಗಾಣಧಾಳು ಶ್ರೀಕಂಠ

**ಬೆಂಗಳೂರು:** ಡಾಂಬರು ಹೊದ್ದ ವಿಶಾಲವಾದ ಮುಖ್ಯರಸ್ತೆಯಲ್ಲಿ ಮಾರುದ್ದಕ್ಕೆ ಗುಂಡಿಗಳು, ಕೆಲವು ಕಡೆ ಹೊಂಡಗಳು. ಗುಂಡಿ–ಹೊಂಡಗಳಲ್ಲಿ ಒಮ್ಮೊಮ್ಮೆ ಜಿನುಗುವ ನೀರು. ಗುಂಡಿಗಳ ಕಾರಣದಿಂದಾಗಿ ದಿಢೀರನೆ ಸೃಷ್ಟಿಯಾಗುವ ದಟ್ಟಣೆ, ವಾಹನ ಸವಾರರ ಪರದಾಟ...

ಎಂಟನೇ ಮೈಲಿ–ಹೇರೋಹಳ್ಳಿ ಕ್ರಾಸ್(ಮಾಗಡಿ ರಸ್ತೆ) ಸಂಪರ್ಕಿಸುವ ರಸ್ತೆಯಲ್ಲಿ, ಗಂಗಾ ಇಂಟರ್‌ನ್ಯಾಷನಲ್ ಶಾಲೆಯಿಂದ–ಅಂದ್ರಹಳ್ಳಿ ಭಾಗದ ರಸ್ತೆಯ ದುಃಸ್ಥಿತಿ ಇದು.

ಹದಿಮೂರು ಕಿ.ಮೀ ಉದ್ದವಿರುವ ಈ ರಸ್ತೆಯಲ್ಲಿ, ಡಿ.ಗ್ರೂಪ್ ಲೇಔಟ್‌ನಿಂದ ವಿದ್ಯಮಾನ್ಯನಗರ, ಅಂದ್ರಹಳ್ಳಿ, ತಿಗಳರಪಾಳ್ಯ, ಕರಿಓಬನಹಳ್ಳಿ, ಗಂಗಾ ಇಂಟರ್‌ನ್ಯಾಷನಲ್ ಶಾಲೆವರೆಗಿನ ರಸ್ತೆಯಲ್ಲಿ ಗುಂಡಿಗಳಿವೆ. ಅಳತೆಯಿಟ್ಟಂತೆ ಹತ್ತಿಪ್ಪತ್ತು ಮೀಟರ್‌ಗೆ ಗುಂಡಿಗಳಾಗಿವೆ.

ಯಶವಂತಪುರ ವಿಧಾನಸಭಾ ಕ್ಷೇತ್ರ, ಆರ್. ಆರ್ ನಗರ ವಲಯದ ದೊಡ್ಡಬಿದರಕಲ್ಲು ವಾರ್ಡ್ ವ್ಯಾಪ್ತಿಗೆ ಸೇರುವ ರಸ್ತೆಯಲ್ಲಿ ಕಳೆದ ವರ್ಷ ಡಾಂಬರೀಕರಣ ಮಾಡಲಾಗಿತ್ತು. ಜಲಮಂಡಳಿಯವರು ಕಾವೇರಿ ನೀರಿನ ಕೊಳವೆಗಳನ್ನು ಅಳವಡಿಸಲು ರಸ್ತೆ ಅಗೆದಿದ್ದಾರೆ. ಕೆಲಸ ಮುಗಿದ ನಂತರ ರಸ್ತೆ ದುರಸ್ತಿಗೊಳಿಸಿಲ್ಲ. ಗುಂಡಿಗಳು ಹಾಗೇ ಉಳಿದುಕೊಂಡಿವೆ. ಅಧಿಕಾರಿಗಳ ನಿಲಕ್ಷ್ಯದಿಂದ ಈ ಸಮಸ್ಯೆ ಸೃಷ್ಟಿಯಾಗಿದೆ' ಎಂದು ತಿಗಳರಪಾಳ್ಯದ ನಿವಾಸಿ ಕಿರಣ್ ಗೌಡ ಆರೋಪಿಸುತ್ತಾರೆ.

**ಸಂಚಾರ ನಿಧಾನ :** ತಿಗಳರಪಾಳ್ಯ ಭಾಗದಲ್ಲಿ ಸಣ್ಣ ಮತ್ತು ಸೂಕ್ಷ್ಮ ಕೈಗಾರಿಕೆಗಳಿವೆ. ರಸ್ತೆಗಳಲ್ಲಿ ಗುಂಡಿಗಳಿರುವ ಕಾರಣದಿಂದಾಗಿ ವಾಹನ ಸಂಚಾರ ನಿಧಾನವಾಗುತ್ತದೆ. ದಿಢೀರನೆ ಸಂಚಾರ ದಟ್ಟಣೆ ಸೃಷ್ಟಿಯಾಗುತ್ತದೆ. ಸಂಜೆ ಮತ್ತು ಬೆಳಗಿನ ಅವಧಿಯಲ್ಲಿ ದಟ್ಟಣೆ ಹೆಚ್ಚಿರುತ್ತದೆ ಎಂದು ಸ್ಥಳೀಯ ನಿವಾಸಿಗಳು ಹೇಳಿದರು.

ರಸ್ತೆಯುಲ್ಲಿರುವ ವೃತ್ತಗಳು, ತಿರುವುಗಳಲ್ಲೇ ಹೆಚ್ಚು ಗುಂಡಿಗಳಾಗಿವೆ. ಅಂದ್ರಹಳ್ಳಿ ಮುಖ್ಯರಸ್ತೆಯ ಪೆಟ್ರೋಲ್ ಬಂಕ್ ಬಳಿಯ ತಿರುವಿನಲ್ಲಿ ದೊಡ್ಡ ದೊಡ್ಡ ಹೊಂಡಗಳಿವೆ. ಈ ರಸ್ತೆಯಲ್ಲಿ ಆಟೊಗಳು, ದ್ವಿಚಕ್ರ ವಾಹನಗಳು ಗುಂಡಿಗಳನ್ನು ಏರಿಳಿಯುತ್ತಲೇ ಸಾಗುತ್ತವೆ.


ಅಂದ್ರಹಳ್ಳಿ ಮುಖ್ಯ ರಸ್ತೆಯಲ್ಲಿ ಗುಂಡಿ ಬಿದ್ದಿದೆ
ಚಿತ್ರ: ಎಂ.ಎಸ್.ಮಂಜುನಾಥ್

**ಗುಂಡಿಗಳಿದ್ದೆಡೆ ದಟ್ಟಣೆ :** 'ಈ ರಸ್ತೆಯಲ್ಲಿ ಎಲ್ಲಾದರೂ ವಾಹನಗಳ ದಟ್ಟಣೆ ಕಾಣುತ್ತಿದ್ದರೆ, ಅಲ್ಲಿ ಗುಂಡಿಗಳಿವೆ ಎಂದು ಅರ್ಥ ಮಾಡಿಕೊಳ್ಳಬೇಕು' ಎಂದು ಸ್ಥಳೀಯರೊಬ್ಬರು ತಿರುವಿನಲ್ಲಿ ನಿಂತಿದ್ದ ವಾಹನಗಳನ್ನು ತೋರಿಸಿ ಹೇಳಿದರು. 'ರಸ್ತೆ ದೂರದ ನೋಟಕ್ಕೆ ಚೆನ್ನಾಗಿದೆ ಎಂದು ಎನ್ನಿಸುತ್ತದೆ. ರಸ್ತೆಯಲ್ಲಿ ಸಾಗುತ್ತಿರುವಾಗ ಧುತ್ತನೆ ಗುಂಡಿಗಳು ಎದುರಾಗುತ್ತವೆ. ಆಗ ಈ ರಸ್ತೆಯ ಸಮಸ್ಯೆ ಅರ್ಥವಾಗುತ್ತದೆ' ಎಂದು ಸ್ಥಳೀಯ ಉದ್ಯಮಿಯೊಬ್ಬರು ವಿವರಿಸಿದರು.

### ರಸ್ತೆ ದುರಸ್ತಿಗೆ ಆಗ್ರಹ


ಆರ್.ಗೋಪಾಲ್

ಜಲಮಂಡಳಿಯವರು ಕುಡಿಯುವ ನೀರಿನ ಕೊಳವೆ ಅಳವಡಿಸಲು ರಸ್ತೆಗಳನ್ನು ಅಗೆದು ಸರಿಯಾಗಿ ಮುಚ್ಚದ ಕಾರಣ ಗುಂಡಿಗಳು ಬಿದ್ದಿವೆ. ವೃದ್ಧರು, ಮಕ್ಕಳು ದ್ವಿಚಕ್ರವಾಹನ ಸವಾರರು ಬಿದ್ದು ಗಾಯಗೊಂಡಿದ್ದಾರೆ. ಗುತ್ತಿಗೆದಾರರು ರಸ್ತೆ ಅಗೆದು ಹಣ ತೆಗೆದುಕೊಂಡು ಹೋಗುತ್ತಾರೆ. ರಸ್ತೆ ಸರಿಪಡಿಸಬೇಕಾದ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ. ತಕ್ಷಣ ರಸ್ತೆಯನ್ನು ದುರಸ್ತಿಗೊಳಿಸಬೇಕು' ಎಂದು ಅಂದ್ರಹಳ್ಳಿಯ ನಿವಾಸಿ ಆರ್.ಗೋಪಾಲ್ ಆಗ್ರಹಿಸಿದ್ದಾರೆ.

### ಕಳಪೆ ಗುಣಮಟ್ಟವೇ ಕಾರಣ



ಅಂದ್ರಹಳ್ಳಿಯ ಡಿ ಗ್ರೂಪ್ ಲೇಔಟ್‌ನಿಂದ ಕರಿಓಬನಹಳ್ಳಿವರೆಗಿನ ರಸ್ತೆಯಲ್ಲಿ ಜಲಮಂಡಳಿಯವರು ನೀರು ಸೋರಿಕೆಯಾಗುತ್ತಿದ್ದ ಜಾಗಗಳಲ್ಲಿ ಎರಡು ಮೂರು ಬಾರಿ ದುರಸ್ತಿ ಕಾಮಗಾರಿ ನಡೆಸಿದರು. ಕೊಳವೆಗಳನ್ನು ದುರಸ್ತಿ ಮಾಡಿದ ಜಾಗದಲ್ಲಿ ಗುಂಡಿಗಳನ್ನು ಸರಿಯಾಗಿ ಮುಚ್ಚಿಲ್ಲ. ಗುಣಮಟ್ಟದ ಕಾಮಗಾರಿ ಕೈಗೊಳ್ಳದ ಕಾರಣ, ರಸ್ತೆಗಳು ಗುಂಡಿಗಳಾಗಿವೆ. ಸಾರ್ವನಿಕರು ಸುಗಮವಾಗಿ ಓಡಾಡಲು ಸಾಧ್ಯವಾಗುತ್ತಿಲ್ಲ. ಗುತ್ತಿಗೆದಾರರು ಮಾಡಿದ ಕಾಮಗಾರಿಯನ್ನು ಅಧಿಕಾರಿಗಳು ಸರಿಯಾಗಿ ಪರಿಶೀಲಿಸಿಲ್ಲ. ತಕ್ಷಣ ರಸ್ತೆ ದುರಸ್ತಿಯಾಗಬೇಕು. ಕಳಪೆ ಕಾಮಗಾರಿ ಕೈಗೊಂಡವರಿಗೆ ದಂಡ ವಿಧಿಸಬೇಕು

**ಶಿವಕುಮಾರ್,** ಅಧ್ಯಕ್ಷ, ಪೀಣ್ಯ ಕೈಗಾರಿಕಾ ಸಂಘ

### ಗುಂಡಿಗಳಾಗಲು ಕಾರಣ ?

ಬೆಂಗಳೂರು ಜಲಮಂಡಳಿಯವರು ವರ್ಷದ ಹಿಂದೆ ಕಾವೇರಿ 5ನೇ ಹಂತದ ಯೋಜನೆಯಡಿ ನೀರು ಪೂರೈಕೆಗಾಗಿ ರಸ್ತೆಯನ್ನು ಅಗೆದು ಕೊಳವೆಗಳನ್ನು ಜೋಡಿಸಿದ್ದಾರೆ. ನಂತರ ಮಣ್ಣು ಮಚ್ಚಿ, ರಸ್ತೆಗೆ ಡಾಂಬರ್ ಹಾಕಲಾಗಿದೆ. ಪ್ರಾಯೋಗಿಕವಾಗಿ ಕೊಳವೆಯಲ್ಲಿ ನೀರು ಹರಿಸಿದಾಗ ಎಲ್ಲೆಲ್ಲಿ ನೀರು ಸೋರುತ್ತಿತ್ತೋ ಆ ಜಾಗವನ್ನು ಪುನಃ ಅಗೆದು, ಕೊಳವೆ ದುರಸ್ತಿಗೊಳಿಸಿದ್ದಾರೆ. ಆದರೆ ರಸ್ತೆ ಸರಿಪಡಿಸಲಿಲ್ಲ. ಇದರಿಂದ ಕೆಲವು ಕಡೆ ರಸ್ತೆ ಮಧ್ಯೆ ಸಣ್ಣ ಹೊಂಡಗಳೇ ನಿರ್ಮಾಣವಾಗಿವೆ. ಇವೇ ಸಂಚಾರಕ್ಕೆ ತೊಡಕಾಗಿವೆ ಎನ್ನುವುದು ಸ್ಥಳೀಯರ ಆರೋಪ.


ಅಂದ್ರಹಳ್ಳಿ ಮುಖ್ಯ ರಸ್ತೆಯಲ್ಲಿ ಕೊಳವೆ ಜೋಡಿಸಲು ಅಗೆದ ರಸ್ತೆಯನ್ನು ಹಾಗೇ ಬಿಟ್ಟಿರುವುದು

## ಅನಂತ್ ಅಂಬಾನಿ ಪಾದಯಾತ್ರೆ



ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಿಲಯನ್ಸ್ ಇಂಡಸ್ಟ್ರೀಸ್ ಮುಖ್ಯಸ್ಥ ಮುಕೇಶ್ ಅಂಬಾನಿ ಅವರ ಪುತ್ರ ಅನಂತ್ ಅಂಬಾನಿ ಅವರು, ತಮ್ಮ ಪೂರ್ವಜರ ಹುಟ್ಟೂರಾದ ಜಾಮ್‌ನಗರದಿಂದ ದ್ವಾರಕಾಕ್ಕೆ 170 ಕಿ.ಮೀ. ಪಾದಯಾತ್ರೆ ಕೈಗೊಂಡಿದ್ದಾರೆ.

ಮಾರ್ಚ್ 29ರಂದು ಪಾದಯಾತ್ರೆ ಆರಂಭಿಸಿದ ಅವರು, ಪ್ರತಿದಿನ ಸುಮಾರು 20 ಕಿ.ಮೀ. ದೂರ ಕ್ರಮಿಸುತ್ತಿದ್ದಾರೆ. ಪ್ರತಿ ರಾತ್ರಿ ಸುಮಾರು ಏಳು ಗಂಟೆ ನಡೆಯುತ್ತಿದ್ದಾರೆ. ಏಪ್ರಿಲ್ 8ರಂದು ತಮ್ಮ 30ನೇ ಹುಟ್ಟುಹಬ್ಬದ ಒಂದು ದಿನ ಮೊದಲು ದ್ವಾರಕಾಕ್ಕೆ ತಲುಪಲಿದ್ದಾರೆ.

ಅವರು ಅಪರೂಪದ ಹಾರ್ಮೋನು ಕಾಯಿಲೆಯಾದ ಕುಶಿಂಗ್ ಸಿಂಡ್ರೋಮ್, ಅನಾರೋಗ್ಯಕರ ಬೊಜ್ಜು, ಅಸ್ತಮಾ ಮತ್ತು ತೀವ್ರವಾದ ಶ್ವಾಸಕೋಶದ ಕಾಯಿಲೆಯಿಂದ ಬಳಲುತ್ತಿದ್ದಾರೆ. ಈ ನಡುವೆಯೂ ಪಾದಯಾತ್ರೆ ಕೈಗೊಂಡಿದ್ದಾರೆ. ಪಾದಯಾತ್ರೆ ಯುದ್ದಕ್ಕೂ ಹನುಮಾನ್ ಚಾಲೀಸಾ, ಸುಂದರಕಾಂಡ ಮತ್ತು ದೇವಿ ಸ್ತೋತ್ರವನ್ನು ಪಠಿಸುತ್ತಾರೆ.

# ಮಡಿಕೇರಿಯಲ್ಲಿ ಭಾರಿ ಮಳೆ

ಪ್ರಜಾವಾಣಿ ವಾರ್ತೆ


ಮಡಿಕೇರಿಯಲ್ಲಿ ಶುಕ್ರವಾರ ಸುರಿದ ಭಾರಿ ಮಳೆಗೆ ರಸ್ತೆಯಲ್ಲಿ ನೀರು ಹರಿಯಿತು

**ಮಡಿಕೇರಿ/ಹುಬ್ಬಳ್ಳಿ:** ಮಡಿಕೇರಿಯಲ್ಲಿ ಶುಕ್ರವಾರ ಸಂಜೆ ಗುಡುಗು, ಸಿಡಿಲಿನಿಂದ ಕೂಡಿದ ಧಾರಾಕಾರ ಮಳೆಯು ಸುಮಾರು ಅರ್ಧಗಂಟೆಗೂ ಹೆಚ್ಚು ಕಾಲ ಸುರಿಯಿತು. ಇದು ವರ್ಷದ ಮೊದಲ ಬಿರುಸಿನ ಮಳೆ. ತಾಲ್ಲೂಕಿನ ನಾಪೋಕ್ಲು ಹೋಬಳಿಯಲ್ಲಿ ಸಾಧಾರಣ ಮಳೆಯಾಯಿತು. ಮೈಸೂರಿನಲ್ಲಿ ರಾತ್ರಿ ಕೆಲಕಾಲ ಮಳೆ ಸುರಿಯಿತು.

ಬಳ್ಳಾರಿ ಜಿಲ್ಲೆಯಲ್ಲಿ ಎರಡನೇ ದಿನವೂ ಮಳೆ ಮುಂದುವರಿದಿದ್ದು, ವಿಜಯನಗರ ಹಾಗೂ ಹಾವೇರಿ ಜಿಲ್ಲೆಯಲ್ಲೂ ಮಳೆಯಾಗಿದೆ.

ಬಳ್ಳಾರಿ ತಾಲ್ಲೂಕಿನಲ್ಲಿ 0.21 ಸೆಂ.ಮೀ, ಸಂಡೂರಿನಲ್ಲಿ 0.21, ಸಿರುಗುಪ್ಪ 0.73, ಕುರುಗೋಡು 0.75 ಮತ್ತು ಕಂಪ್ಲಿ 0.40 ಸೆಂ.ಮೀ ಮಳೆಯಾಗಿದೆ.

ವಿಜಯನಗರ ಜಿಲ್ಲೆಯಲ್ಲಿ 1.40 ಸೆಂ.ಮೀ ಮಳೆಯಾಗಿದೆ. ಹರಪನಹಳ್ಳಿ ತಾಲ್ಲೂಕಿನ ಮೈದೂರಿನಲ್ಲಿ ಗುರುವಾರ ತಡರಾತ್ರಿ ಸುರಿದ ಮಳೆಗೆ ಮನೆ ಚಾವಣಿ ಕುಸಿದು, ಮಹಿಳೆಗೆ ಗಾಯವಾಗಿದೆ.

ಹಾವೇರಿ ಜಿಲ್ಲೆಯ ಹಾವೇರಿ, ಹಾನಗಲ್, ರಾಣೆಬೆನ್ನೂರು, ಬ್ಯಾಡಗಿ, ಹಿರೇಕೆರೂರು, ರಟ್ಟೀಹಳ್ಳಿ, ಶಿಗ್ಗಾವಿ ಹಾಗೂ ಸವಣೂರು ತಾಲ್ಲೂಕಿನಲ್ಲಿ ಸಂಜೆ ಮಳೆ ಸುರಿಯಿತು.

ಕೋಲಾರ ಜಿಲ್ಲೆಯ ವಿವಿಧೆಡೆ ಶುಕ್ರವಾರ ಬಿರುಸಿನ ಮಳೆಯಾಯಿತು. ಬಂಗಾರಪೇಟೆ, ಕೆಜಿಎಫ್ ಸೇರಿದಂತೆ ಹಲವೆಡೆ ಎರಡು ದಿನಗಳಿಂದ ಮಳೆಯಾಗುತ್ತಿದೆ. ಮುಳಬಾಗಿಲು ತಾಲ್ಲೂಕಿನ ಮುಷ್ಟೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 7.2 ಸೆಂ.ಮೀ. ಮಳೆಯಾಗಿದೆ.

### ಸ್ಥಾಪನೆಯಾದ ಮೂರು ದಶಕದಲ್ಲಿ ಇದೇ ಮೊದಲ ಬಾರಿಗೆ ನಿಂತ ಕಾರ್ಯಾಚರಣೆ

# ಕೈಗಾ: ಮೊದಲ ಘಟಕ ಕಾರ್ಯ ಸ್ಥಗಿತ

• ಗಣಪತಿ ಹೆಗಡೆ


ಕಾರವಾರ ತಾಲ್ಲೂಕಿನ ಕೈಗಾದಲ್ಲಿರುವ ಅಣು ವಿದ್ಯುತ್ ಉತ್ಪಾದನಾ ಸ್ಥಾವರ

**ಕಾರವಾರ:** ತಾಲ್ಲೂಕಿನ ಕೈಗಾದಲ್ಲಿರುವ ಅಣು ವಿದ್ಯುತ್ ಉತ್ಪಾದನಾ ಸ್ಥಾವರಗಳ ಪೈಕಿ 1ನೇ ಘಟಕದ ಕಾರ್ಯ ಚಟುವಟಿಕೆ ಸ್ಥಗಿತಗೊಂಡಿದೆ. ಘಟಕದ ಕೂಲಂಟ್ ಚಾನೆಲ್‌ಗಳನ್ನು (ಶೀತಕ ಕೊಳವೆ) ಮರು ಅಳವಡಿಸಬೇಕಿದೆ.

ನಿರ್ವಹಣೆ ಕಾರಣಕ್ಕೆ ಕೈಗಾದಲ್ಲಿನ ನಾಲ್ಕು ಅಣು ವಿದ್ಯುತ್ ಉತ್ಪಾದನೆ ಸ್ಥಾವರಗಳನ್ನು ಆಗಾಗ್ಗೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗುತ್ತದೆ. ಆದರೆ, ರಿಯಾಕ್ಟರ್‌ನ ಶೀತಕ ಕೊಳವೆಗಳನ್ನು ಹೊಸದಾಗಿ ಜೋಡಿಸಬೇಕಿದ್ದು, ಮೊದಲ ಘಟಕದ ಕಾರ್ಯವನ್ನು ಇದೇ ಮೊದಲ ಬಾರಿಗೆ ದೀರ್ಘ ಅವಧಿಗೆ ಸ್ಥಗಿತಗೊಳಿಸಲಾಗಿದೆ.

1989ರಲ್ಲಿ ಭಾರಜಲ ಮಾದರಿಯ ರಿಯಾಕ್ಟರ್ ಒಳಗೊಂಡ ಅಣು ವಿದ್ಯುತ್ ಉತ್ಪಾದನಾ ಸ್ಥಾವರ ನಿರ್ಮಿಸುವ ಪ್ರಕ್ರಿಯೆ ಆರಂಭಗೊಂಡಿತು. 1998ರಲ್ಲಿ ಕಾರ್ಯಾರಂಭಿಸಿದ ಮೊದಲ ಘಟಕವು 220 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸುತ್ತದೆ. ಸತತ 27 ವರ್ಷಗಳಿಂದ ವಿದ್ಯುತ್ ಉತ್ಪಾದಿಸುತ್ತಿದ್ದ ಘಟಕದ ಚಟುವಟಿಕೆ ಮೊದಲ ಬಾರಿ ಸ್ಥಗಿತಗೊಂಡಿದೆ.

ಇದೇ ಘಟಕವು 2018ರ ಡಿಸೆಂಬರ್ 10 ರಂದು ಸತತ 962 ದಿನ ವಿದ್ಯುತ್ ಉತ್ಪಾದಿಸುವ ಮೂಲಕ ಇಂಗ್ಲೆಂಡ್‌ನ ಹೇಶಮ್ ಅಣುಸ್ಥಾವರದ ದಾಖಲೆಯನ್ನು ಅಳಿಸಿ, ವಿಶ್ವ ದಾಖಲೆ ಬರೆದಿತ್ತು.

> **ಅಣು ಸ್ಥಾವರದ ಶೀತಕ ಕೊಳವೆಗಳನ್ನು ಹೊಸದಾಗಿ ಜೋಡಿಸಲು ಹೆಚ್ಚು ಸಮಯ ಬೇಕು. ಒಂದು ವಾರದಿಂದ ಘಟಕ ಸ್ಥಗಿತಗೊಂಡಿದೆ**
> **ಬಿ.ವಿನೋದ ಕುಮಾರ್**
> ನಿರ್ದೇಶಕ, ಕೈಗಾ ಎನ್‌ಪಿಸಿಐಎಲ್

'ಅಣು ವಿದ್ಯುತ್ ಉತ್ಪಾದನೆ ಸ್ಥಾವರದ ಮೊದಲ ಘಟಕದಲ್ಲಿ ಅಣು ಶಕ್ತಿ ಉತ್ಪಾದನೆಗೆ ಯುರೇನಿಯಂ ಬಂಡಲ್‌ಗಳನ್ನು ರವಾನಿಸುವ ಮತ್ತು ಸ್ಥಾವರದಲ್ಲಿ ತಾಪಮಾನ ನಿಯಂತ್ರಿಸುವ 306 ಕೊಳವೆಗಳಿವೆ. ಅಧಿಕ ತಾಪಮಾನದಿಂದ ಅವು ಬಾಗುವ ಸಾಧ್ಯತೆ ಇರುತ್ತದೆ. ಅದಕ್ಕೆ ನಿಗದಿತ ಅವಧಿಗೆ ಅವುಗಳನ್ನು ಬದಲಿಸಿ, ಹೊಸದು ಅಳವಡಿಸಬೇಕು. ಪ್ರತಿ 25 ರಿಂದ 30 ವರ್ಷಕ್ಕೊಮ್ಮೆ ಈ ಪ್ರಕ್ರಿಯೆ ನಡೆಯುವುದು ಸಹಜ' ಎಂದು ಕೈಗಾದ ಭಾರತೀಯ ಅಣು ವಿದ್ಯುತ್ ಉತ್ಪಾದನಾ ನಿಗಮ ಲಿಮಿಟೆಡ್‌ನ (ಎನ್‌ಪಿಸಿಐಎಲ್) ನಿರ್ದೇಶಕ ಬಿ.ವಿನೋದ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಸ್ಥಾವರವು ಸ್ಥಗಿತಗೊಂಡಾಗ, ಶೀತಕ ಕೊಳವೆಗಳ ಜೊತೆಗೆ ಅದರಲ್ಲಿನ ಇನ್ನಿತರ ಯಂತ್ರೋಪಕರಣ ಪರಿಶೀಲಿಸಿ ದುರಸ್ತಿ ಪಡಿಸಲಾಗುತ್ತದೆ. ಪ್ರಕ್ರಿಯೆ ಪೂರ್ಣಗೊಳ್ಳಲು ಒಂದು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ ತಗುಲಬಹುದು' ಎಂದರು.

### ಯೋಗೀಶ್‌ಗೌಡ ಗೌಡರ ಕೊಲೆ ಪ್ರಕರಣದಲ್ಲಿ ಹೈಕೋರ್ಟ್ ಆದೇಶ

# ಶಾಸಕ ವಿನಯ ಕುಲಕರ್ಣಿ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಯೋಗೀಶ್‌ಗೌಡ ಗೌಡರ ಕೊಲೆ ಪ್ರಕರಣದ ಮೊದಲ ಆರೋಪಿ ಬಸವರಾಜ ಶಿವಪ್ಪ ಮುತ್ತಗಿಯನ್ನು, ಮೂರನೇ ಬಾರಿಗೆ ಮಾಫಿ ಸಾಕ್ಷಿಯಾಗಿ ಪರಿಗಣಿಸಲು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತೀರ್ಮಾನಿಸಿದ ಆದೇಶ ಪ್ರಶ್ನಿಸಲಾದ ರಿಟ್ ಅರ್ಜಿಗಳನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ ಪ್ರಕರಣದ ಆರೋಪಿಗಳಾದ ಧಾರವಾಡ ಶಾಸಕ ವಿನಯ ಕುಲಕರ್ಣಿ ಮತ್ತು ಇತರರು ಸಲ್ಲಿಸಿದ್ದ ರಿಟ್ ಅರ್ಜಿಗಳ ಮೇಲಿನ ಕಾಯ್ದಿರಿಸಿದ ಆದೇಶವನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಜಾಗೊಳಿಸಿ ಆದೇಶಿಸಿತು.

ಇದೇ ವೇಳೆ 'ಯೋಗಿಶ್‌ಗೌಡ ಗೌಡರ ಪತ್ನಿ ಮಲ್ಲವ್ವ; ಈ ಪ್ರಕರಣದಲ್ಲಿ ಪ್ರಾಸಿಕ್ಯೂಷನ್‌ಗೆ ಸಹಕರಿಸುತ್ತೇನೆ' ಎಂದು ಸಲ್ಲಿಸಿದ್ದ ಪ್ರತ್ಯೇಕ ರಿಟ್ ಅರ್ಜಿಯನ್ನೂ ನ್ಯಾಯಪೀಠ ವಜಾಗೊಳಿಸಿದೆ.

ಸಿಬಿಐ ಪರ ಸುಪ್ರೀಂ ಕೋರ್ಟ್‌ನ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು ಮತ್ತು ರಾಜ್ಯ ಹೈಕೋರ್ಟ್‌ನ ಪಿ.ಪ್ರಸನ್ನ ಕುಮಾರ್ ವಾದ ಮಂಡಿಸಿದ್ದರು.

## ಭವಾನಿ ಜಾಮೀನು ಷರತ್ತು ಸಡಿಲಿಕೆ

'ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಅತ್ಯಾಚಾರ ಆರೋಪ ಪ್ರಕರಣದಲ್ಲಿ ಸಂತ್ರಸ್ತೆಯನ್ನು ಅಪಹರಿಸಲಾಗಿದೆ' ಎಂಬ ಪ್ರಕರಣದಲ್ಲಿ ಎಂಟನೇ ಆರೋಪಿಯಾಗಿರುವ ಭವಾನಿ ರೇವಣ್ಣ ಅವರಿಗೆ ನೀಡಲಾಗಿದ್ದ ಜಾಮೀನಿನ ಷರತ್ತುಗಳನ್ನು ಹೈಕೋರ್ಟ್ ಸಡಿಲಿಸಿದೆ.

ಈ ಸಂಬಂಧ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಪ್ರದೀಪ್ ಸಿಂಗ್ ಯೆರೂರು ಅವರು ವಿಚಾರಣೆ ನಡೆಸಿ ಷರತ್ತುಗಳನ್ನು ಸಡಿಲಿಸಿ ಆದೇಶಿಸಿದರು.

ಈ ಮೂಲಕ ಭವಾನಿ ಅವರಿಗೆ ಮೈಸೂರು ಮತ್ತು ಹಾಸನಕ್ಕೆ ಪ್ರವೇಶಿಸಲು ಅನುಮತಿ ನೀಡಿರುವ ನ್ಯಾಯಪೀಠ, 'ಭವಾನಿ ಅವರು, ಪ್ರಕರಣದ ಸಂತ್ರಸ್ತೆ ಮತ್ತು ಸಾಕ್ಷಿಗಳು ವಾಸಿಸುವ ಸ್ಥಳದಿಂದ 500 ಮೀಟರ್ ವ್ಯಾಪ್ತಿಯಲ್ಲಿ ಓಡಾಡುವಂತಿಲ್ಲ. ಆದೇಶ ಉಲ್ಲಂಘಿಸಿದರೆ ನ್ಯಾಯಾಲಯದ ಮೆಟ್ಟಿಲೇರಲು ಸರ್ಕಾರ ಸ್ವತಂತ್ರವಾಗಿರುತ್ತದೆ' ಎಂದು ಸ್ಪಷ್ಟಪಡಿಸಿದೆ.

ಸಂತ್ರಸ್ತೆ ಅಪಹರಣ ಆರೋಪಕ್ಕೆ ಸಂಬಂಧಿಸಿದಂತೆ ಮೈಸೂರಿನ ಕೆ.ಆರ್. ನಗರ ಠಾಣೆಯಲ್ಲಿ ಜೆಡಿಎಸ್ ಶಾಸಕ ಎಚ್.ಡಿ.ರೇವಣ್ಣ, ಭವಾನಿ ಸೇರಿದಂತೆ ಒಂಬತ್ತು ಮಂದಿಯ ವಿರುದ್ಧ ಪ್ರಕರಣ ದಾಖಲಾಗಿದೆ. ತನಿಖೆ ನಡೆಸುತ್ತಿರುವ ಎಸ್ಐಟಿ ವಿಚಾರಣಾ ನ್ಯಾಯಾಲಯಕ್ಕೆ ಈಗಾಗಲೇ ದೋಷಾರೋಪ ಪಟ್ಟಿಯನ್ನೂ ಸಲ್ಲಿಸಿದೆ.

## ಎಚ್‌ಡಿಕೆ ಅರ್ಜಿ: ಆದೇಶ ವಿಸ್ತರಣೆ

'ಕೇತಗಾನಹಳ್ಳಿ ಸರ್ಕಾರಿ ಜಮೀನುಗಳ ಒತ್ತುವರಿ ತೆರವು ಕಾರ್ಯಾಚರಣೆಗೆ ಸಂಬಂಧಿಸಿದಂತೆ ರಾಮನಗರ ತಹಶೀಲ್ದಾರ್ ಅವರು, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರಿಗೆ ನೀಡಿರುವ ನೋಟಿಸ್ ಅನುಸಾರ ಯಾವುದೇ ಬಲವಂತದ ಕ್ರಮಕ್ಕೆ ಮುಂದಾಗಬಾರದು' ಎಂಬ ಈ ಹಿಂದಿನ ಆದೇಶವನ್ನು ಹೈಕೋರ್ಟ್ ಮತ್ತೆ ವಿಸ್ತರಿಸಿದೆ.

ಈ ಕುರಿತಂತೆ ಎಚ್.ಡಿ.ಕುಮಾರಸ್ವಾಮಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎನ್.ಎಸ್.ಸಂಜಯಗೌಡ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಕುಮಾರಸ್ವಾಮಿ ಪರ ವಾದ ಮಂಡಿಸಿದ ಪದಾಂಕಿತ ಹಿರಿಯ ವಕೀಲ ಉದಯ ಹೊಳ್ಳ ಅವರು, 'ಕರ್ನಾಟಕ ಭೂ ಕಂದಾಯ ಕಾಯ್ದೆ–1964ಕ್ಕೆ ತಿದ್ದುಪಡಿ ತರುವ ಮೂಲಕ ಸರ್ಕಾರಿ ಜಮೀನು ಒತ್ತುವರಿ ಕುರಿತಂತೆ ಒತ್ತುವರಿದಾರರಿಂದ ವಿವರಣೆ ಪಡೆದು ಮುಂದಿನ ಕ್ರಮ ಜರುಗಿಸಲು ತಹಶೀಲ್ದಾರ್‌ಗೆ ಅಧಿಕಾರ ಕಲ್ಪಿಸಿರುವ ಕಾನೂನನ್ನು ನಾವು ಪ್ರಶ್ನಿಸಲಿದ್ದೇವೆ. ಈ ಕುರಿತಂತೆ ನಮ್ಮ ಅರ್ಜಿಯಲ್ಲಿ ತಿದ್ದುಪಡಿ ಮಾಡಿ ಸಲ್ಲಿಸಲಿದ್ದೇವೆ' ಎಂದು ತಿಳಿಸಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ತಿದ್ದುಪಡಿ ರಿಟ್ ಅರ್ಜಿ ಸಲ್ಲಿಕೆಗೆ ಕಾಲಾವಕಾಶ ನೀಡಿ ವಿಚಾರಣೆಯನ್ನು ಇದೇ 8ಕ್ಕೆ ಮುಂದೂಡಿತು.

## ಆಯೋಗ ರಚಿಸಿ: ಕೋರ್ಟ್

ಪಂಚಮಸಾಲಿ ಸಮುದಾಯಕ್ಕೆ 'ಪ್ರವರ್ಗ 2ಎ' ಮತ್ತು ಲಿಂಗಾಯತ ಉಪ ಪಂಗಡಗಳಿಗೆ 'ಒಬಿಸಿ' ಮೀಸಲಾತಿ ಅನುಷ್ಠಾನ ಕೋರಿ ಪ್ರತಿಭಟನೆ ನಡೆಸುತ್ತಿದ್ದವರ ಮೇಲೆ ಪೊಲೀಸರು ಲಾಠಿ ಪ್ರಹಾರ ಮಾಡಿದ್ದ ಘಟನೆಯನ್ನು ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ವಿಚಾರಣೆ ನಡೆಸುವಂತೆ ಹೈಕೋರ್ಟ್ ಆದೇಶಿಸಿದೆ.

'ಬೆಳಗಾವಿಯ ಸುವರ್ಣಸೌಧದ ಮುಂದೆ 2024ರ ಡಿಸೆಂಬರ್ 10ರಂದು ನಡೆದಿರುವ ಲಾಠಿ ಪ್ರಹಾರ ನಡೆದ ಘಟನೆಯನ್ನು ತನಿಖಾ ಆಯೋಗಕ್ಕೆ ವಹಿಸಲು ಆದೇಶಿಸಬೇಕು' ಎಂದು ಕೋರಿ ಕೂಡಲಸಂಗಮದ ಪಂಚಮಸಾಲಿ ಪೀಠಾಧ್ಯಕ್ಷ ಬಸವ ಜಯಮೃತ್ಯುಂಜಯ ಸ್ವಾಮೀಜಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ಮಾನ್ಯ ಮಾಡಿ ಆದೇಶಿಸಿದೆ.

'ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖಾ ಆಯೋಗ ರಚಿಸಬೇಕು. ಆಯೋಗವು ಕಾಲಮಿತಿಯಲ್ಲಿ ವಿಚಾರಣೆ ಪೂರ್ಣಗೊಳಿಸಿ ವರದಿ ಸಲ್ಲಿಸಬೇಕು' ಎಂದು ನ್ಯಾಯಪೀಠ ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ.

ಸ್ವಾಮೀಜಿ ಪರ ಪದಾಂಕಿತ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ ವಾದ ಮಂಡಿಸಿದ್ದರು. ಹೈಕೋರ್ಟ್ ವಕೀಲೆ ಪೂಜಾ ಆರ್.ಸವದತ್ತಿ ವಕಾಲತ್ತು ವಹಿಸಿದ್ದರು.

# ದಿಮ್ಮಿ ಕಳವಿಗೆ ಯತ್ನ: ಸಸಿ ನೆಡುವ ಶಿಕ್ಷೆ

ಪ್ರಜಾವಾಣಿ ವಾರ್ತೆ

**ಮೊಳಕಾಲ್ಮುರು (ಚಿತ್ರದುರ್ಗ ಜಿಲ್ಲೆ):** ಅರಣ್ಯದಿಂದ ಮರದ ದಿಮ್ಮಿಯನ್ನು ಕಳವು ಮಾಡಿಕೊಂಡು ಹೋಗಲು ಯತ್ನಿಸಿದ್ದ ನಾಲ್ವರು ಆರೋಪಿಗಳಿಗೆ ಸ್ಥಳೀಯ ಜೆಎಂಎಫ್‌ಸಿ ನ್ಯಾಯಾಲಯವು ಅರಣ್ಯದಲ್ಲಿ ಸಸಿ ನೆಟ್ಟು ಪೋಷಿಸುವ ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದೆ.

2016ರ ಏಪ್ರಿಲ್ 14ರಂದು ತಾಲ್ಲೂಕಿನ ಮುತ್ತಿಗಾರಹಳ್ಳಿ ಕಾವಲು ಅರಣ್ಯ ಪ್ರದೇಶದಿಂದ 4 ಜನರು ಮರದ ದಿಮ್ಮಿಯನ್ನು ಕದ್ದು ಎತ್ತಿನಗಾಡಿಯೊಂದರಲ್ಲಿ ಸಾಗಿಸುತ್ತಿದ್ದರು. ಇದನ್ನು ತಡೆದು ಪ್ರಶ್ನೆ ಮಾಡಿದ್ದ ಅರಣ್ಯ ಇಲಾಖೆಯ ಸಿಬ್ಬಂದಿ ಮೇಲೆ ಎತ್ತಿನಗಾಡಿ ಹತ್ತಿಸುವ ಯತ್ನ ನಡೆಸಿದ್ದ ನಾಲ್ವರು, ಗಾಡಿಯನ್ನು ನಿಲ್ಲಿಸದೆ ದಿಮ್ಮಿಯನ್ನು ಅಲ್ಲಿಯೇ ಎಸೆದು ಹೋಗಿದ್ದರು. ಈ ಬಗ್ಗೆ ಅರಣ್ಯಾಧಿಕಾರಿ ಬಿ.ಎನ್. ಮಂಜುನಾಥ್ ಪೊಲೀಸರಿಗೆ ದೂರು ನೀಡಿದ್ದರು.

ಪ್ರಕರಣ ಕುರಿತು ಸ್ಥಳೀಯ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಸುದೀರ್ಘ ವಿಚಾರಣೆ ನಡೆದು, ಆರೋಪಿಗಳಿಗೆ ತಲಾ ₹ 4,500 ದಂಡ ವಿಧಿಸಲಾಗಿದೆ. ದಂಡ ಕಟ್ಟದೆ ಇದ್ದಲ್ಲಿ 35 ದಿನಗಳ ಕಾಲ ಸಾದಾ ಕಾರಾಗೃಹ ಶಿಕ್ಷೆ ಅನುಭವಿಸಬೇಕು. ಜತೆಗೆ ಎಲ್ಲ ಆರೋಪಿಗಳು ತಲಾ 15 ಸಸಿಗಳನ್ನು ಅರಣ್ಯದಲ್ಲಿ ನೆಟ್ಟು ಒಂದು ವರ್ಷ ಕಾಲ ಅವುಗಳ ಪೋಷಣೆ ಮಾಡಬೇಕು. ತಪ್ಪಿದಲ್ಲಿ ಒಂದು ತಿಂಗಳ ಕಾಲ ಸಾದಾ ಕಾರಾಗೃಹ ಶಿಕ್ಷೆ ಅನುಭವಿಸಬೇಕು. ಸಸಿ ಪೋಷಣೆ ಮಾಡುವ ಬಗ್ಗೆ ಅರಣ್ಯಾಧಿಕಾರಿಗಳು ನ್ಯಾಯಾಲಯಕ್ಕೆ ವರದಿ ಸಲ್ಲಿಸಬೇಕು ಎಂದು ನ್ಯಾಯಾಧೀಶರಾದ ಟಿ.ಕೆ.ಪ್ರಿಯಾಂಕ ತೀರ್ಪು ನೀಡಿದ್ದಾರೆ. ಸರ್ಕಾರಿ ಅಭಿಯೋಜಕ ಮಹಮದ್ ಶಂಶೀರ್ ಆಲಿ ಅವರು ವಾದ ಮಂಡಿಸಿದರು.

## ಐಫೋನ್ ಖರೀದಿಗೆ ತಂದೆ ಆಕ್ಷೇಪ: ಮಗ ಆತ್ಮಹತ್ಯೆ

**ಬೆಳಗಾವಿ:** ₹70 ಸಾವಿರ ಮೌಲ್ಯದ ಐಫೋನ್ ಖರೀದಿಸಿದ್ದಕ್ಕೆ ತಂದೆಯು ಆಕ್ಷೇಪಿಸಿದ್ದರಿಂದ ಪುತ್ರ ಮುಸ್ತಫೀಜ್ ಶೇಖ್(23) ವೈಭವ ನಗರದ ಮನೆಯಲ್ಲಿ ಗುರುವಾರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಯಾವುದೇ ಕೆಲಸ ಮಾಡದಿದ್ದರೂ ಮುಸ್ತಫೀಜ್ ಐಫೋನ್ ಖರೀದಿಸಿದ್ದಕ್ಕೆ ತಂದೆ ಬುದ್ಧಿವಾದ ಹೇಳಿದ್ದರು. ಇದರಿಂದ ಮನನೊಂದು ಆತ ಆತ್ಮಹತ್ಯೆ ಮಾಡಿಕೊಂಡ' ಎಂದು ಎಪಿಎಂಸಿ ಠಾಣೆ ಪೊಲೀಸರು ತಿಳಿಸಿದ್ದಾರೆ.





## ಪ್ರವರ್ಗ 1ಕ್ಕೆ ಸೇರಿಸಿ: ಹಳ್ಳಿಕಾರ ಸಮುದಾಯ ಆಗ್ರಹ

**ಬೆಂಗಳೂರು:** ಕಾಡು ಕುರುಬ ಮತ್ತು ಕಾಡುಗೊಲ್ಲ ಸಮುದಾಯಗಳ ಗುಣ ಲಕ್ಷಣಗಳನ್ನೇ ಹೊಂದಿರುವ ಹಳ್ಳಿಕಾರ ಸಮುದಾಯವನ್ನು ಹಿಂದುಳಿದ ವರ್ಗಗಳ ಪ್ರವರ್ಗ–1ಕ್ಕೆ ಸೇರಿಸಬೇಕು ಎಂದು ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಮಧುಸೂದನ್ ಆರ್.ನಾಯಕ್ ಅವರಿಗೆ ರಾಜ್ಯ ಹಳ್ಳಿಕಾರರ ಸಂಘ ಮನವಿ ಮಾಡಿದೆ.

ಹಳ್ಳಿಕಾರ ಸಮುದಾಯದ ಕುಲಕಸುಬು ಪಶುಸಂಗೋಪನೆ. ಶತಮಾನಗಳಿಂದ ಸಾಕಿ ಸಲುಹಿದ ರಾಸುಗಳಿಗೆ ತನ್ನದೇ ಜಾತಿಯ ಹೆಸರು ಬಂದಿದೆ. ಕಾಡು ಪ್ರಾಣಿಗಳಿಂದ ರಕ್ಷಣೆಗಾಗಿ ಈಟಿ, ಭರ್ಜಿ ಹಾಗೂ ಕಠಾರಿಗಳನ್ನು ಉಪಯೋಗಿಸುತ್ತಿದ್ದು ಇತಿಹಾಸದ ಪುಟಗಳಲ್ಲಿ ಕಂಡು ಬಂದಿದೆ ಎಂದು ಸಂಘದ ಅಧ್ಯಕ್ಷ ಕೆ.ಎಂ.ನಾಗರಾಜ್ ತಿಳಿಸಿದ್ದಾರೆ.

ಸಮುದಾಯದ ಆಚಾರ–ವಿಚಾರ ಕಾಡುಕುರುಬ ಮತ್ತು ಕಾಡುಗೊಲ್ಲ ಸಮುದಾಯದ ಆಚಾರ–ವಿಚಾರಗಳಿಗೆ ತಾಳೆಯಾಗುತ್ತವೆ. ಕುಟುಂಬಗಳ ನಿರ್ವಹಣೆ ಮಾಡಲಾಗದೇ ಶೇಕಡ 75ರಷ್ಟು ಮಕ್ಕಳನ್ನು 7ರಿಂದ 10ನೇ ತರಗತಿಯೊಳಗೆ ಶಿಕ್ಷಣದಿಂದ ಬಿಡಿಸಿ ನಗರ ಪ್ರದೇಶಗಳಿಗೆ ವಲಸೆ ಕಳುಹಿಸುತ್ತಿರುವುದು ಸಾಮಾನ್ಯವಾಗಿದೆ ಎಂದು ಮನವಿಯಲ್ಲಿ ಉಲ್ಲೇಖಿಸಿದ್ದಾರೆ.

ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಹಳ್ಳಿಕಾರ ಸಮುದಾಯವನ್ನು ಒಕ್ಕಲಿಗ ಸಮುದಾಯದ ಕೆಳಗೆ ನಮೂದಿಸಿರುವುದರಿಂದ ನ್ಯಾಯ ದೊರಕಿಲ್ಲ. ಪ್ರವರ್ಗ–3ಎ ಪಟ್ಟಿಯಿಂದ ಹೊರತುಪಡಿಸಿ ಪ್ರವರ್ಗ–1ಕ್ಕೆ ಸೇರ್ಪಡೆ ಮಾಡಬೇಕು. ದಾಖಲೆಗಳನ್ನು ಪರಿಶೀಲಿಸಿ, ಸಮುದಾಯಕ್ಕೆ ಆಗಿರುವ ಅನ್ಯಾಯ ಸರಿಪಡಿಸಬೇಕು ಎಂದು ಮನವಿ ಮಾಡಿದ್ದಾರೆ.

## ಬುಕ್ ಬ್ರಹ್ಮ: ಸ್ಪರ್ಧೆಗೆ ಕಥೆ ಆಹ್ವಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬುಕ್ ಬ್ರಹ್ಮ ಸಂಸ್ಥೆಯು 2025ನೇ ಸಾಲಿನ 'ಸ್ವಾತಂತ್ರ್ಯೋತ್ಸವ ಕಥಾ ಸ್ಪರ್ಧೆ'ಗೆ ಕಥೆಗಳನ್ನು ಹಾಗೂ 'ಕಾದಂಬರಿ ಪುರಸ್ಕಾರ'ಕ್ಕೆ ಕಾದಂಬರಿಗಳನ್ನು ಆಹ್ವಾನಿಸಿದೆ.

2024ರಲ್ಲಿ ಪ್ರಕಟಗೊಂಡ ಕಾದಂಬರಿಗಳನ್ನು ಸ್ಪರ್ಧೆಗೆ ಪರಿಗಣಿಸಲಾಗುತ್ತದೆ. ಈ ಪುರಸ್ಕಾರವು ₹1 ಲಕ್ಷ ನಗದು ಒಳಗೊಂಡಿದೆ. ಈ ಮೊತ್ತದಲ್ಲಿ ಲೇಖಕರಿಗೆ ₹75 ಸಾವಿರ ಹಾಗೂ ಪ್ರಕಾಶಕರಿಗೆ ₹25 ಸಾವಿರ ನೀಡಲಾಗುತ್ತದೆ. ಮೆಚ್ಚುಗೆ ಪಡೆಯುವ ನಾಲ್ಕು ಕಾದಂಬರಿಗಳಿಗೆ ತಲಾ ₹5 ಸಾವಿರ ನೀಡಲಾಗುವುದು ಎಂದು ಸಂಸ್ಥೆ ತಿಳಿಸಿದೆ.

ಕಥಾ ಸ್ಪರ್ಧೆಗೆ ಅಪ್ರಕಟಿತ ಕಥೆಗಳನ್ನು ಪರಿಗಣಿಸಲಾಗುತ್ತದೆ. ಪ್ರಥಮ ಸ್ಥಾನ ಪಡೆದ ಕಥೆಗೆ ₹ 50 ಸಾವಿರ, ದ್ವಿತೀಯ ಸ್ಥಾನ ಪಡೆದ ಕಥೆಗೆ ₹ 25 ಸಾವಿರ, ತೃತೀಯ ಸ್ಥಾನ ಪಡೆದ ಕಥೆಗೆ ₹ 15 ಸಾವಿರ ನಗದು ಇರಲಿದೆ. ಐದು ಕಥೆಗಳಿಗೆ ತಲಾ ₹ 5 ಸಾವಿರ ನಗದು ಒಳಗೊಂಡ ಸಮಾಧಾನಕರ ಬಹುಮಾನ ನೀಡಲಾಗುತ್ತದೆ. ಅಂತಿಮ ಸುತ್ತಿಗೆ ಆಯ್ಕೆಯಾಗುವ 17 ಕಥೆಗಳಿಗೆ ತಲಾ ₹ 2 ಸಾವಿರ ರೂಪಾಯಿ ನೀಡಲಾಗುತ್ತದೆ.

ಆಯ್ಕೆಯಾದ 25 ಕಥೆಗಳನ್ನು ಒಳಗೊಂಡ ಪುಸ್ತಕ ಪ್ರಕಟಿಸಲಾಗುತ್ತದೆ ಎಂದು ಹೇಳಿದೆ.

ಕಾದಂಬರಿಗಳ ನಾಲ್ಕು ಪ್ರತಿಗಳನ್ನು ಕಳಿಸಲು ಮೇ 1 ಹಾಗೂ ಕಥೆಗಳನ್ನು ಕಳುಹಿಸಲು ಮೇ 15 ಕಡೆಯ ದಿನ. ಕಥೆಗಳನ್ನು ಇ ಮೇಲ್ bbks2025@bookbrahma.com ಮೂಲಕವೂ ಕಳಿಸಬಹುದು.

**ಕಳುಹಿಸಬೇಕಾದ ವಿಳಾಸ:** ಪ್ರಧಾನ ಸಂಪಾದಕ, ಬುಕ್ ಬ್ರಹ್ಮ ಕನ್ನಡ, ಮೂರನೇ ಮಹಡಿ, ಆರ್.ಕೆ. ಕಾಂಪ್ಲೆಕ್ಸ್, ಕೆಎಸ್‌ಎಸ್‌ಐಡಿಸಿ ಆವರಣ, ಎಲೆಕ್ಟ್ರಾನಿಕ್ಸ್ ಸಿಟಿ, ಮೊದಲ ಹಂತ, ಬೆಂಗಳೂರು-560100. ಸಂಪರ್ಕ ಸಂಖ್ಯೆ: 78926 08118

## ಲಾಂಗ್ ಹಿಡಿದು ರೀಲ್ಸ್: ಯುವಕ ಬಂಧನ

**ಬೈಲಹೊಂಗಲ (ಬೆಳಗಾವಿ ಜಿಲ್ಲೆ):** ಲಾಂಗು ಹಿಡಿದು ರೀಲ್ಸ್ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಹಾಕಿದ್ದ ತಾಲ್ಲೂಕಿನ ಮೇಕಲಮರಡಿ ಗ್ರಾಮದ ಮುಶ್ರಫ್ ಖಾನ್ ಅಪ್ಪಾಲಾಲ ನಾಯ್ಕನನ್ನು (25) ನೇಸರಗಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

### ಸರ್ಕಾರಕ್ಕೆ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘ ಒತ್ತಾಯ

# ನಗದು ರಹಿತ ಆರೋಗ್ಯ ಸೇವೆ ನೀಡಿ

ಪ್ರಜಾವಾಣಿ ವಾರ್ತೆ


ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘ ಬೆಂಗಳೂರಿನಲ್ಲಿ ಶುಕ್ರವಾರ ಆಯೋಜಿಸಿದ್ದ ಸಮಾವೇಶದಲ್ಲಿ ನೌಕರರು ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

**ಬೆಂಗಳೂರು:** ನಿವೃತ್ತ ನೌಕರರು ಹಾಗೂ ಕುಟುಂಬ ಪಿಂಚಣಿದಾರರಿಗೆ ನಗದು ರಹಿತ ಆರೋಗ್ಯ ಸೇವೆ 'ಸಂಧ್ಯಾ ಕಿರಣ' ಯೋಜನೆ ಜಾರಿ ಸೇರಿದಂತೆ ಏಳು ಬೇಡಿಕೆಗಳನ್ನು ಈಡೇರಿಸುವಂತೆ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘ ಸರ್ಕಾರವನ್ನು ಆಗ್ರಹಿಸಿದೆ.

ನಗರದ ಅರಮನೆ ಮೈದಾನದಲ್ಲಿ ಶುಕ್ರವಾರ ನಡೆದ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಸಮಾವೇಶದಲ್ಲಿ ಏಳು ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸುವ ಮನವಿ ಪತ್ರವನ್ನು ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಸಲ್ಲಿಸಲಾಯಿತು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಂಘದ ಅಧ್ಯಕ್ಷ ಎಲ್. ಭೈರಪ್ಪ ಮಾತನಾಡಿ, 'ರಾಜ್ಯದಲ್ಲಿ 4.50 ಲಕ್ಷ ನಿವೃತ್ತ ನೌಕರರು ಹಾಗೂ ಕುಟುಂಬ ಪಿಂಚಣಿದಾರರು ಇದ್ದಾರೆ. ಜೀವನದ ಸಂಧ್ಯಾ ಕಾಲದಲ್ಲಿರುವ ಇವರು, ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ರಾಜ್ಯದ ಏಳನೇ ವೇತನ ಆಯೋಗದ ಶಿಫಾರಸಿನಂತೆ ಸಂಧ್ಯಾ ಕಿರಣ ಯೋಜನೆ ಜಾರಿಗೆ ತರಬೇಕು. 2–3 ವರ್ಷಗಳಿಂದಲೂ ಚರ್ಚೆ ನಡೆಸುತ್ತಿದ್ದು, ಕಡತ ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿದೆ' ಎಂದರು.

ಅದೇ ರೀತಿ 70 ರಿಂದ 80 ವರ್ಷದೊಳಗಿನ ನೌಕರರಿಗೆ ಮೂಲ ಪಿಂಚಣಿಯಲ್ಲಿ ಶೇಕಡ 10ರಷ್ಟು ಹೆಚ್ಚಳ ಮಾಡಬೇಕು. ಛತ್ತೀಸಗಡ, ಪಂಜಾಬ್ ಸೇರಿದಂತೆ ಅನೇಕ ರಾಜ್ಯಗಳು ಈ ಸೌಲಭ್ಯ ನೀಡಿದ್ದು, ಕರ್ನಾಟಕವೂ ಇದನ್ನು ಜಾರಿ ಮಾಡಿ ವೃದ್ಧಾಪ್ಯದಲ್ಲಿರುವ ನಿವೃತ್ತರಿಗೆ ಅನುಕೂಲ ಮಾಡಬೇಕು ಎಂದು ಮನವಿ ಮಾಡಿದರು.

ನಿವೃತ್ತ ನೌಕರರು ಮತ್ತು ಕುಟುಂಬ ಪಿಂಚಣಿದಾರರು ಮೃತಪಟ್ಟಾಗ ಶವ ಸಂಸ್ಕಾರಕ್ಕೆ ಅವರ ಕುಟುಂಬದವರಿಗೆ ₹10 ಸಾವಿರ ಮಂಜೂರು ಮಾಡಬೇಕು. ಕೆಎಸ್‌ಆರ್‌ಟಿಸಿ ಮತ್ತು ನಗರ ಸಾರಿಗೆ ಬಸ್‌ಗಳಲ್ಲಿ ಶೇಕಡ 25ರಿಂದ ಶೇಕಡ 50ರವರೆಗೆ ರಿಯಾಯಿತಿ ನೀಡಬೇಕು ಎಂದು ಒತ್ತಾಯಿಸಿದರು.

ಬೆಂಗಳೂರು ನಗರ, ಜಿಲ್ಲಾ, ತಾಲ್ಲೂಕು ಶಾಖೆಗಳ ಸರ್ಕಾರಿ ನಿವೃತ್ತ ನೌಕರರ ಸಂಘಗಳಿಗೆ ಸರ್ಕಾರದಿಂದ ರಿಯಾಯಿತಿ ದರದಲ್ಲಿ ನಿವೇಶನ ಮಂಜೂರು ಮಾಡಬೇಕು. ನಿವೃತ್ತರಿಗೆ ಆದಾಯ ತೆರಿಗೆಯಿಂದ ವಿನಾಯಿತಿ ನೀಡಲು ಕೇಂದ್ರಕ್ಕೆ ಶಿಫಾರಸು ಮಾಡಬೇಕು ಎಂಬ ಬೇಡಿಕೆಗಳನ್ನು ಸಲ್ಲಿಸಿದರು.

ಕುಣಿಗಲ್ ಶಾಸಕ ಡಾ.ಎಚ್.ಡಿ. ರಂಗನಾಥ್, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಮಾತನಾಡಿದರು.

ಸಂಘದ ಪ್ರಧಾನ ಕಾರ್ಯದರ್ಶಿ ರಂಗೇಗೌಡ, ಖಜಾಂಚಿ ಎಸ್.ಎಂ. ಆನಂದಪ್ಪ, ಗೌರವಾಧ್ಯಕ್ಷ ಎಂ.ವಿ. ರಾಜಶೇಖರಯ್ಯ ಹಾಜರಿದ್ದರು.

## 'ಹಂತ ಹಂತವಾಗಿ ಬೇಡಿಕೆ ಈಡೇರಿಕೆ'

'ರಾಜ್ಯ ಸರ್ಕಾರಿ ನಿವೃತ್ತ ನೌಕರರ ಮತ್ತು ಕುಟುಂಬ ಪಿಂಚಣಿದಾರರ ಬೇಡಿಕೆಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ತಂದು, ಹಂತ ಹಂತವಾಗಿ ಈಡೇರಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಲಾಗುವುದು' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಭರವಸೆ ನೀಡಿದರು.

ಕೆಲವು ಬೇಡಿಕೆಗಳು ಪಕ್ಷದ ಪ್ರಣಾಳಿಕೆಯಲ್ಲೂ ಇದ್ದು, ಸರ್ಕಾರ ಇವುಗಳನ್ನು ನಿಶ್ಚಿತವಾಗಿ ಈಡೇರಿಸುತ್ತದೆ. ಕೆಲವು ಹಣಕಾಸಿನ ವಿಷಯ ಆಗಿರುವುದರಿಂದ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಿದ್ದಾರೆ ಎಂದರು.

ಆರೋಗ್ಯ ವಿಮಾ ಸೌಲಭ್ಯ, ನಿವೃತ್ತ ನೌಕರರು ಮತ್ತು ಕುಟುಂಬ ವರ್ಗದವರಿಗೆ ಕೆಎಸ್‌ಆರ್‌ಟಿಸಿ ಮತ್ತು ನಗರ ಸಾರಿಗೆ ಬಸ್‌ಗಳಲ್ಲಿ ಶೇಕಡ 25-50 ರಷ್ಟು ರಿಯಾಯಿತಿ ನೀಡಬೇಕು ಎಂಬಂತಹ ಬೇಡಿಕೆಗಳು ನ್ಯಾಯಯುತವಾಗಿವೆ. ಇವು ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆ ಎನಿಸುವುದಿಲ್ಲ ಎಂದು ಹೇಳಿದರು.


# ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ



ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ಟ್ವಿಟರ್, ವಾಟ್ಸ್‌ಆ್ಯಪ್, ಎಕ್ಸ್ ಖಾತೆಯ ಇನ್‌ಬಾಕ್ಸ್‌ನಲ್ಲೊಮ್ಮೆ ಕಣ್ಣಾಡಿಸಿದರೆ ಸಾಕು, ಇಂಥವೇ ಮೆಸೇಜುಗಳು... ಆದರೆ, ಇಲ್ಲಿ ಸೋಸಿ ತೆಗೆದರೆ ಒಂದೇ ಒಂದು ಸ್ನೇಹದ ಕೊಂಡಿ ಸಿಗಲಿಕ್ಕಿಲ್ಲ. ಅದು ಸ್ನೇಹ-ಸಾಂಗತ್ಯ, ಬಾಂಧವ್ಯ ಅಂತೇನೂ ಅಲ್ಲದ ಒಡನಾಟವೊಂದರ ಹುಡುಕಾಟವಷ್ಟೇ...

ಎಚ್ಚರವಹಿಸೋದು ಅಂದ್ರೆ...




# ಪಿಸು ಮಾತಿಗೆ ಹುಸಿ ಪ್ರೀತಿಗೆ ಸೋಲದಿರಲಿ ಮನಸು

ಸುಶೀಲಾ ಡೋಣೂರ

**ಏನ್ ಚಂದ ಆ ನಿಮ್ಮ ಕಣ್ಣು...**
**ಸಂಪಿಗೆ ಮೂಗಿಗೆ ಹಾಕಿದ ಹೊಳೆವ ಮೂಗುತಿಯೂ ಅಂದ.**
**ನಿಮ್ಮ ಕೇಶರಾಶಿಯ ನುಣುಪಿನ ಗುಟ್ಟೇನು?**
**ಇಷ್ಟು ವರ್ಷಗಳಿಂದ ನೋಡ್ತಾ ಇದ್ರೂ ಒಂದಿಷ್ಟೂ ಬದಲಾಗಿಲ್ಲ ನೀವು.**
**ಎಷ್ಟು ಸೊಗಸು ನಿಮ್ಮ ಆ ಧ್ವನಿ...**
**ಏನಾಯ್ತು? ಎರಡು ದಿನದಿಂದ ಸಪ್ಪಗಾಗಿದ್ದೀರಿ?**
**ಏನೇ ಇದ್ದರೂ ನನ್ನೆದುರು ಹೇಳಿಕೊಳ್ಳಿ, ನಾನು ಸದಾ ನಿಮ್ಮೊಂದಿಗೆ ಇರುತ್ತೇನೆ...**

***

ಮನೆ, ಮಕ್ಕಳು, ಸಂಸಾರ, ಕಚೇರಿ, ಮೀಟಿಂಗು, ಪ್ರೆಸೆಂಟೇಶನ್ನು, ಓಡಾಟ, ಸುತ್ತಾಟಗಳ ನಡುವೆ ದಣಿದು ಉಸ್ಸೆಂದು ಕೂತ ಹೊತ್ತು ಮೊಬೈಲಿನ ಬೀಪ್ ಸದ್ದು... ತಮ್ಮವರಲ್ಲ, ಸ್ನೇಹಿತರೂ ಅಲ್ಲ, ಮೊಬೈಲ್ ಅಥವಾ ಕಂಪ್ಯೂಟರ್ ಸ್ಕ್ರೀನ್ ಮೇಲೆ ಮಾತ್ರ ಎದುರಾಗುವ ಆಗಂತುಕ ಗೆಳೆಯರು ಕೊಡುವ ಕ್ಷಣಮಾತ್ರದ ಖುಷಿಗಳು.

ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ಟ್ವಿಟರ್, ವಾಟ್ಸ್‌ಆ್ಯಪ್, ಎಕ್ಸ್ ಖಾತೆಯ ಇನ್‌ಬಾಕ್ಸ್‌ನಲ್ಲೊಮ್ಮೆ ಕಣ್ಣಾಡಿಸಿದರೆ ಸಾಕು, ಇಂಥವೇ ಮೆಸೇಜುಗಳು... ಒಮ್ಮೊಮ್ಮೆ ಚಿಕ್ಕ ಪುಳಕ, ಸಣ್ಣ ನಗು, ಒಮ್ಮೊಮ್ಮೆ ಉದಾಸೀನತೆ, ತಿರಸ್ಕಾರ, ಅಸಡ್ಡೆ, ಕೆಲವೊಮ್ಮೆ ದೊಡ್ಡ ರೇಜಿಗೆ, ಕಿರಿಕಿರಿಗೂ ಕಾರಣವಾಗುವಂತಹ ಸಂದೇಶಗಳು. ಒಂದು ಪೋಸ್ಟ್, ಸ್ಟೋರಿ, ಸ್ಟೇಟಸ್, ಡೀಪಿ ಬದಲಾದಾಗಲೆಲ್ಲಾ ಬೇಕೆಂದೊ, ಬೇಡವೆಂದೊ ತೂರಾಡುವ ಸಾಲುಗಳು.

ಹೆಣ್ಣು ಸೋಲುವ, ಸಲುಗೆಗೆ ಸಿಗುವ, ಹಗುರಾಗುವ ಮೂಲ ಧಾತು ಹೊಗಳಿಕೆ ಎನ್ನುವ ಸಣ್ಣ ಎಳೆ ಹಿಡಿದು ಆ ಕ್ಷಣದ ತಮ್ಮ ಮಾತಿನ ಹುಕಿಗೆ ನಿಮ್ಮನ್ನು ಒದಗಿಸಿಕೊಳ್ಳುವ ಕಲಾವಿದರು. ಆದರೆ, ಎಲ್ಲ ಸಂದೇಶ ಧೀರರೂ ಮಹಾವಂಚಕರೂ ಅಂತ ಕೂಡ ಅಲ್ಲ. ಬಹುತೇಕರಿಗೆ ಆ ಗಳಿಗೆಯ ಖಾಲಿತನವನ್ನು ಸುಂದರ ಕ್ಷಣಗಳಿಂದ ತುಂಬಿಕೊಳ್ಳಬೇಕಿರುತ್ತದೆ. ಅದು ಸ್ನೇಹ-ಸಾಂಗತ್ಯ, ಬಾಂಧವ್ಯ ಅಂತೇನೂ ಅಲ್ಲದ ಒಡನಾಟವೊಂದರ ಹುಡುಕಾಟವಷ್ಟೇ. ಅದು ವರ್ಚುವಲ್ ಆಗಿದ್ದರೂ ಸರಿ, ಒಲಿದರೆ ಕಾಫಿಯೂ ಸೈ. ಆದರೆ, ಇಂತಹ ಪಿಸುಮಾತಿಗೆ, ಹುಸಿ ಪ್ರೀತಿಗೆ ಎಲ್ಲರೂ ಸೋತು ಶರಣಾಗುವುದಿಲ್ಲ, ಅಂತಹ ಸ್ಕ್ರೀನ್ ಸ್ನೇಹಕ್ಕೆ ನಿಮ್ಮಲ್ಲಿ ಸಮಯವಿಲ್ಲ ಎನ್ನುವ ಸಂದೇಶ ನಿಮ್ಮಿಂದ ಹೋಗಲಿ, ಅದು ಮೌನ, ತಿರಸ್ಕಾರ, ಅನ್ ಫ್ರೆಂಡ್, ಅನ್ ಫಾಲೋ ಮೂಲಕವಾದರೂ ಸರಿ... ಆಮೇಲೆ ನೋಡಿ, ಅವರು ಮತ್ತೊಮ್ಮೆ ನಿಮ್ಮ ಪ್ರೊಫೈಲ್ ಕಡೆ ತಲೆ ಹಾಕಿಯೂ ಮಲಗುವುದಿಲ್ಲ. ಅಷ್ಟರ ಮಟ್ಟಿಗೆ ಬಹುತೇಕ ಈ 'ಸೋಷಿಯಲ್' ಸ್ನೇಹಿತರು ನಿರುಪದ್ರವಿಗಳು.

### ಹೊಗಳಿಕೆಗೆ ಲಿಂಗಭೇದವಿಲ್ಲ...

ಅತೀ ಮಾತು, ಅತೀ ಹೊಗಳಿಕೆ, ಕಡಿಮೆ ಸಮಯದಲ್ಲಿ ಅತಿ ಸಲುಗೆ... ಇದೆಲ್ಲದರಿಂದ ಎಚ್ಚರಿಕೆ ವಹಿಸಬೇಕು ಎನ್ನುವುದು ಕೇವಲ ಹೆಣ್ಣಿಗೆ ಹೇಳುವ ಮಾತಲ್ಲ, ಗಂಡಿಗೂ ಈ ಮಾತುಗಳು ಅನ್ವಯಿಸುತ್ತವೆ. ಯಾವುದೊ ಕೆಲಸ, ಪ್ರಯೋಜನ, ಲಾಭದ ಉದ್ದೇಶವಿಟ್ಟುಕೊಂಡು ಸಲುಗೆ ಬೆಳೆಸುವ, ಹುಸಿ ಸ್ನೇಹದ ಹಸ್ತ ಚಾಚುವ ಕಪಟ ಗೆಳತಿಯರ ಬಗ್ಗೆ ಎಚ್ಚರಿಕೆಯಿಂದಿದ್ದರೆ ವಂಚನೆಗೊಳಗಾಗುವ ಅಪಾಯ ಕಡಿಮೆ. ಟೀ-ಕಾಫಿಯ ಟ್ರೀಟುಗಳು, ಗಿಫ್ಟುಗಳು, ತಿರುಗಾಟ- ಸುತ್ತಾಟಗಳು, ಆ ಉದ್ದೇಶ ಸಾಧಿಸುವವರೆಗೆ ನಿಮ್ಮನ್ನು ಹಿಡಿದಿಟ್ಟುಕೊಳ್ಳುವ ಕಲಾತ್ಮಕ ಪ್ರಯತ್ನಗಳು ಎನ್ನುವುದರ ಅರಿವು ನಿಮಗಿದ್ದರೆ ಸಾಕು. ಮುಂದಾಗಬಹುದಾದ ಏರುಪೇರುಗಳು ನಿಮ್ಮನ್ನು ಅಷ್ಟಾಗಿ ಅಧೀರಗೊಳಿಸಲಾರವು.

ಹೌದು, ಹೆಣ್ಣು ಭಾವಜೀವಿಯೇ. ಭಾವನೆಯೇ ಅವಳ ಅಂತಃಶಕ್ತಿ, ಹಾಗೆಂದು ಹುಸಿ ಬಾಂಧವ್ಯ ಎಲ್ಲಿಂದ ಬಂದರೂ ಬೊಗಸೆಯೊಡ್ಡುತ್ತಾಳೆ ಅಂತೇನೂ ಅರ್ಥವಲ್ಲ. ಮನೆಯ ಹೊರಗೂ ಒಳಗೂ ದುಡಿಯುತ್ತ, ಮನೆ, ಮಕ್ಕಳು, ಸಂಸಾರ, ಜವಾಬ್ದಾರಿಗಳ ನಡುವೆ, ಎಲ್ಲರಿಗೂ ಪ್ರೀತಿ ಹಂಚುತ್ತ, ಎಲ್ಲರ ಯೋಗಕ್ಷೇಮ ನೋಡಿಕೊಳ್ಳುತ್ತ, ತನಗಾಗಿ ತಾನು ಒಂದು ಗಳಿಗೆ ಸಮಯವಿಟ್ಟುಕೊಳ್ಳದೇ ತೇಯುವವಳು. ಅಚಾನಕ್ಕಾಗಿ ಹರಿದು ಬರುವ ಇಂತಹ ಸಂದೇಶಗಳು ನೀಡುವ ಕಾಳಜಿ, ಅಂತಃಕರಣ, ಸಹಾನುಭೂತಿಯ ಮಾತುಗಳು ಅವಳನ್ನು ಒಂದು ಕ್ಷಣ ಮೆದುಗೊಳಿಸಬಹುದು. ಆದರೆ, ಇಲ್ಲಿ ಸೋಸಿ ತೆಗೆದರೂ ಒಂದೇ ಒಂದು ಸ್ನೇಹದ ಕೊಂಡಿ ಸಿಗಲಿಕ್ಕಿಲ್ಲ. ಸಿಗುವುದು ಹೊಗಳುಭಟರ ಹುಸಿಮಾತುಗಳಷ್ಟೇ.

ಹೆಣ್ಣು ಕೂಡ ಸಮಾಜಜೀವಿ, ಸ್ನೇಹಜೀವಿ.ಬೆಚ್ಚನೆಯ ಭಾವ ಮೀಟುವ ನೆಚ್ಚಿನ ಸ್ನೇಹಕ್ಕಾಗಿ ತಡಕಾಡಿದಾಗ ಸಿಗುವ ಇಂತಹ ಹೊಗಳಿಕೆಯ ಹೊನ್ನ ಶೂಲಗಳು ಆ ಕ್ಷಣದ ಮಾತಿನ ಮಂಟಪಗಳಷ್ಟೇ, ಸ್ನೇಹದ ಕೊಂಡಿಗಳಾಗಲಾರವು. ಗಟ್ಟಿಯಾದ ಗೆಳೆತನ ಇಂತಹ ಬಣ್ಣದ ಮಾತುಗಳಿಂದ ಹೆಣೆದುಕೊಳ್ಳುವ ಜೇಡರ ಬಲೆಯಲ್ಲ. 'ಎಂಥ ಸಮಯದಲ್ಲೂ ನಿನ್ನ ಜೊತೆ ನಾನಿರುತ್ತೀನಿ' ಎಂದವರೆಲ್ಲಾ ಆ ಸಮಯ ಬಂದಾಗ ಅಲ್ಲಿ ನಿಲ್ಲುವುದಿಲ್ಲ. 'ನನ್ನ ನಂಬು, ನಾನಿದ್ದೀನಿ' ಎಂದವರೆಲ್ಲಾ ನಂಬಿಕೆಗೆ ಯೋಗ್ಯರಾಗುವುದಿಲ್ಲ. ನಿಜವಾದ ಸ್ನೇಹಿತ ಹಾಗೆಲ್ಲಾ ಮೆಸೆಂಜರ್‌ಗಳಲ್ಲಿ ಬಡಾಯಿ ಕೊಚ್ಚುವುದು ನಿಲ್ಲುವುದಿಲ್ಲ, ಲೈಕ್, ಶೇರ್, ಕಮೆಂಟ್ ಮಾಡಲಿಲ್ಲವೆಂದು ದೂರ ಸರಿಯುವುದಿಲ್ಲ. ಕಾಫಿಗೆ ಬರಲಿಲ್ಲವೆಂದು ಮುನಿಸಿಕೊಳ್ಳುವುದಿಲ್ಲ. ಹಾಗೆಯೇ ನಿಮ್ಮ ಕೇಶರಾಶಿ, ಮುಖಾರವಿಂದ, ಹೊಳೆಯುವ ಮೂಗುತಿ, ಮೃದು ಮಾತುಗಳ ಸುತ್ತಲೇ ಗಿರಿಗಿಟ್ಟಿಯ ಹಾಗೆ ಸುತ್ತುವುದಿಲ್ಲ.

ಸ್ನೇಹ ಇದೆಲ್ಲದರಾಚೆಗೆ ಬೆಳೆದು ನಿಲ್ಲುತ್ತದೆ. ನಿಮ್ಮಲ್ಲಿನ ಅಂತಃಶಕ್ತಿಯನ್ನು ಜಾಗೃಗೊಳಿಸುತ್ತದೆ, ಕುಸಿದಾಗ ಧೈರ್ಯ ತುಂಬುತ್ತದೆ, ಸೋತಾಗ ಆತ್ಮಸ್ಥೈರ್ಯ ನೀಡುತ್ತದೆ, ಎಡವಿದಾಗ ಎಚ್ಚರಿಸುತ್ತದೆ. ನಿಮ್ಮ ಬೆನ್ನ ಹಿಂದೆಯೂ ನಿಮ್ಮ ಘನತೆ ಕುಸಿಯಗೊಡದಂತೆ ನೋಡಿಕೊಳ್ಳುತ್ತದೆ. ನಿಜವಾದ ಸ್ನೇಹ ಯಾವತ್ತೂ ಮೊಬೈಲ್ ಅಥವಾ ಕಂಪ್ಯೂಟರ್ ಸ್ಕ್ರೀನ್‌ಗೆ ಮಾತ್ರ ಸೀಮಿತಗೊಳ್ಳುವುದಿಲ್ಲ. ಅದರಾಚೆಗಿನ ಕಾಫಿ ಶಾಪ್, ಡಿನ್ನರಿಗೆ ಹಾತೊರೆಯುವುದಿಲ್ಲ. ಅದು ನಿಮ್ಮ ಕುಟುಂಬವನ್ನೂ ಒಳಗೊಳ್ಳುತ್ತದೆ, ನೆಲೆಗೊಳ್ಳುತ್ತದೆ ಅಲ್ಲಿಯೂ ಗೆಲ್ಲುತ್ತದೆ, ನಿಲ್ಲುತ್ತದೆ. ನಿಮ್ಮೊಂದಿಗೆ ನಿಮ್ಮ ಕುಟುಂಬವನ್ನೂ ಆಧರಿಸುತ್ತದೆ.

ಯಾವುದು ಸ್ನೇಹ, ಯಾವುದು ಸಲುಗೆ, ಯಾವುದು ಆ ಕ್ಷಣಕ್ಕೆ ಸಲ್ಲಬಹುದಾದ ಸಮಾಧಾನ, ಯಾವುದು ಬದುಕಿನ ಏರುದಾರಿಯಲ್ಲೂ ಜೊತೆ ನಿಲ್ಲಬಹುದಾದ ಅನುಬಂಧ ಎನ್ನುವುದು ಗೊತ್ತಾಗದ ಗೊಂದಲವೇನೂ ಅಲ್ಲ. ಇಂದಿನ ಬದಲಾದ ಕಾಲಘಟ್ಟದಲ್ಲಿ ಹೆಣ್ಣು-ಗಂಡಿನ ನಡುವೆ ಸ್ನೇಹ ಸರಳವಾಗುತ್ತಿದೆ. ಆದರೆ, ಸ್ನೇಹದ ಪರಿಧಿ, ಇತಿ-ಮಿತಿಯ ಅರಿವಿದ್ದರೆ, ವಲಯರೇಖೆ ಸ್ಪಷ್ಟವಾಗಿದ್ದರೆ ಆಘಾತಕ್ಕೆ ಆಸ್ಪದವಿರದು...



# ಅಂಡಾಣು ಸಂರಕ್ಷಣೆ ಸುರಕ್ಷಿತ ಹೇಗೆ?

ಡಾ. ಸಂಧ್ಯಾ ಮಿಶ್ರಾ

ಕಾಳಜಿ

**ಅಂಡಾಶಯದಿಂದ** ಪ್ರತಿ ತಿಂಗಳು ಫಲಿತಗೊಳ್ಳದೇ ಹೊರಬರುವ ಅಂಡಾಣುಗಳನ್ನು ವೈದ್ಯಕೀಯ ಪ್ರಕ್ರಿಯೆ ಮೂಲಕ ಸಂರಕ್ಷಿಸುವ ಆಯ್ಕೆಯೊಂದು ಸದಾ ಇದೆ. ಇತ್ತೀಚಿನ ದಿನಗಳಲ್ಲಿ ವೃತ್ತಿಗಾಗಿ ಬದುಕನ್ನು ಮುಡಿಪಾಗಿಟ್ಟು, ಮದುವೆ, ಮಕ್ಕಳು ಮಾಡಿಕೊಳ್ಳುವುದರಿಂದ ತುಸು ದೂರ ಉಳಿಯುವ ಹೆಣ್ಣುಮಕ್ಕಳಿಗೆ ಈ ವಿಧಾನ ದೊಡ್ಡ ವರದಾನವಾಗಿದೆ. ಇದನ್ನು ಅಂಡಾಣು ಕ್ರಯೋಪ್ರೆಸರ್ವೇಷನ್ ಎಂದೂ ಕರೆಯಲಾಗುತ್ತದೆ.



ಆಧುನಿಕ ಬದುಕಿನಲ್ಲಿ ವೃತ್ತಿಯ ಒತ್ತಡ ಹಾಗೂ ದೈಹಿಕ ಅನಾರೋಗ್ಯದ ನಡುವೆ ಬದುಕುತ್ತಿರುವ ಹೆಣ್ಣುಮಕ್ಕಳಿಗೆ ಸಂತಾನೋತ್ಪತ್ತಿಯ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ಅಂಡಾಣು ಸಂರಕ್ಷಣೆ ಉತ್ತಮ ಮಾರ್ಗವಾಗಿದೆ. ಔಷಧಿಗಳನ್ನು ಸೂಕ್ತ ರೀತಿಯಲ್ಲಿ ನೀಡಿ ಅಂಡಾಣುಗಳನ್ನು ಬಿಡುಗಡೆ ಮಾಡುವಂತೆ ಅಂಡಾಶಯಗಳಿಗೆ ಉತ್ತೇಜನ ನೀಡಲಾಗುತ್ತದೆ.ನಂತರ ಅಂಡಾಣುಗಳನ್ನು ಹೊರತೆಗೆದು ಅದನ್ನು ಫಲಿತಗೊಳಿಸಲು ಸಂರಕ್ಷಿಸಲಾಗುತ್ತದೆ. ಗರ್ಭಾಶಯದಲ್ಲಿ ಇರಿಸುವ ಮೊದಲೇ ಅಂಡಾಣುಗಳನ್ನು ಫಲಿತಗೊಳಿಸಬಹುದು. ಒಂದು ವಯಸ್ಸಿನವರೆಗೆ ಆರೋಗ್ಯಕರ ಅಂಡಾಣುಗಳು ಉತ್ಪತ್ತಿಯಾಗುವುದರಿಂದ ಆ ವಯೋಮಿತಿಯಲ್ಲಿಯೇ ಈ ಚಿಕಿತ್ಸೆಗೆ ಒಳಗಾಗುವುದು ಮುಖ್ಯವಾಗುತ್ತದೆ.

### ಸಂರಕ್ಷಿಸುವ ವಿಧಾನ ಹೇಗೆ?

ಅಲ್ಟ್ರಾ ಸೊನೋಗ್ರಾಫಿಕ್ ಚಿಕಿತ್ಸೆಯ ಮೂಲಕ ಅಂಡಾಣುಗಳನ್ನು ಸಂರಕ್ಷಿಸಲಾಗುತ್ತದೆ. ಈ ಪ್ರಕ್ರಿಯೆ ಮೂರು ವಾರಗಳಾಗಬಹುದು. ಒಮ್ಮೆ ತೆಗೆದ ಅಂಡಾಣುಗಳನ್ನು ವರ್ಷಗಳ ಕಾಲ ಸಂರಕ್ಷಿಸಿಡಬಹುದು.

ಆಧುನಿಕ ಜೀವನಶೈಲಿಯಿಂದಾಗಿ ಮಹಿಳೆಯರಲ್ಲಿ ಈಚೆಗೆ ಪಿಸಿಒಡಿ ಮತ್ತು ಪಿಸಿಒಎಸ್‌ನಂಥ ಸಮಸ್ಯೆಗಳು ಸಾಮಾನ್ಯವಾಗಿವೆ. ಇಂಥ ಸಮಸ್ಯೆಗಳನ್ನು ಎದುರಿಸುತ್ತಿರುವ ಶೇ 75ಕ್ಕಿಂತ ಹೆಚ್ಚು ಮಹಿಳೆಯರು ಸೂಕ್ತ ರೀತಿಯಲ್ಲಿ ಗರ್ಭ ಧರಿಸಲು ಸಾಧ್ಯವಾಗುವುದಿಲ್ಲ ಎನ್ನುತ್ತದೆ ಸಂಶೋಧನೆ. ಭವಿಷ್ಯದಲ್ಲಿ ಸಂತಾನೋತ್ಪತ್ತಿ ಸಮಸ್ಯೆ ಬಾರದಂತೆ ಮಾಡಲು ಪ್ರಾಯೋಗಿಕ ಮಾರ್ಗವೆಂದರೆ ಅಂಡಾಣು ಸಂರಕ್ಷಣಾ ವಿಧಾನ.

ವಯಸ್ಸಾದಂತೆ ಫಲವತ್ತತೆ ಕಡಿಮೆಯಾಗುವುದರಿಂದ ಗುಣಮಟ್ಟದ ಅಂಡಾಣುಗಳನ್ನು 35ರಿಂದ 40 ವಯೋಮಿತಿಯಲ್ಲಿರುವ ಮಹಿಳೆಯರು ಸರಂಕ್ಷಿಸಿ ಇಡಬಹುದು ಅಂಡಾಣುಗಳನ್ನು ಸಂಗ್ರಹಿಸಿ, ಸಂರಕ್ಷಿಸುವ (ಫ್ರೀಜಿಂಗ್) ಪ್ರಕ್ರಿಯೆಯಲ್ಲಿ ಹಲವು ಹಂತಗಳಿವೆ. ಮೊದಲಿಗೆ ವೈದ್ಯಕೀಯ ಪರೀಕ್ಷೆಗೆ ಒಳಪಡಬೇಕು. ಈ ಸಂದರ್ಭದಲ್ಲಿ ಮಹಿಳೆಯ ಸಂಪೂರ್ಣ ವೈದ್ಯಕೀಯ ಇತಿಹಾಸವನ್ನು ಪಡೆಯಲಾಗುತ್ತದೆ. ಅಲ್ಟ್ರಾ ಸೌಂಡ್ ಸ್ಕ್ಯಾನ್ ಮೂಲಕ ಅಂಡಾಶಯ ಮತ್ತು ಅದರ ಆರೋಗ್ಯ ಸ್ಥಿತಿಯನ್ನು ಪರಿಶೀಲಿಸಲಾಗುತ್ತದೆ.

ಅಂಡಾಶಯದ ಕೋಶಕಗಳನ್ನು ಉತ್ತೇಜಿಸುವ ಹಾರ್ಮೋನ್‌ಗಳ ಚುಚ್ಚುಮದ್ದನ್ನು ಹತ್ತರಿಂದ ಹನ್ನೆರಡು ದಿನಗಳವರೆಗೆ ಅಂಡಾಶಯಗಳಿಗೆ ಚುಚ್ಚಲಾಗುತ್ತದೆ. ನಿಯಮಿತವಾಗಿ ರಕ್ತಪರೀಕ್ಷೆ ಮತ್ತು ಸ್ಕ್ಯಾನ್‌ನಿಂದ ಮೇಲ್ವಿಚಾರಣೆ ನಡೆಸಲಾಗುತ್ತದೆ. ಈ ಸಮಯದಲ್ಲಿ ಆದಷ್ಟು ಕಠಿಣ ವ್ಯಾಯಾಮದಿಂದ ದೂರವಿರಲು ಸಲಹೆ ನೀಡಲಾಗುತ್ತದೆ.

ಅರಿವಳಿಕೆ ಮದ್ದುನೀಡಿ, ಅಂಡಾಣುಗಳನ್ನು ಪಡೆಯಲಾಗುತ್ತದೆ. ನಂತರ ಇವುಗಳನ್ನು ಕ್ರಯೋಪ್ರಿಸರ್ವ್ ಮಾಡಲಾಗುತ್ತದೆ. ದೀರ್ಘಕಾಲದವರೆಗೆ ಅಂಡಾಣುಗಳನ್ನು ಸರಂಕ್ಷಿಸಬಹುದು. ಈ ಸಂದರ್ಭದಲ್ಲಿ ಚಿಕಿತ್ಸೆಗೆ ಒಳಗಾಗುವ ಮಹಿಳೆಯರಲ್ಲಿ ಹೊಟ್ಟೆ ಉಬ್ಬರಿಸುವುದು, ಸ್ತನಗಳಲ್ಲಿ ಮೃದುತ್ವ, ಸೆಳೆತ ಅಥವಾ ಸ್ವಲ್ಪ ರಕ್ತಸ್ರಾವದಂಥ ಸಾಧಾರಣ ಅಡ್ಡ ಪರಿಣಾಮಗಳು ಉಂಟಾಗಬಹುದು. 35ರ ಒಳಗೆ ಅಂಡಾಣುಗಳನ್ನು ಸಂಗ್ರಹಿಸುವ ಆಯ್ಕೆಗೆ ಒತ್ತು ನೀಡಿದರೆ ಸಂತಾನೋತ್ಪತ್ತಿ ಗರ್ಭಧಾರಣೆಯ ಸಾಧ್ಯತೆ ಹೆಚ್ಚಿರುತ್ತದೆ.

# ಮನೆಯಲ್ಲಿ ಮಾಡಿ ಕೂಲ್ ಡ್ರಿಂಕ್ಸ್



ವೇದಾವತಿ ಎಚ್. ಎಸ್.

### ಸಾಬುದಾನ ಕಸ್ಟರ್ಡ್ ಫ್ರೂಟ್ಸ್ ಕೂಲ್ ಡ್ರಿಂಕ್.

ಬೇಕಾಗುವ ಸಾಮಗ್ರಿಗಳು: ಹಾಲು 1/2 ಲೀಟರ್, ಕಾಮಕಸ್ತೂರಿ ಬೀಜ (ಬೇಸಿಲ್ ಸೀಡ್ಸ್) 1 ಟೇಬಲ್ ಚಮಚ, ಸಕ್ಕರೆ 1/2 ಕಪ್, ಹಾಲಿನ ಪುಡಿ 2 ಟೇಬಲ್ ಚಮಚ, ಕಸ್ಟರ್ಡ್ ಪೌಡರ್ 1 ಟೇಬಲ್ ಚಮಚ, ಸಾಬುದಾನ ಚಿಕ್ಕ ಗಾತ್ರದ್ದು 1/2 ಕಪ್, ನಿಮಗಿಷ್ಟವಾದ ಹಣ್ಣುಗಳು ದ್ರಾಕ್ಷಿ, ಸೇಬು, ಬಾಳೆಹಣ್ಣು, ಸೀಬೆ ಎಲ್ಲವೂ 1/4 ಕಪ್‌ನಂತೆ ಚಿಕ್ಕದಾಗಿ ಹೆಚ್ಚಿಕೊಳ್ಳಿ. ಒಣದ್ರಾಕ್ಷಿ, ಬಾದಾಮಿ, ಗೋಡಂಬಿ, ಪಿಸ್ತಾ ಎಲ್ಲವನ್ನೂ ಹತ್ತರಂತೆ ತೆಗೆದುಕೊಂಡು ಚಿಕ್ಕದಾಗಿ ಕತ್ತರಿಸಿಕೊಳ್ಳಿ.

ತಯಾರಿಸುವ ವಿಧಾನ: ಕಾಮಕಸ್ತೂರಿ ಬೀಜವನ್ನು ಅರ್ಧ ಕಪ್ ನೀರಿನಲ್ಲಿ 5 ರಿಂದ 10 ನಿಮಿಷ ನೆನೆಸಿಟ್ಟುಕೊಳ್ಳಿ. ಬಾಣಲೆಗೆ ಹಾಲು, ಸಕ್ಕರೆ, ಹಾಲಿನ ಪುಡಿ, ಕಸ್ಟರ್ಡ್ ಪೌಡರ್ ಹಾಕಿ ಗಂಟಾಗದAತೆ ಮಿಶ್ರಣ ಮಾಡಿ. ಈ ಮಿಶ್ರಣವನ್ನು ಒಲೆಯ ಮೇಲಿಟ್ಟು ಮಧ್ಯಮ ಉರಿಯಲ್ಲಿ 5 ರಿಂದ 6 ನಿಮಿಷ ಕುದಿಸಿ. ಬಳಿಕ ಬಟ್ಟಲಿಗೆ ಹಾಕಿ ಒಂದು ಗಂಟೆ ರೆಫ್ರಿಜರೇಟರ್‌ನಲ್ಲಿ ಇಡಿ. ಬಾಣಲೆಯಲ್ಲಿ ಒಂದು ಲೀಟರ್ ನೀರನ್ನು ಬಿಸಿ ಮಾಡಿಕೊಳ್ಳಿ. ಸಾಬುದಾನವನ್ನು ತೊಳೆದು ಕುದಿಯುತ್ತಿರುವ ನೀರಿಗೆ ಹಾಕಿ. ಬಳಿಕ 8 ರಿಂದ 10 ನಿಮಿಷ ಮೆತ್ತಗೆ ಬೇಯಿಸಿ. ನಂತರ ಸೋಸಿಕೊಳ್ಳಿ. ಹೆಚ್ಚಿನ ಸ್ಟಾರ್ಚ್ ತೆಗೆಯಲು ನೀರನ್ನು ಹಾಕಿ ಸೋಸಿಕೊಳ್ಳಿ. ಹಾಲಿನ ಮಿಶ್ರಣವನ್ನು ರೆಫ್ರಿಜರೇಟರ್‌ನಿಂದ ತೆಗೆದು ಬೇಯಿಸಿಕೊಂಡ ಸಾಬುದಾನ, ನೆನೆಸಿಟ್ಟ ಕಾಮಕಸ್ತೂರಿ ಬೀಜ, ನಿಮಗಿಷ್ಟವಾದ ಹಣ್ಣುಗಳು ಮತ್ತು ತಿಳಿಸಿರುವ ಡ್ರೈ ಫ್ರೂಟ್ಸ್ ಸೇರಿಸಿ ಮಿಶ್ರಣ ಮಾಡಿ. ನಂತರ ಸರ್ವಿಂಗ್ ಗ್ಲಾಸಿಗೆ ಹಾಕಿಕೊಂಡು ಸವಿಯಿರಿ.

### ಸಾಬುದಾನ ರಿಫ್ರೆಶಿಂಗ್ ಡ್ರಿಂಕ್.

ಬೇಕಾಗುವ ಸಾಮಗ್ರಿಗಳು: ಸಾಬುದಾನ 1/2 ಕಪ್, ತಣ್ಣಗಿನ ಹಾಲು 1 ಲೀಟರ್, ಸಕ್ಕರೆ 1/2 ಕಪ್, ರೋಸ್ ಸಿರಾಪ್ 4 ಟೇಬಲ್ ಚಮಚ, ಪಿಸ್ತಾ, ಬಾದಾಮಿ ಚೂರುಗಳು ಎರಡೇರಡು ಟೇಬಲ್ ಚಮಚ, ಸ್ಟ್ರಾಬೆರಿ ಜೆಲ್ಲಿ ಕ್ರಿಸ್ಟಲ್ಸ್ 90ಗ್ರಾಂ, ಬೇಸಿಲ್ ಸೀಡ್ಸ್ 1 ಟೇಬಲ್ ಚಮಚ.

ತಯಾರಿಸುವ ವಿಧಾನ: ಅರ್ಧ ಲೀಟರ್ ಕುದಿಯುತ್ತಿರುವ ನೀರಿಗೆ ಸ್ಟ್ರಾಬರಿ ಜೆಲ್ಲಿ ಕ್ರಿಸ್ಟಲ್ ಹಾಕಿ ಮಿಶ್ರಣ ಮಾಡಿ ಅರ್ಧ ಗಂಟೆ ರಿಫ್ರಿಜರೇಟರ್‌ನಲ್ಲಿಡಿ. ಬಳಿಕ ಚಿಕ್ಕದಾಗಿ ಕತ್ತರಿಸಿಕೊಳ್ಳಿ. ಬೇಸಿಲ್ ಸೀಡ್ಸ್ಗೆ ಅರ್ಧ ಕಪ್ ನೀರು ಹಾಕಿ ಐದು ನಿಮಿಷ ನೆನೆಯಲು ಬಿಡಿ. ನಾಲ್ಕು ಕಪ್ ಕುದಿಯುತ್ತಿರುವ ಬಿಸಿ ನೀರಿಗೆ ಸಾಬುದಾನವನ್ನು ಹಾಕಿ ಮೆತ್ತಗೆ ಬೇಯಿಸಿಕೊಳ್ಳಿ. ಬಳಿಕ ಸೋಸಿಕೊಳ್ಳಿ. ಪುನಃ ತಣ್ಣೀರನ್ನು ಹಾಕಿ ಸಾಬುದಾನದಲ್ಲಿರುವ ಸ್ಟಾರ್ಚ್ ತೆಗೆಯಿರಿ. ಈಗ ಹಾಲಿಗೆ ಸಕ್ಕರೆ ಮತ್ತು ರೋಸ್ ಸಿರಾಪ್ ಹಾಕಿ ಚೆನ್ನಾಗಿ ಮಿಶ್ರಣ ಮಾಡಿ. ಬಳಿಕ ಸಾಬುದಾನ, ಬೇಸಿಲ್ ಸೀಡ್ಸ್, ಸ್ಟ್ರಾಬೆರಿ ಜೆಲ್ಲಿ, ಪಿಸ್ತಾ, ಬಾದಾಮಿ ಚೂರುಗಳನ್ನು ಸೇರಿಸಿ ಮಿಶ್ರಣ ಮಾಡಿ. ಇದನ್ನು ಒಂದು ಗಂಟೆ ರಿಫ್ರಿಜರೇಟರ್‌ನಲ್ಲಿಟ್ಟು ಬಳಿಕ ಸವಿಯಿರಿ.



### ಕಸ್ಟರ್ಡ್ ಕೂಲ್ ಶರಬತ್ತು



ಬೇಕಾಗುವ ಸಾಮಗ್ರಿಗಳು: ಎಳನೀರು ಜೆಲ್ಲಿ: 2 ಕಪ್ ಎಳನೀರು, 2 ಟೇಬಲ್ ಚಮಚ ಸಕ್ಕರೆ, 1 ಟೀ ಚಮಚ ಅಗರ್ ಅಗರ್ ಪೌಡರ್. ಇವುಗಳನ್ನು ಬಾಣಲೆಗೆ ಹಾಕಿ ಮಿಶ್ರಣ ಮಾಡಿ ಕುದಿಸಿ. ಕುದಿ ಬಂದರೆ ಸಾಕು. ಆರಿದ ಬಳಿಕ ಒಂದು ಬಟ್ಟಲಿಗೆ ಹಾಕಿ ರೆಫ್ರಿಜರೇಟರ್‌ನಲ್ಲಿ 1/2 ಗಂಟೆ ಇಟ್ಟು ಗಟ್ಟಿಯಾದ ಬಳಿಕ ಚಿಕ್ಕದಾಗಿ ಕತ್ತರಿಸಿಕೊಳ್ಳಿ.

ಬೇಸಿಲ್ ಸೀಡ್ಸ್ 1 ಟೇಬಲ್ ಚಮಚ ಬಟ್ಟಲಿಗೆ ಹಾಕಿ, 1/2 ಕಪ್ ನೀರು ಸೇರಿಸಿ ಐದು ನಿಮಿಷ ಬಿಡಿ.

ಗೋಡಂಬಿ, ಪಿಸ್ತಾ, ಬಾದಾಮಿ ಎಲ್ಲವನ್ನೂ 10ರಂತೆ ತೆಗದುಕೊಂಡು 2 ಏಲಕ್ಕಿ ಸೇರಿಸಿ ನುಣ್ಣಗೆ ಪುಡಿ ಮಾಡಿಕೊಳ್ಳಿ.

ಹಾಲು 1/2 ಲೀಟರ್, ಸಕ್ಕರೆ 1/4 ಕಪ್, ವೆನಿಲ್ಲಾ ಕಸ್ಟರ್ಡ್ ಪೌಡರ್ 1 ಟೇಬಲ್ ಚಮಚ.

ತಯಾರಿಸುವ ವಿಧಾನ: ವೆನಿಲ್ಲಾ ಕಸ್ಟರ್ಡ್ ಪೌಡರ್‌ಗೆ ಅರ್ಧ ಕಪ್ ಹಾಲನ್ನು ಹಾಕಿ ಕರಗಿಸಿಕೊಳ್ಳಿ. ಬಾಣಲೆಗೆ ಹಾಲು, ಸಕ್ಕರೆ ಮತ್ತು ಪುಡಿ ಮಾಡಿದ ಡ್ರೈ ಫ್ರೂಟ್ಸ್ ಮಿಶ್ರಣವನ್ನು ಹಾಕಿ ಕುದಿಸಿ. ಕುದಿ ಬಂದ ಬಳಿಕ ಕಸ್ಟರ್ಡ್ ಪೇಸ್ಟ್ ಹಾಕಿ ಮಿಶ್ರಣ ಮಾಡಿ. ಮಧ್ಯಮ ಉರಿಯಲ್ಲಿ ಗಂಟಾಗದ ರೀತಿ ಮಿಶ್ರಣ ಮಾಡುತ್ತಿರಿ. ಮಿಶ್ರಣ ದಪ್ಪವಾಗುತ್ತಾ ಬಂದಾಗ ಒಲೆಯನ್ನು ಆರಿಸಿ ಆರಲು ಬಿಡಿ. ಪೂರ್ತಿ ಆರಿದ ಬಳಿಕ ಎಳನೀರು ಜೆಲ್ಲಿ, ಬೇಸಿಲ್ ಸೀಡ್ಸ್ ಸೇರಿಸಿ ಮಿಶ್ರಣ ಮಾಡಿ. ಬಳಿಕ ರೆಫ್ರಿಜರೇಟರ್‌ನಲ್ಲಿಟ್ಟು ತಣ್ಣಗೆ ಮಾಡಿಕೊಂಡು ಸವಿಯಿರಿ.

### ಕರಬೂಜ ಹಣ್ಣಿನ ಶರಬತ್ತು.

ಬೇಕಾಗುವ ಸಾಮಗ್ರಿಗಳು: ಕರಬೂಜ ಹಣ್ಣು ಮಧ್ಯಮ ಗಾತ್ರದ್ದು 1, ಏಲಕ್ಕಿ ಬೀಜ 2, ಬೇಸಿಲ್ ಸೀಡ್ಸ್ 1 ಟೇಬಲ್ ಚಮಚ, ಹಾಲು 1/2 ಲೀಟರ್, ಮಿಲ್ಕ್ ಪೌಡರ್ 2 ಟೇಬಲ್ ಚಮಚ, ಕಸ್ಟರ್ಡ್ ಪೌಡರ್ 1 ಟೇಬಲ್ ಚಮಚ, 1/2 ಕಪ್ ಸಕ್ಕರೆ, ಸಾಬುದಾನ 1/2 ಕಪ್, ಪಿಸ್ತಾ, ಬಾದಾಮಿ ಚಿಕ್ಕದಾಗಿ ಕತ್ತರಿಸಿದ್ದು ಎರಡೇರಡು ಟೇಬಲ್ ಚಮಚ, ಅಲಂಕರಿಸಲು ಪಿಸ್ತಾದ ಚೂರುಗಳು ಸ್ವಲ್ಪ.

ತಯಾರಿಸುವ ವಿಧಾನ: ಕರಬೂಜ ಹಣ್ಣಿನ ಸಿಪ್ಪೆ ಮತ್ತು ಬೀಜವನ್ನು ತೆಗೆದು ಹೆಚ್ಚಿಟ್ಟುಕೊಳ್ಳಿ. ಚಿಕ್ಕದಾಗಿ ಹೆಚ್ಚಿದ ಕರಬೂಜ ಹಣ್ಣು 2 ರಿಂದ 3 ಟೇಬಲ್ ಚಮಚ ಎತ್ತಿಟ್ಟುಕೊಳ್ಳಿ. ಉಳಿದ ಕರಬೂಜ ಹಣ್ಣು ಮತ್ತು ಸಿಪ್ಪೆ ತೆಗೆದ ಏಲಕ್ಕಿ ಬೀಜವನ್ನು ಮಿಕ್ಸಿ ಜಾರಿಗೆ ಹಾಕಿ ನುಣ್ಣಗೆ ರುಬ್ಬಿಕೊಂಡು ಒಂದು ಬಟ್ಟಲಿಗೆ ಹಾಕಿಕೊಳ್ಳಿ. ಬೇಸಿಲ್ ಸೀಡ್ಸ್‌ಅನ್ನು ಬಟ್ಟಲಿಗೆ ಹಾಕಿ ಅರ್ಧ ಕಪ್ ನೀರನ್ನು ಸೇರಿಸಿ 5 ರಿಂದ ಹತ್ತು ನಿಮಿಷ ನೆನೆಸಿಟ್ಟುಕೊಳ್ಳಿ. ಬಾಣಲೆಗೆ ಹಾಲು, ಹಾಲಿನ ಪುಡಿ, ಕಸ್ಟರ್ಡ್ಪೌಡರ್ ಮತ್ತು ಸಕ್ಕರೆಯನ್ನು ಹಾಕಿ ಮಿಶ್ರಣ ಮಾಡಿ. ಈ ಮಿಶ್ರಣವನ್ನು ಒಲೆಯ ಮೇಲಿಟ್ಟು 5 ರಿಂದ 6 ನಿಮಿಷ ಕುದಿಸಿ ಆರಲು ಬಿಡಿ. ಸಾಬುದಾನವನ್ನು ತೊಳೆದು ಬಾಣಲೆಗೆ ಹಾಕಿ. ನಾಲ್ಕು ಕಪ್ ನೀರು ಸೇರಿಸಿ 8 ರಿಂದ 10 ನಿಮಿಷ ಮೆತ್ತಗೆ ಬೇಯಿಸಿ. ಬಳಿಕ ಸೋಸಿಕೊಳ್ಳಿ. ಸ್ವಲ್ಪ ನೀರನ್ನು ಹಾಕಿ ಪುನಃ ಸೋಸಿಕೊಳ್ಳಿ. ಈಗ ಹಾಲಿನ ಮಿಶ್ರಣಕ್ಕೆ ಸಾಬುದಾನ, ಹಣ್ಣಿನ ಪೇಸ್ಟ್, ಬೇಸಿಲ್ ಸೀಡ್ಸ್, ಚಿಕ್ಕದಾಗಿ ಕತ್ತರಿಸಿಕೊಂಡ ಕರಬೂಜ ಹಣ್ಣು, ಪಿಸ್ತಾ, ಬಾದಾಮಿಯನ್ನು ಸೇರಿಸಿ ಮಿಶ್ರಣ ಮಾಡಿ. ಬಳಿಕ ಒಂದು ಗಂಟೆ ರೆಫ್ರಿಜರೇಟರ್‌ನಲ್ಲಿ ಇಡಿ. ನಂತರ ಸರ್ವಿಂಗ್ ಗ್ಲಾಸಿಗೆ ಹಾಕಿ ಪಿಸ್ತಾದ ಚೂರುಗಳಿಂದ ಅಲಂಕರಿಸಿ.



# ಪ್ರೇತಬಾಧೆ ಆಗುತ್ತದೆಯೇ?

ಅಂತರಂಗ



ಅಕ್ಷರ ದಾಮ್ಲೆ

**ಸರ್,** ನನಗೆ ಬಾಲ್ಯದಿಂದಲೂ ವಿಚಿತ್ರವಾದ ಸಮಸ್ಯೆಯೊಂದು ಕಾಡುತ್ತಿದೆ. ವರ್ಷದಲ್ಲಿ ಒಮ್ಮೆಯಾದರೂ ಈ ರೀತಿಯ ಅನುಭವ ಆಗುತ್ತಲೇ ಇರುತ್ತದೆ. ಗಾಢ ನಿದ್ರೆಯಲ್ಲಿದ್ದಾಗ ಒಮ್ಮಿದೊಂಮ್ಮೆಲೆ ನನ್ನ ಕೂದಲನ್ನು ಯಾರೋ ಜಗ್ಗಿದ ಹಾಗೆ ಆಗುತ್ತದೆ. ಕೆಲವೊಮ್ಮೆ ಯಾರೋ ನನ್ನ ಎದೆಯ ಮೇಲೆ ಅಕ್ಷರಶಃ ಕುಳಿತು ಕತ್ತು ಹಿಸುಕುತ್ತಿರುವಂತೆ, ಆ ಕ್ಷಣ ದೇಹವೆಲ್ಲ ಗಟ್ಟಿಯಾಗಿ ಉಸಿರಾಡಲು ಸಾಧ್ಯವೇ ಆಗದಂಥಾಗುತ್ತದೆ. ಅದರ ತೀವ್ರತೆ ಎಷ್ಟಿರುತ್ತದೆಯೆಂದರೆ ಜೋರಾಗಿ ಕೂಗಿಕೊಳ್ಳಲು ಆಗದೇ, ಮಲಗಿದವಳು ಏಳಲು ಆಗದೇ ಒದ್ದಾಡುವಂತೆ ಆಗುತ್ತದೆ. ಹೀಗೆ ಆಗುವಾಗ ಕೆಲವೊಮ್ಮೆ ಹಿತವಾದ ದನಿಯೊಂದು ಕೇಳಿಸಿದರೆ, ಇನ್ನು ಕೆಲವೊಮ್ಮೆ ಕರ್ಕಶವಾದ ಹೆಣ್ಣಿನ ದನಿ ರೋಧಿಸಿದಂತೆ ಕೇಳಿಸುತ್ತದೆ. ನನಗೆ ಅಗೋಚರ ಶಕ್ತಿಗಳ ಮೇಲೆ ನಂಬಿಕೆ ಇಲ್ಲ. ಹೀಗಿದ್ದೂ, ಪ್ರೇತಬಾಧೆಯೆಂದು ಹಲವು ಪೂಜೆ-ಪುನಸ್ಕಾರಗಳನ್ನು ಮನೆಯವರ ಅಣತಿಯಂತೆ ಮಾಡಲಾಯಿತು. ಆದರೂ ಈ ರೀತಿಯ ಅನುಭವ ಆಗುತ್ತಲೇ ಇದೆ. ಇದನ್ನು ತಿಳಿದುಕೊಳ್ಳುವುದಕ್ಕಾಗಿಯೇ ಮನಃಶಾಸ್ತ್ರಕ್ಕೆ ಸಂಬಂಧಪಟ್ಟ ಕೋರ್ಸ್ ತೆಗೆದುಕೊಂಡಿದ್ದೇನೆ. ಇದು ನನ್ನ ಸುಪ್ತಪ್ರಜ್ಞೆಯಲ್ಲಿ ಉಳಿದ ಯಾವುದೋ ಗಾಯವಿರಬಹುದಾ ಎಂದು ಕೆದಕಲು ತುಂಬಾ ಶ್ರಮಪಟ್ಟಿದ್ದೇನೆ. ಆದರೆ, ಸೋತಿದ್ದೇನೆ. ನನ್ನ ಬಾಲ್ಯ ಸೊಗಸಾಗಿತ್ತು. ಅಪ್ಪ, ಅಮ್ಮ, ನಾನು ಮತ್ತು ತಮ್ಮನಿರುವ ಪುಟ್ಟ ಪ್ರೀತಿಯ ಕುಟುಂಬ.ನನ್ನದು ತೃಪ್ತ ಮನಸ್ಸು. ಹಿಂಜರಿಕೆ, ಹತಾಶೆಗಳಿಲ್ಲದ ಸರಳ ಬದುಕು. ಆದರೆ ಹೀಗೆಕೆ ಆಗುತ್ತಿದೆ? ಇದಕ್ಕೆ ಕಾರಣ ಏನಿರಬಹುದು ಎಂದು ಅರ್ಥ ಮಾಡಿಕೊಳ್ಳಲು, ನನ್ನನ್ನು ನಾನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ. ಇದಕ್ಕೆ ಸಂಬಂಧಪಟ್ಟ ಹಾಗೆ ಮನೋವೈದ್ಯರ ಬಳಿಯೂ ಹೋಗಿದ್ದೇನೆ. ಆದರೆ, ಅವರು ಕೊಟ್ಟ ಮಾತ್ರೆ, ಥೆರಪಿಗಳು ಇಂಥ ಭಯಾನಕ ಅನುಭವ ಆದ ಮೇಲೆ ತುಸು ಉಪಯೋಗಕ್ಕೆ ಬಂದವೇ ಹೊರತು, ಈ ಅನುಭವವೇ ಆಗದಂತೆ ತಡೆಯಲು ಸಾಧ್ಯವಾಗಿಲ್ಲ. ಒಬ್ಬಳೇ ಇರಲು ಹೆದರಿಕೆಯಾಗುತ್ತದೆ. ಈ ಅನುಭವಗಳು ಯಾಕಾಗುತ್ತವೆ?



ಈ ಪ್ರಶ್ನೆಗೆ ನಾನು ಅನುಭಾವಿಕ ನೆಲೆಯಲ್ಲಿ ಉತ್ತರ ಕೊಡಬಹುದಷ್ಟೇ ವಿನಃ ವೈಜ್ಞಾನಿಕವಾಗಿ ಉತ್ತರಿಸುವುದು ಕಷ್ಟ. ಆತ್ಮಗಳು ಇವೆಯೋ, ಇದ್ದರೆ ಅವು ನಮಗೆ ತೊಂದರೆ ಕೊಡುತ್ತವೆಯೋ ಹೀಗೆ ಅನೇಕ ಪ್ರಶ್ನೆಗಳು ನನ್ನ ಮನಸ್ಸಿನಲ್ಲೂ ಕಾಡಿದಂತಹವೇ. ಇತರರಲ್ಲಿ ಕೇಳಿದಾಗ ಅವರು ಕೊಟ್ಟ ಉತ್ತರಗಳ ಆಧಾರ ಮೇಲೆ ನಾನು ನಿಮಗೆ ಇಲ್ಲಿ ಉತ್ತರಿಸುತ್ತಿದ್ದೇನೆ. ಇದನ್ನು ಒಂದಷ್ಟು ಜನ ಒಪ್ಪಿಕೊಳ್ಳಬಹುದು. ಇನ್ನೊಂದಷ್ಟು ಜನ ಒಪ್ಪದೇ ಇರಬಹುದು. ಅದು ಅವರವರವ ಅನುಭವಕ್ಕೆ ಬಿಟ್ಟದ್ದು.

ದೇವರಿದ್ದಾನೋ ಎಂಬ ಪ್ರಶ್ನೆಗೆ ಉತ್ತರವನ್ನು ಹುಡುಕುವುದು ಎಷ್ಟು ಕಷ್ಟವೋ ಅಷ್ಟೇ ಕಷ್ಟ ಪ್ರೇತಗಳು ಅಥವಾ ಆತ್ಮಗಳು ಇವೆಯೋ ಎಂಬುವುದನ್ನು ಉತ್ತರಿಸುವುದು. ಆದರೆ ಅನೇಕರ ಜೀವನದಲ್ಲಿ ಅಗೋಚರ ಶಕ್ತಿಯ ಅನುಭವ ಆದ ದಾಖಲೆಗಳು ಇವೆ. ಉದಾಹರಣೆಗೆ, ಹೋಟೇಲೊಂದರ ಒಂದು ರೂಮಿನಲ್ಲಿ ಉಳಿದುಕೊಂಡವರಿಗೆ ಮಧ್ಯರಾತ್ರಿ ಒಬ್ಬ ಹೆಂಗಸಿನ ಆತ್ಮ ಇದ್ದಂತಹ ಅನುಭವಗಳಾಗಿತ್ತು. ವಿಚಾರಿಸಿದಾಗ, ಅದೇ ರೂಮಿನಲ್ಲಿ ಒಬ್ಬಾಕೆ ಹಿಂದೊಂದು ದಿನ ಆತ್ಮಹತ್ಯೆ ಮಾಡಿಕೊಂಡಿದ್ದಳು. ಪದೇ ಪದೇ ಇತರರಿಗೂ ಅಂತಹ ಅನುಭವಗಳಾದಾಗ ಬಹುಷಃ ಆಕೆಯ ಆತ್ಮ ಅಲ್ಲಿ ಇನ್ನೂ ಇದೆಯೋ ಎಂಬ ಸಂಶಯ ಮೂಡಿತು. ಆಮೇಲೆ ಕೆಲವು ಪೂಜೆ, ಮಂತ್ರ - ತಂತ್ರಗಳ ನಂತರ ಅದನ್ನು ತೆಗೆಯಲಾಯಿತು ಮತ್ತು ಆಮೇಲೆ ಅಲ್ಲಿ ಸಮಸ್ಯೆ ಆಗಲಿಲ್ಲ. ಇದನ್ನು ಆಧುನಿಕ ಮನೋವಿಜ್ಞಾನಿಗಳು ಭ್ರಮೆ ಅಥವಾ ಭ್ರಾಂತಿ ಎನ್ನಬಹುದು. ಅಥವಾ ಕಾಕತಾಳೀಯ ಎನ್ನಬಹುದು. ಆದರೆ ಅದನ್ನು ನಿಜವಾಗಿ ಕಂಡವರಿಗೆ ಅದು ಸತ್ಯವೇ ಆಗಿರುತ್ತದೆ.

ಶಮನಿಸಂ ಎನ್ನುವಂತಹ ಪದ್ಧತಿಯಲ್ಲಿ ವೃತ್ತಿಪರರು ಆತ್ಮಗಳ ಜೊತೆ ಸಂವಹಿಸುತ್ತಾರೆ. ಮತ್ತು ಅವುಗಳ ಪ್ರಭಾವವನ್ನು ತೆಗೆಯುತ್ತಾರೆ. ಹಾಗೆಯೇ ನಮ್ಮ ಭಾರತೀಯ ಪದ್ಧತಿಯಲ್ಲೂ ಮಂತ್ರ- ತಂತ್ರಗಳನ್ನು ಮಾಡುವವರು ಇದ್ದಾರೆ. ಇವುಗಳ ಮಾರ್ಗಗಳು ಬೇರೆ ಬೇರೆಯಾದರೂ ಅವುಗಳ ಪರಿಣಾಮಗಳು ಸುಮಾರಾಗಿ ಒಂದೇ ರೀತಿಯದ್ದಾಗಿರಬಹುದು.

ನಿಮಗೆ ಆಗುತ್ತಿರುವಂತಹ ಅನುಭವಗಳನ್ನು ಗಮನಿಸಿದಾಗ, ಇದು ಮನಃಶ್ಶಾಸ್ತ್ರೀಯ ಸಮಸ್ಯೆಗಿಂತ ಭಿನ್ನವಾಗಿ ಕಾಣಿಸುತ್ತದೆ. ಬಹುಷಃ ನೀವು ನಿಮ್ಮ ಮಲಗುವ ಜಾಗವನ್ನು ಬದಲಾಯಿಸಿ ನೋಡಿ. ಅಥವಾ ನೀವು ಮಲಗುವ ಜಾಗದಲ್ಲಿ ಇನ್ಯಾರಾದರೂ ಮನೆಯ ಮಂದಿ ಮಲಗಿ ಅವರಿಗೂ ಈ ರೀತಿಯ ಅನುಭವ ಆಗುತ್ತದೆಯೋ ಅಥವಾ ನಿಮಗೆ ಮಾತ್ರವೋ ಎಂಬುದನ್ನು ಗಮನಿಸಿ. ಮತ್ತು ಇಂತಹ ಸಮಸ್ಯೆಗಳನ್ನು ಸರಿಪಡಿಸುವಂತಹ ವೃತ್ತಿಪರರ ಬಳಿ ಸಹಾಯವನ್ನು ಪಡೆಯಿರಿ. ಇಂತಹ ಸಮಸ್ಯೆಗಳಿಗೆ ಕೌನ್ಸೆಲಿಂಗ್ ಆಗಲೀ ಅಥವಾ ಸೈಕೊಥೆರಪಿ ಆಗಲೀ ಪ್ರಯೋಜನವಾಗಲಿಕ್ಕಿಲ್ಲ. ಯಾಕೆಂದರೆ, ಇದು ಮನಸ್ಸಿಗೆ ಸಂಬಂಧ ಪಟ್ಟಂತಹ ಸಮಸ್ಯೆ ಎಂದು ನನಗೆ ಅನ್ನಿಸುತ್ತಿಲ್ಲ. ನೀವು ಈಗ ಮನಃಶ್ಶಾಸ್ತ್ರವನ್ನು ಕಲಿತಿರುವ ಕಾರಣ ನೀವು ನನ್ನ ಅಭಿಪ್ರಾಯಕ್ಕೆ ಸಹಮತಿಯನ್ನು ಕೊಡುತ್ತೀರೆಂದು ಭಾವಿಸುತ್ತೇನೆ. ಒಳ್ಳೆಯದಾಗಲಿ.

# ‘ನೇಮಕಾತಿ ಅಕ್ರಮ ತಡೆಗೆ ನಿಯಮ ಜಾರಿಗೆ ತನ್ನಿ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ನೇಮಕಾತಿ ಪರೀಕ್ಷೆಗಳಲ್ಲಿ ಭ್ರಷ್ಟಾಚಾರವನ್ನು ತಡೆಯುವ ಸಂಬಂಧ ರೂಪಿಸಲಾಗಿರುವ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತನ್ನಿ’ ಎಂದು ಸಂವಿಧಾನದ 371–ಜೆ ವಿಧಿ ಅನುಷ್ಠಾನ ಕುರಿತಾದ ಸಚಿವ ಸಂಪುಟ ಉಪ ಸಮಿತಿ ಅಧ್ಯಕ್ಷ, ಸಚಿವ ಪ್ರಿಯಾಂಕ್ ಖರ್ಗೆ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಪತ್ರ ಬರೆದಿದ್ದಾರೆ.

‘ಭ್ರಷ್ಟಾಚಾರ ನಿವಾರಿಸಿ ನೇಮಕಾತಿಗಳನ್ನು ಮುಕ್ತವಾಗಿ ನಡೆಸುವ ಉದ್ದೇಶದಿಂದ ‘ಕರ್ನಾಟಕ ಸಾರ್ವಜನಿಕ ಪರೀಕ್ಷೆ (ನೇಮಕಾತಿಯಲ್ಲಿನ ಭ್ರಷ್ಟಾಚಾರ ಮತ್ತು ಅನುಚಿತ ವಿಧಾನಗಳ ಪ್ರತಿಬಂಧಕ ಕ್ರಮಗಳು) ಕಾಯ್ದೆ’ಯನ್ನು ಜಾರಿಗೆ ತರಲಾಗಿದೆ. ಕಾಯ್ದೆಯಲ್ಲಿನ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತನ್ನಿ ಎಂದು ಎಲ್ಲ ಪರೀಕ್ಷಾ ಪ್ರಾಧಿಕಾರಗಳಿಗೆ ಸೂಚನೆ ನೀಡಿ’ ಎಂದು ಪತ್ರದಲ್ಲಿ ಹೇಳಿದ್ದಾರೆ.



**ಈ ನಿಯಮಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತಂದರೆ ನೇಮಕಾತಿ ಪರೀಕ್ಷೆಗಳು ಮತ್ತು ಮೌಲ್ಯಮಾಪನವು ನ್ಯಾಯಯುತವಾಗಿ ನಡೆಯುತ್ತದೆ ಎಂಬ ವಿಶ್ವಾಸ ಇದೆ**

**ಪ್ರಿಯಾಂಕ್ ಖರ್ಗೆ**
ಗ್ರಾಮೀಣಾಭಿವೃದ್ಧಿ ಸಚಿವ

‘ಎಲ್ಲ ಪರೀಕ್ಷಾ ಪ್ರಾಧಿಕಾರಗಳು ಮತ್ತು ಕಾನೂನು ಜಾರಿ ಸಂಸ್ಥೆಗಳ ಸಿಬ್ಬಂದಿಗೆ ಈ ಕಾಯ್ದೆಯ ಮಹತ್ವದ ಬಗ್ಗೆ ಜಾಗೃತಿ ಮೂಡಿಸಬೇಕು. ಪರೀಕ್ಷಾ ಮೇಲ್ವಿಚಾರಣೆ, ಅಕ್ರಮಗಳ ಕುರಿತು ವರದಿ ಮಾಡಲು ‘ಸಾಮಾನ್ಯ ಕಾರ್ಯಾಚರಣಾ ವಿಧಾನ–ಎಸ್‌ಒಪಿ’ ರಚನೆ, ಪರೀಕ್ಷಾ ಕರ್ತವ್ಯಕ್ಕೆ ಹಾಜರಾಗುವ ಸಿಬ್ಬಂದಿಗೆ ತರಬೇತಿ ನೀಡಬೇಕು. ಇದಕ್ಕಾಗಿ ಅಗತ್ಯ ಕಾರ್ಯಕ್ರಮಗಳನ್ನು ರೂಪಿಸಿ’ ಎಂದು ಸೂಚಿಸಿದ್ದಾರೆ.

‘ಈ ನಿಯಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವಲ್ಲಿ ಪೊಲೀಸ್ ಇಲಾಖೆ ಮಹತ್ವದ ಪಾತ್ರ ವಹಿಸುತ್ತದೆ. ಪರೀಕ್ಷಾ ಕಣ್ಗಾವಲು, ಮೇಲ್ವಿಚಾರಣೆ ಮತ್ತು ಅಕ್ರಮ ಪ್ರಕರಣಗಳಲ್ಲಿ ತನಿಖೆ ನಡೆಸಿ, ತಪ್ಪಿತಸ್ಥರಿಗೆ ಶಿಕ್ಷೆಯಾಗುವಂತೆ ಎಚ್ಚರ ವಹಿಸುವ ಮಹತ್ವದ ಹೊಣೆಗಾರಿಕೆ ಪೊಲೀಸರ ಮೇಲಿದೆ. ಹೀಗಾಗಿ ಕಾಯ್ದೆಯ ನಿಯಮಗಳ ಬಗ್ಗೆ ಪೊಲೀಸರಲ್ಲೂ ಜಾಗೃತಿ ಮೂಡಿಸಬೇಕು’ ಎಂದಿದ್ದಾರೆ.

# 4 ಮಸೂದೆಗೆ ರಾಜ್ಯಪಾಲರ ಅಂಕಿತ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಶಾಸಕರು, ಸಚಿವರ ವೇತನ ಹಾಗೂ ಭತ್ಯೆ ಹೆಚ್ಚಿಸುವ ಮಸೂದೆಗಳೂ ಸೇರಿ ಒಟ್ಟು ನಾಲ್ಕು ಮಸೂದೆಗಳಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಂಕಿತ ಹಾಕಿದ್ದಾರೆ.

‘ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ (ತಿದ್ದುಪಡಿ) ಮಸೂದೆ–2025’, ‘ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆ (ತಿದ್ದುಪಡಿ) ಮಸೂದೆ–2025’, ‘ಕರ್ನಾಟಕ ವಿಧಾನಮಂಡಳದ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ಮಸೂದೆ–2025’ ಮತ್ತು ‘ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧಾರಣೆ (ತಿದ್ದುಪಡಿ) ಮಸೂದೆ–2025’ಕ್ಕೆ ರಾಜ್ಯಪಾಲ ಸಹಿ ಮಾಡಿದ್ದಾರೆ. ಸರ್ಕಾರವು ಇವುಗಳನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಿದ್ದು, ಕಾಯ್ದೆಯಾಗಿ ಜಾರಿಯಾಗಿವೆ.

**ಕುಲಪತಿ ನೇಮಕ ಮಾಡಿ:** ‘ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯಕ್ಕೆ ಕುಲಪತಿ ನೇಮಕದಲ್ಲಿ ವಿಳಂಬ ಸಲ್ಲ. ಇನ್ನೊಂದು ತಿಂಗಳಲ್ಲಿ ಕುಲಪತಿ ನೇಮಕ ಮಾಡಿ’ ಎಂದು ರಾಜ್ಯಪಾಲರು ರಾಜ್ಯ ಸರ್ಕಾರಕ್ಕೆ ಸೂಚಿಸಿದ್ದಾರೆ.

# ‘ಹೈಕೋರ್ಟ್ ನ್ಯಾಯಮೂರ್ತಿಗಳೂ ಆಸ್ತಿ ಘೋಷಿಸಲಿ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳು ತಮ್ಮ ಆಸ್ತಿ ವಿವರಗಳನ್ನು ಘೋಷಿಸಲು ಕೈಗೊಂಡಿರುವ ನಿರ್ಧಾರದ ಹಾದಿಯಲ್ಲೇ ಹೈಕೋರ್ಟ್ ನ್ಯಾಯಮೂರ್ತಿಗಳೂ ತಮ್ಮ ಆಸ್ತಿ ವಿವರ ಘೋಷಿಸಬೇಕು’ ಎಂದು ‘ಬೆಂಗಳೂರು ವಕೀಲರ ಸಂಘ’ (ಎಎಬಿ) ಆಗ್ರಹಿಸಿದೆ.

ಈ ಕುರಿತಂತೆ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಪ್ರಧಾನ ಕಾರ್ಯದರ್ಶಿ ಎಚ್.ವಿ. ಪ್ರವೀಣ್ ಗೌಡ ಮತ್ತು ಖಜಾಂಚಿ ಶ್ವೇತಾ ರವಿಶಂಕರ್ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಅವರಿಗೆ ಶುಕ್ರವಾರ ಎರಡು ಪುಟಗಳ ಪತ್ರ ಬರೆದಿದ್ದಾರೆ.

‘ಕೂಡಲೇ ಹೈಕೋರ್ಟ್‌ನ ಎಲ್ಲಾ ನ್ಯಾಯಮೂರ್ತಿಗಳ ಪೂರ್ಣಪೀಠದ ಸಭೆ ಕರೆದು ಎಲ್ಲರೂ ತಮ್ಮ ಆಸ್ತಿ ವಿವರಗಳನ್ನು ಸಾರ್ವಜನಿಕ ಅವಗಾಹನೆಗೆ ತರಬೇಕು’ ಎಂದು ಒತ್ತಾಯಿಸಿದ್ದಾರೆ.

# ಧರ್ಮಸ್ಥಳ ರ‍್ಯಾಲಿಗೆ ಹೈಕೋರ್ಟ್ ಮಧ್ಯಂತರ ತಡೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಸೌಜನ್ಯ ಸಾವಿಗೆ ನ್ಯಾಯ ದೊರಕಿಸುವ ನೆಪದಲ್ಲಿ ಇದೇ 6ರಂದು ಧರ್ಮಸ್ಥಳಕ್ಕೆ ನುಗ್ಗುವ ಮತ್ತು ದಾಂದಲೆ ಎಬ್ಬಿಸುವ ದುರುದ್ದೇಶದಿಂದ ಹಮ್ಮಿಕೊಂಡಿರುವ ಬೆಳ್ತಂಗಡಿಯಿಂದ ಶ್ರೀ ಕ್ಷೇತ್ರ ಧರ್ಮಸ್ಥಳದವರೆಗಿನ ಪ್ರತಿಭಟನಾ ರ‍್ಯಾಲಿಯನ್ನು ತಡೆಯಬೇಕು’ ಎಂಬ ಮನವಿಯನ್ನು ಮಾನ್ಯ ಮಾಡಿರುವ ಹೈಕೋರ್ಟ್ ಉದ್ದೇಶಿತ ರ‍್ಯಾಲಿಗೆ ಮಧ್ಯಂತರ ತಡೆ ನೀಡಿದೆ.

ಪ್ರತಿಭಟನೆ ನಿರ್ಬಂಧಿಸುವಂತೆ ಕೋರಿ, ‘ಧರ್ಮಸ್ಥಳ ಗ್ರಾಮ ಹಿತರಕ್ಷಣಾ ವೇದಿಕೆ’ಯ ಕಾರ್ಯದರ್ಶಿ ಧನಕೀರ್ತಿ ಅರಿಗ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಉದಯ ಹೊಳ್ಳ ಅವರ ವಾದ ಆಲಿಸಿದ ನ್ಯಾಯಪೀಠ, ‘ಅಪರಾಧ ಮನೋಭಾವದ ವ್ಯಕ್ತಿಗಳು ಶ್ರೀಕ್ಷೇತ್ರ ಧರ್ಮಸ್ಥಳದ ವಿಚಾರಗಳಿಗೆ ಸಂಬಂಧಿಸಿದ ಪ್ರತಿಭಟನೆಗಳ ಕುರಿತಂತೆ ಇದೇ ಹೈಕೋರ್ಟ್‌ನ ಸಮನ್ವಯ ನ್ಯಾಯಪೀಠ ನೀಡಿರುವ ಆದೇಶವನ್ನು ಉಲ್ಲಂಘಿಸುವ ಇರಾದೆ ಹೊಂದಿರುವುದು ಅರ್ಜಿಯ ಜೊತೆಗೆ ಲಗತ್ತಿಸಲಾಗಿರುವ ವಾಟ್ಸ್ ಆ್ಯಪ್ ಸಂದೇಶಗಳನ್ನು ಗಮನಿಸಿದರೆ ನಿಸ್ಸಂಶಯವಾಗಿಯೂ ವೇದ್ಯವಾಗುವ ಅಂಶ’ ಎಂದು ಸ್ಪಷ್ಟಪಡಿಸಿದೆ.

‘ಪ್ರತಿವಾದಿ ಕುಸುಮಾವತಿ ಮತ್ತು ನೇಟಿವ್ ಎಂಪವರ್‌ಮೆಂಟ್ ಆ್ಯಂಡ್ ಎಕ್ವಿಪ್ಪಿಂಗ್ ಟೀಮ್ ಫಾರ್ ಹೋಪ್ ಆ್ಯಂಡ್ ಇಂಟರಾಕ್ಷನ್ (ನೀತಿ) ಟ್ರಸ್ಟ್‌ನ ಏಜೆಂಟರು, ಅನುಯಾಯಿಗಳು, ಸೇವಕರು ಅಥವಾ ಸಂಬಂಧಿಸಿದ ವ್ಯಕ್ತಿಗಳು ಪ್ರತಿಭಟನೆಯ ಹೆಸರಿನಲ್ಲಿ ಧರ್ಮಸ್ಥಳಕ್ಕೆ ನುಗ್ಗುವ ಮತ್ತು ಅಲ್ಲಿನ ಶಾಂತಿ ಕದಡುವ ಉದ್ದೇಶದಲ್ಲಿರುವುದು ಸ್ಪಷ್ಟವಾಗುತ್ತದೆ. ಆದ್ದರಿಂದ, ರ‍್ಯಾಲಿಗೆ ಮಧ್ಯಂತರ ತಡೆ ನೀಡಲಾಗುತ್ತಿದೆ’ ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

# ಕಾಫಿ, ಚಹಾದ ಜತೆಗೆ ತಿಂಡಿ ದರ ಏರಿಕೆ

**ಒಂದನೇ ಪುಟದಿಂದ...**

‘ಕಾಫಿ ಪುಡಿ ದರವು ದುಪ್ಪಟ್ಟಾದ ಪರಿಣಾಮ ಕಾಫಿ ಬೆಲೆ ಏರಿಕೆ ಬಗ್ಗೆ ಫೆಬ್ರುವರಿಯಲ್ಲಿ ನಿರ್ಧಾರ ಕೈಗೊಳ್ಳಲಾಗಿತ್ತು. ಈಗ ಹಾಲಿನ ದರವೂ ಏರಿಕೆಯಾಗಿ ರುವುದರಿಂದ ಚಹಾದ ದರವನ್ನೂ ಹೋಟೆಲ್‌ಗಳಲ್ಲಿ ₹2ರಿಂದ ₹3ರ ವರೆಗೆ ಹೆಚ್ಚಿಸಲಾಗಿದೆ’ ಎಂದು ಬೃಹತ್ ಬೆಂಗಳೂರು ಹೋಟೆಲುಗಳ ಸಂಘದ ಗೌರವಾಧ್ಯಕ್ಷ ಪಿ.ಸಿ.ರಾವ್ ತಿಳಿಸಿದರು.

‘ಹಾಲಿನ ಜತೆಗೆ ಅದರ ಉಪ ಉತ್ಪನ್ನಗಳು ಹಾಗೂ ಅಗತ್ಯ ವಸ್ತುಗಳ ದರ ಹೆಚ್ಚಾಗಿದೆ. ಆದ್ದರಿಂದ ತಿಂಡಿಗಳ ದರ ಏರಿಕೆ ಅನಿವಾರ್ಯ. ಆದರೆ, ಅದರಿಂದ ಗ್ರಾಹಕರಿಗೆ ಹೊರೆಯಾಗಬಾರದು ಎಂದು ಸೂಚಿಸಲಾಗಿದೆ. ಹೋಟೆಲ್‌ಗಳ ಮಾಲೀಕರು ವೆಚ್ಚವನ್ನು ಆಧರಿಸಿ ದರ ಹೆಚ್ಚಳ ಮಾಡುತ್ತಾರೆ’ ಎಂದು ಸಂಘದ ಗೌರವ ಕಾರ್ಯದರ್ಶಿ ವೀರೇಂದ್ರ ಎನ್. ಕಾಮತ್ ಹೇಳಿದರು.

## ನಿಧನ ವಾರ್ತೆ

# ಕಮಲಾ ಲಕ್ಕಪ್ಪಗೌಡ



**ಮೈಸೂರು:** ಇಲ್ಲಿನ ಕುವೆಂಪುನಗರದ ನಿವಾಸಿ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ದಿವಂಗತ ಪ್ರೊ.ಎಚ್.ಜೆ. ಲಕ್ಕಪ್ಪಗೌಡ ಅವರ ಪತ್ನಿ ಕಮಲಾ ಲಕ್ಕಪ್ಪಗೌಡ (78) ಅನಾರೋಗ್ಯದಿಂದ ಶುಕ್ರವಾರ ನಿಧನರಾದರು.

ಅವರಿಗೆ ಪುತ್ರ, ಬೆಂಗಳೂರಿನ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನ ವಿ.ವಿ ಕುಲಸಚಿವ ಡಾ.ಎಚ್.ಎಲ್.ರವೀಂದ್ರ ಪ್ರಸಾದ್, ಪುತ್ರಿ ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಧ್ಯಾಪಕಿ ಎಚ್.ಎಲ್. ಕಲಾಭಾರತಿ, ಅಳಿಯ ಮೈಸೂರಿನ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಪ್ರಾಧ್ಯಾಪಕ ಡಾ.ಬಿ.ದಿನೇಶ್ ಇದ್ದಾರೆ.

ಕುವೆಂಪುನಗರದ ಕಾವೇರಿ ಶಾಲೆ ಹಿಂಭಾಗದ ರುದ್ರಭೂಮಿಯಲ್ಲಿ ಏಪ್ರಿಲ್ 5ರಂದು ಅಂತ್ಯಕ್ರಿಯೆ ನಡೆಯಲಿದೆ.



## ಸುಭಾಷಿತ

ಪ್ರಯತ್ನಗಳಲ್ಲಿ ಸೋಲಾದರೆ ಪರವಾಗಿಲ್ಲ. ಆದರೆ, ಪ್ರಯತ್ನಗಳನ್ನೇ ಮಾಡದಿರುವುದು ಜೀವನದಲ್ಲಿನ ದೊಡ್ಡ ಸೋಲು.

-ಸ್ವಾಮಿ ವಿವೇಕಾನಂದ

# ವಕ್ಫ್ ಮಸೂದೆ: ಸಲಹೆ, ಸೂಚನೆ ಗಣನೆಗೆ ತೆಗೆದುಕೊಳ್ಳದಿರುವುದು ಸರಿಯಲ್ಲ

**ಎರಡು** ದಿನಗಳ ಚರ್ಚೆಯ ಬಳಿಕ ವಕ್ಫ್ ತಿದ್ದುಪಡಿ ಮಸೂದೆಯನ್ನು ಸಂಸತ್ತು ಅಂಗೀಕರಿಸಿದೆ. ಸಾಮಾನ್ಯವಾಗಿ ಅಧಿವೇಶನವು ಗದ್ದಲ, ಕೋಲಾಹಲದಲ್ಲಿಯೇ ಮುಗಿದುಹೋಗುತ್ತದೆ. ಆದರೆ, ಈ ಬಾರಿ ಅವು ಯಾವುವೂ ಇಲ್ಲದೆ ಚರ್ಚೆ ನಡೆದಿದೆ. ವಾಕ್ಸಮರ, ಆರೋಪ-ಪ್ರತ್ಯಾರೋಪಗಳು ಇದ್ದವು. ಆದರೆ, ಮಾಹಿತಿಪೂರ್ಣ ಚರ್ಚೆಯು ಸಂಸದೀಯ ಸಂವಾದದ ಮಾನದಂಡಕ್ಕೆ ಅನುಗುಣವಾಗಿಯೇ ನಡೆದಿದೆ. ಈ ಮಸೂದೆಗೆ ರಾಷ್ಟ್ರಪತಿಯವರು ಸಹಿ ಮಾಡಿ ಕಾಯ್ದೆಯಾದ ಬಳಿಕವೂ ಈ ಕುರಿತು ಚರ್ಚೆ ಮುಂದುವರಿಯಲಿದೆ. ಮಸೂದೆ ಮಂಡಿಸಿದ ಸರ್ಕಾರವು ಈಗ ಇರುವ ವಕ್ಫ್ ಕಾಯ್ದೆಯ ಸುಧಾರಣೆಗೆ ಇಂತಹ ಮಸೂದೆ ಅತ್ಯಗತ್ಯ ಎಂದು ಪ್ರತಿಪಾದಿಸಿದೆ. ಪಾರದರ್ಶಕತೆ, ವಕ್ಫ್ ಆಸ್ತಿಗಳ ಉತ್ತಮ ನಿರ್ವಹಣೆಗೆ ಕಾಯ್ದೆ ಬೇಕಾಗಿದೆ ಎಂದು ಹೇಳಿದೆ. ಆದರೆ, ವಿರೋಧ ಪಕ್ಷಗಳೆಲ್ಲವೂ ಮಸೂದೆಯನ್ನು ಒಮ್ಮತದಿಂದ ವಿರೋಧಿಸಿವೆ. ಇದು, ಅಲ್ಪಸಂಖ್ಯಾತರ ಹಕ್ಕುಗಳ ಉಲ್ಲಂಘನೆ ಮತ್ತು ಧಾರ್ಮಿಕ ಸ್ವಾತಂತ್ರ್ಯದ ದಮನ ಎಂದು ವಾದಿಸಿವೆ. 1995ರ ವಕ್ಫ್ ಕಾಯ್ದೆಗೆ ತಿದ್ದುಪಡಿ ತರುವುದು ಈ ಮಸೂದೆಯ ಉದ್ದೇಶ. ವಕ್ಫ್ ಮಂಡಳಿಯಲ್ಲಿ ಸದಸ್ಯರು ಯಾರಾಗಿರಬೇಕು, ವಕ್ಫ್ ಆಸ್ತಿ ಎಂದು ಬದಲಾವಣೆಗೆ ಇರುವ ಮಾನದಂಡ ಮತ್ತು ವಕ್ಫ್ ಆಸ್ತಿ ಎಂದು ಘೋಷಿಸುವ ಮಂಡಳಿಯ ಅಧಿಕಾರಕ್ಕೆ ಸಂಬಂಧಿಸಿದ ವಿಚಾರಗಳು ಮುಖ್ಯ ತಿದ್ದುಪಡಿಗಳಾಗಿವೆ.




ಈ ತಿದ್ದುಪಡಿ ಮಸೂದೆಯ ಸಾಂವಿಧಾನಿಕ ಸಿಂಧುತ್ವವು ನ್ಯಾಯಾಲಯದಲ್ಲಿ ಪರಿಶೀಲನೆಗೆ ಒಳಪಡುವ ಸಾಧ್ಯತೆ ಇದೆ

ಮಸೂದೆಯಲ್ಲಿ ಇರುವ ಕೆಲವು ಅಂಶಗಳು ವಿವಾದಾತ್ಮಕವಾಗಿವೆ. ವಕ್ಫ್‌ನ ಹಲವು ಆಸ್ತಿಗಳು ಒತ್ತುವರಿಯಾಗಿವೆ, ಹಲವು ಆಸ್ತಿಗಳು ವ್ಯಾಜ್ಯದಲ್ಲಿವೆ. ಹೀಗಾಗಿ, ವಕ್ಫ್ ವ್ಯವಸ್ಥೆಯ ಸುಧಾರಣೆಯ ಅಗತ್ಯ ಇದೆ. ಹಲವು ಆಸ್ತಿಗಳ ಸ್ಥಿತಿಯ ಕುರಿತು ಗೊಂದಲ ಇದೆ. ಒಂಬತ್ತು ಲಕ್ಷ ಎಕರೆಗೂ ಹೆಚ್ಚಿನ ಆಸ್ತಿ ಇದ್ದು ಅವುಗಳ ಉತ್ತಮ ನಿರ್ವಹಣೆ ಅಗತ್ಯವಾಗಿದೆ. ಆದರೆ, ಸುಧಾರಣೆ ಅಂದರೆ ನಿಯಂತ್ರಣಕ್ಕೆ ತೆಗೆದುಕೊಳ್ಳುವುದು ಎಂದಲ್ಲ. ಮುಸ್ಲಿಂ ಸಮುದಾಯದಲ್ಲಿ ಶಂಕೆ ಇದೆ ಮತ್ತು ವಕ್ಫ್ ಆಸ್ತಿಗಳನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳುವುದೇ ಮಸೂದೆಯ ಉದ್ದೇಶ ಎಂದು ವಿರೋಧ ಪಕ್ಷಗಳು ಆರೋಪ ಮಾಡಿವೆ. ಇಸ್ಲಾಂ ಧರ್ಮವನ್ನು ಕನಿಷ್ಠ ಐದು ವರ್ಷ ಅನುಸರಿಸಿದ ವ್ಯಕ್ತಿ ಮಾತ್ರ ವಕ್ಫ್‌ಗೆ ದಾನ ನೀಡಬಹುದು ಮತ್ತು ವಕ್ಫ್ ಮಂಡಳಿಯಲ್ಲಿ ಮುಸ್ಲಿಮೇತರರ ಸೇರ್ಪಡೆ ಅವಕಾಶದ ಕುರಿತು ಗಂಭೀರ ಕಳವಳ ವ್ಯಕ್ತವಾಗಿದೆ. ವಕ್ಫ್‌ಗೆ ಮುಸ್ಲಿಮೇತರರೂ ಹಿಂದೆ ದಾನ ಮಾಡಿದ್ದಾರೆ. ವ್ಯಕ್ತಿಯೊಬ್ಬರು ಇಸ್ಲಾಂ ಧರ್ಮವನ್ನು ಅನುಸರಿಸುತ್ತಿದ್ದಾರೆ ಎಂಬ ಪ್ರಮಾಣಪತ್ರ ನೀಡುವುದಕ್ಕೆ ಹೇಗೆ ಸಾಧ್ಯ? ಅಂತಹ ಪ್ರಮಾಣಪತ್ರ ನೀಡುವ ಪ್ರಾಧಿಕಾರ ಯಾವುದು? ಇತರ ಸಮುದಾಯಗಳಿಗೆ ಸೇರಿದ ಸಂಸ್ಥೆಗಳ ಸದಸ್ಯತ್ವವನ್ನು ಆ ಸಮುದಾಯಗಳಿಗೇ ಮೀಸಲಿಡಲಾಗಿದೆ. ವಕ್ಫ್ ಆಸ್ತಿಯ ಮೇಲೆ ಸರ್ಕಾರವು ನಿಯಂತ್ರಣ ಹೇರುವುದಕ್ಕೆ ಮಸೂದೆಯಲ್ಲಿ ಇರುವ ಕೆಲವು ಅಂಶಗಳು ಅವಕಾಶ ಕೊಡುತ್ತವೆ. ಮಸೂದೆಯು ಈಗಿನ ಸ್ವರೂಪದಲ್ಲಿ ಧಾರ್ಮಿಕ ಸ್ವಾತಂತ್ರ್ಯವನ್ನು ಉಲ್ಲಂಘಿಸುತ್ತದೆ. ಏಕೆಂದರೆ, ವಕ್ಫ್ ವ್ಯವಸ್ಥೆಯು ಧಾರ್ಮಿಕ ನಂಬಿಕೆ ಮತ್ತು ಅಲ್ಪಸಂಖ್ಯಾತ ಸಮುದಾಯದ ಆಚರಣೆಗಳಿಗೆ ಸಂಬಂಧಿಸಿದ್ದಾಗಿದೆ.

ಈ ಮಸೂದೆ ಮತ್ತು ಅದರಲ್ಲಿ ಪ್ರಸ್ತಾಪಿಸಿರುವ ತಿದ್ದುಪಡಿಗಳು ಮುಸ್ಲಿಂ ಸಮುದಾಯದ ಹಿತಾಸಕ್ತಿಯನ್ನು ಕಾಪಾಡುವ ಉದ್ದೇಶ ಹೊಂದಿವೆ ಎಂದು ಸರ್ಕಾರ ಹೇಳಿದೆ. ಆದರೆ, ಮಸೂದೆ ರೂಪಿಸುವಾಗ ಸಮುದಾಯದ ಜೊತೆಗೆ ಸಮಾಲೋಚನೆ ನಡೆಸಿಲ್ಲ. ಜಂಟಿ ಸಂಸದೀಯ ಸಮಿತಿಯು ನಡೆಸಿದ ಸಮಾಲೋಚನೆ ಮತ್ತು ಪರಿಶೀಲನೆ ಕೂಡ ವಿವಾದಕ್ಕೆ ಒಳಗಾಗಿತ್ತು. ವಿರೋಧ ಪಕ್ಷಗಳ ಸದಸ್ಯರು ನೀಡಿದ ಯಾವುದೇ ಶಿಫಾರಸು ಸೇರ್ಪಡೆ ಆಗಿಲ್ಲ. ಅಲ್ಪಸಂಖ್ಯಾತ ಸಮುದಾಯವನ್ನು ಪ್ರತಿನಿಧಿಸುವ ಸಂಘಟನೆಗಳು ಮತ್ತು ಪಕ್ಷಗಳು ಮಸೂದೆಯಲ್ಲಿ ಇರುವ ಹಲವು ಅಂಶಗಳನ್ನು ವಿರೋಧಿಸಿವೆ. ಅಲ್ಪಸಂಖ್ಯಾತ ಸಮುದಾಯಕ್ಕೆ ಕಿರುಕುಳ ನೀಡಿ ದುರ್ಬಲಗೊಳಿಸುವ ರಾಜಕೀಯ ಕ್ರಮ ಎಂಬ ಟೀಕೆಯೂ ಇದೆ. ಮಸೂದೆಯ ಸಾಂವಿಧಾನಿಕ ಸಿಂಧುತ್ವವು ನ್ಯಾಯಾಲಯದಲ್ಲಿ ಪರಿಶೀಲನೆಗೆ ಒಳಪಡುವ ಸಾಧ್ಯತೆ ಇದೆ.

ಸುಂಕದಿಂದ ಸಂಕಷ್ಟ ನಿವಾರಣೆ ಆಗುತ್ತದೆ ಎಂಬ ನಿರೀಕ್ಷೆ ಫಲ ಕೊಡದಿರಬಹುದು

# ಸುಂಕದ ಉರುಳು ಯಾರ ಕೊರಳು?



ವಿಶ್ಲೇಷಣೆ

ಟಿ.ಎಸ್. ವೇಣುಗೋಪಾಲ್

**‘ಏಪ್ರಿಲ್** ಎರಡನೇ ತಾರೀಕನ್ನು ಇನ್ನು ಮುಂದೆ ಅಮೆರಿಕದ ವಿಮೋಚನಾ ದಿನವನ್ನಾಗಿ, ಅಮೆರಿಕ ಕೈಗಾರಿಕೆಯ ಮರುಹುಟ್ಟಿನ ದಿನವನ್ನಾಗಿ ಸ್ಮರಿಸಲಾಗುತ್ತದೆ. ಅಮೆರಿಕ ಮತ್ತೆ ಶ್ರೀಮಂತವಾಗುತ್ತದೆ. ದಶಕಗಳಿಂದ ಮಿತ್ರರು, ಶತ್ರುಗಳು ನಮ್ಮ ದೇಶವನ್ನು ಲೂಟಿ ಮಾಡಿದ್ದಾರೆ. ಮುಂದೆ ಹೀಗಾಗುವುದಕ್ಕೆ ಬಿಡುವುದಿಲ್ಲ. ಸುಂಕ ಹಾಕಿ ನಮ್ಮನ್ನು ದೋಚಿದವರ ಮೇಲೆ ನಾವು ಪ್ರತಿಸುಂಕ ಹಾಕುತ್ತೇವೆ. ಇದು ಅಮೆರಿಕದ ಇತಿಹಾಸದಲ್ಲಿ ಮಹತ್ವದ ದಿನ. ಅಮೆರಿಕದ ಆರ್ಥಿಕ ಬಿಡುಗಡೆಯ ದಿನ’ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ.

ಟ್ರಂಪ್ ದೃಷ್ಟಿಯಲ್ಲಿ ಅಮೆರಿಕದ ಸಂಕಷ್ಟಕ್ಕೆ ಕಾರಣ ಸರಳ. ಅಮೆರಿಕ ಬೇರೆ ದೇಶಗಳ ಮೇಲೆ ಹಾಕುವುದಕ್ಕಿಂತ ಹಲವು ಪಟ್ಟು ಸುಂಕವನ್ನು ಉಳಿದವರು ಅಮೆರಿಕದ ಸರಕುಗಳ ಮೇಲೆ ಹಾಕುತ್ತಿದ್ದಾರೆ. ಮೋಟರ್‌ಸೈಕಲ್ ಮೇಲೆ ಅಮೆರಿಕ ಹಾಕುತ್ತಿರುವ ಸುಂಕ ಕೇವಲ ಶೇ 2.4ರಷ್ಟು. ಆದರೆ ಭಾರತ ಶೇ 70ರಷ್ಟು ಸುಂಕ ಹಾಕುತ್ತಿದೆ. ಕೆನಡಾ ದೇಶವು ಅಮೆರಿಕದ ಹಾಲಿನ ಉತ್ಪನ್ನಗಳ ಮೇಲೆ ಶೇ 200ರಷ್ಟು ಸುಂಕ ವಿಧಿಸುತ್ತಿದೆ. ಅಮೆರಿಕದ ಅಕ್ಕಿಯ ಮೇಲೆ ಶೇ 700ರಷ್ಟು ಸುಂಕವನ್ನು ಚೀನಾ ವಿಧಿಸುತ್ತಿದೆ. ಅಷ್ಟೇ ಅಲ್ಲ, ತಮ್ಮ ಹಣದ ಮೌಲ್ಯವನ್ನು ಕುಗ್ಗಿಸಿ ಅಮೆರಿಕದ ಸರಕುಗಳು ದುಬಾರಿಯಾಗುವಂತೆ ನೋಡಿಕೊಳ್ಳುತ್ತಿದ್ದಾರೆ. ಅಮೆರಿಕದ ವಸ್ತುಗಳು ತಮ್ಮ ದೇಶ ಪ್ರವೇಶಿಸುವುದನ್ನು ಅಕ್ರಮ ವಿಧಾನಗಳಿಂದ ಹಲವು ದೇಶಗಳು ತಡೆಯುತ್ತಿವೆ. ಆದರೆ ಇಂದು ಕಾರು, ಹಡಗು, ಚಿಪ್ಸ್, ಔಷಧಿ ಎಲ್ಲವನ್ನೂ ಬೇರೆ ದೇಶಗಳಿಂದ ಕೊಳ್ಳುವ ಸ್ಥಿತಿಗೆ ಅಮೆರಿಕ ಬಂದಿದೆ. ಅಮೆರಿಕದ ವ್ಯಾಪಾರದ ಕೊರತೆಯು 1.2 ಲಕ್ಷ ಕೋಟಿ ಡಾಲರ್ ಆಗಿದೆ. ಇದು ಅಮೆರಿಕಕ್ಕೆ ಆಗುತ್ತಿರುವ ಅನ್ಯಾಯಕ್ಕೆ ದೊಡ್ಡ ಪುರಾವೆ ಎನ್ನುತ್ತಾರೆ ಟ್ರಂಪ್.

ಅದಕ್ಕೆ ಪರಿಹಾರವು ಪ್ರತಿಸುಂಕ ಎನ್ನುವುದರ ಬಗ್ಗೆ ಟ್ರಂಪ್‌ಗೆ ಯಾವುದೇ ಅನುಮಾನ ಇಲ್ಲ. ವ್ಯಾಪಾರದ ಕೊರತೆ, ರಾಷ್ಟ್ರದ ಸುರಕ್ಷತೆ, ಅಕ್ರಮ ವಲಸೆ, ನಿರುದ್ಯೋಗ... ಹೀಗೆ ಅಮೆರಿಕದ ಸಮಸ್ಯೆಗಳಿಗೆಲ್ಲ ಸುಂಕವೇ ದಿವ್ಯ ಔಷಧ. ಅಮೆರಿಕವನ್ನು ದೋಚುವುದರಲ್ಲಿ ಎಲ್ಲ ದೇಶಗಳು ಭಾಗಿಯಾಗಿವೆ ಎಂದು ಅವರು ಬಲವಾಗಿ ನಂಬಿರುವುದರಿಂದ ಎಲ್ಲ ದೇಶಗಳ ಮೇಲೆ ಶೇ 10ರಷ್ಟು ಮೂಲ ಸುಂಕವನ್ನು ಘೋಷಿಸಲಾಗಿದೆ. ಅಮೆರಿಕಕ್ಕೆ ವಿಶೇಷವಾಗಿ ಅನ್ಯಾಯ ಮಾಡಿವೆ ಎಂದು ಭಾವಿಸಲಾಗಿರುವ ಹಲವು ದೇಶಗಳ ಮೇಲೆ ಪ್ರತ್ಯೇಕವಾಗಿ ಸುಂಕ ಹಾಕಿದ್ದಾರೆ. ಭಾರತದ ಮೇಲೆ ಶೇ 26ರಷ್ಟು, ಚೀನಾದ ಮೇಲೆ ಈಗಾಗಲೇ ಇರುವ ಶೇ 20ರಷ್ಟು ಸುಂಕದ ಜೊತೆಗೆ ಹೆಚ್ಚುವರಿಯಾಗಿ ಶೇ 34ರಷ್ಟು... ಹೀಗೆ ಹಲವು ದೇಶಗಳ ಮೇಲೆ ಸುಂಕ ಹಾಕಿದ್ದಾರೆ.

ಸುಂಕ ಕೂಡ ಒಂದು ಬಗೆಯ ತೆರಿಗೆ. ಸ್ಥಳೀಯ ಉದ್ದಿಮೆಗಳಿಗೆ ರಕ್ಷಣೆ ನೀಡಲು ಬೇರೆ ದೇಶಗಳ ಉತ್ಪನ್ನಗಳ ಮೇಲೆ ಹಾಕಲಾಗುತ್ತದೆ. ಯುರೋಪಿನ ಕಾರಿನ ಮೇಲೆ ಸುಂಕ ಹಾಕಿದರೆ ಯುರೋಪಿನ ಕಾರುಗಳ ಬೆಲೆ ಹೆಚ್ಚುತ್ತದೆ. ಅಮೆರಿಕದ ಕಾರುಗಳಿಗೆ ಬೇಡಿಕೆ ಹೆಚ್ಚುತ್ತದೆ. ಅಮೆರಿಕದಲ್ಲಿ ಉತ್ಪಾದನೆ ಹಾಗೂ ಉದ್ಯೋಗ ಅವಕಾಶಗಳು ಹೆಚ್ಚುತ್ತವೆ. ಆದರೆ ವಾಸ್ತವ ಅಷ್ಟು ಸರಳವಾಗಿಲ್ಲ. ಕಾರು ಅಮೆರಿಕದಲ್ಲಿ ತಯಾರಾದರೂ ಅದರ ಬಿಡಿಭಾಗಗಳು ಇನ್ನೆಲ್ಲೋ ತಯಾರಾಗುತ್ತವೆ, ಇನ್ಯಾವುದೋ ದೇಶದಲ್ಲಿ ಜೋಡಣೆಯಾಗುತ್ತವೆ. ಹಾಗಾಗಿ ಕಾರು ತಯಾರಿಕೆ ಪ್ರಕ್ರಿಯೆ ಪೂರ್ಣವಾಗುವುದರೊಳಗೆ ಅದು ಹಲವು ಗಡಿಗಳನ್ನು ದಾಟುತ್ತದೆ. ಪ್ರತಿಬಾರಿ ಗಡಿ ದಾಟುವಾಗಲೂ ಸುಂಕ ಕಟ್ಟಬೇಕಾದಲ್ಲಿ ಅಂತಿಮವಾಗಿ ಕಾರಿನ ಬೆಲೆ ಏರುತ್ತದೆ. ಕೊನೆಗೆ, ಸುಂಕದ ಬೆಲೆಯನ್ನು ತೆರುವವನು ಬಳಕೆದಾರನೇ ಆಗಿರುತ್ತಾನೆ. ಯಾವ ಉದ್ಯಮಿಯೂ ಅದರ ಹೊರೆ ಹೊರುವುದಿಲ್ಲ.

ಸುಂಕದಿಂದ ಒಟ್ಟಾರೆ ಬೇಡಿಕೆ ಹೆಚ್ಚುವುದಿಲ್ಲ. ಅಮೆರಿಕದಲ್ಲಿ ಬೇಡಿಕೆ ಹೆಚ್ಚಿದರೆ ಇನ್ಯಾವುದೋ ದೇಶದಲ್ಲಿ ಕಡಿಮೆ ಆಗುತ್ತದೆ. ಒಂದು ದೇಶದ ಸಮಸ್ಯೆ ಇನ್ನೊಂದು ದೇಶಕ್ಕೆ ವರ್ಗಾವಣೆ ಆಗುತ್ತದೆ. ಸಂಕಟಕ್ಕೆ ಸಿಕ್ಕ ದೇಶಗಳು ತಮ್ಮ ಆರ್ಥಿಕತೆಯನ್ನು ರಕ್ಷಿಸಿಕೊಳ್ಳಲೇಬೇಕು. ಅವರೂ ಪ್ರತಿಸುಂಕ ಹಾಕುತ್ತಾರೆ. ಅಮೆರಿಕದ ರಫ್ತಿಗೆ ಹೊಡೆತ ಬೀಳುತ್ತದೆ, ಅಮೆರಿಕದ ಸರಕುಗಳಿಗೆ ಬೇಡಿಕೆ ಕಡಿಮೆಯಾಗುತ್ತದೆ. ಸುಂಕದ ಉದ್ದೇಶ ವಿಫಲವಾಗುತ್ತದೆ.

ಅಮೆರಿಕವು 1975ರಿಂದಲೇ ವ್ಯಾಪಾರದ ಕೊರತೆಯನ್ನು ಅನುಭವಿಸುತ್ತಿದೆ. ಆದರೆ ಸೇವಾಕ್ಷೇತ್ರದಲ್ಲಿ ಅಮೆರಿಕ ರಫ್ತಿಗಿಂತ ಹೆಚ್ಚು ಆಮದು ಮಾಡುತ್ತಿದೆ. ಟ್ರಂಪ್ ಹೇಳುವಂತೆ ವ್ಯಾಪಾರದ ಕೊರತೆಯು ಅನ್ಯಾಯದ ಸೂಚಿಯಾದರೆ ಸೇವಾಕ್ಷೇತ್ರದಲ್ಲಿ ಅನ್ಯಾಯವಾಗುತ್ತಿರುವುದು ಹಿಂದುಳಿದ ದೇಶಗಳಿಗೆ. ಅನ್ಯಾಯ ಮಾಡುತ್ತಿರುವುದು ಅಮೆರಿಕ. ಸೇವಾಕ್ಷೇತ್ರ ವಿಪರೀತ ಲಾಭದಾಯಕ ಕ್ಷೇತ್ರವಾಗಿತ್ತು. ಹಾಗಾಗಿ ಅಮೆರಿಕದಂತಹ ದೇಶಗಳು ಅಲ್ಲಿಗೆ ಕಾಲಿಟ್ಟವು. ಅಗ್ಗದ ಕೂಲಿಗೆ ಕೆಲಸಗಾರರು ಸಿಗುವ ದೇಶಗಳಿಗೆ ಕಾರ್ಖಾನೆಗಳನ್ನು ಸ್ಥಳಾಂತರಿಸಿದವು. ಇಂದು ಅಮೆರಿಕದ ಬಹುಪಾಲು ಉದ್ಯೋಗ, ಲಾಭ, ರಫ್ತು ಎಲ್ಲವೂ ಸೃಷ್ಟಿಯಾಗುತ್ತಿರುವುದು ಅಲ್ಲಿಯೇ.

ಸೇವಾಕ್ಷೇತ್ರದಲ್ಲಿ ಬೌದ್ಧಿಕ ಆಸ್ತಿಗೆ ಸಂಬಂಧಿಸಿದ ಬಹುರಾಷ್ಟ್ರೀಯ ಒಪ್ಪಂದಗಳಲ್ಲಿ ಅನ್ಯಾಯ ಆಗಿರುವುದು ಹಿಂದುಳಿದ ದೇಶಗಳಿಗೆ. ವಿದೇಶಿ ಸ್ಪರ್ಧೆಯಿಂದ ಹಿಂದುಳಿದ ರಾಷ್ಟ್ರಗಳ ತಂತ್ರಜ್ಞಾನ, ಔಷಧಿ ಹಾಗೂ ಮನರಂಜನಾ ಕ್ಷೇತ್ರಗಳು ಬಡವಾಗುತ್ತಿವೆ. ಆದರೂ ಅವು ‘ಟ್ರಿಪ್ಸ್’ನ ಉರುಗ್ವೆ ಸುತ್ತಿನ ಒಪ್ಪಂದಕ್ಕೆ ಬದ್ಧವಾಗಿ ಶ್ರೀಮಂತ ರಾಷ್ಟ್ರಗಳ ಬೌದ್ಧಿಕ ಆಸ್ತಿಗೆ ರಕ್ಷಣೆ ಕೊಡುತ್ತಿವೆ. ಆದರೆ ಅದೇ ಒಪ್ಪಂದದಲ್ಲಿ ಆ ದೇಶಗಳ ಸರಕುಗಳಿಗೆ ತಮ್ಮ ಮಾರುಕಟ್ಟೆಯನ್ನು ಮುಕ್ತವಾಗಿ ತೆರೆಯುತ್ತೇವೆ ಎಂದು ಒಪ್ಪಿಕೊಂಡಿರುವುದನ್ನು ಅಮೆರಿಕ ಮರೆತಿದೆ. ಹಿಂದುಳಿದ ದೇಶಗಳು ಅಮೆರಿಕದ ಬೌದ್ಧಿಕ ಸ್ವತ್ತಿಗೆ ರಕ್ಷಣೆ ಕೊಡುವುದನ್ನು ನಿಲ್ಲಿಸಿದರೆ, ಟ್ರಿಪ್ಸ್ ಒಪ್ಪಂದದಿಂದ ಹೊರಬಂದರೆ ಏನಾಗಬಹುದು ಅನ್ನುವುದನ್ನು ಟ್ರಂಪ್ ಯೋಚಿಸಬೇಕು.


ವ್ಯಾಪಾರದ ಕೊರತೆಗೆ ನಿಜವಾದ ಕಾರಣ ದೇಶದ ಉಳಿತಾಯ ಹಾಗೂ ಹೂಡಿಕೆಯ ನಡುವಿನ ಅಸಮತೋಲನ. ಅಮೆರಿಕದಲ್ಲಿ ಹೂಡಿಕೆಗೆ ಬೇಕಾದಷ್ಟು ಹಣ ಉಳಿತಾಯ ಆಗುತ್ತಿಲ್ಲ. ಹೂಡಿಕೆಗೆ ಹೊರಗಡೆಯಿಂದ ಹಣ ಬರಬೇಕು. ಅದರಿಂದ ವ್ಯಾಪಾರದ ಕೊರತೆ ಹೆಚ್ಚುತ್ತದೆ. ವ್ಯಾಪಾರದ ಕೊರತೆಯನ್ನು ತಗ್ಗಿಸುವುದಕ್ಕೆ ಉತ್ತಮ ಮಾರ್ಗವೆಂದರೆ ಬಜೆಟ್ ಕೊರತೆಯನ್ನು ತಗ್ಗಿಸುವುದು. ಆಗ ಸರ್ಕಾರದ ಸಾಲ ಕಡಿಮೆಯಾಗುತ್ತದೆ. ಬಡ್ಡಿದರ ಕಡಿಮೆಯಾಗುತ್ತದೆ. ಅಮೆರಿಕದ ಸ್ವತ್ತನ್ನು ಕೊಳ್ಳುವುದಕ್ಕೆ ವಿದೇಶಿ ಬಂಡವಾಳಕ್ಕಿರುವ ಆಕರ್ಷಣೆಯೂ ಕಡಿಮೆಯಾಗುತ್ತದೆ. ಅದರಿಂದ ವ್ಯಾಪಾರದ ಕೊರತೆ ತಗ್ಗಬಹುದು.



ಸುಂಕದಿಂದ ವಿಪರೀತ ಹಣ ಸಂಗ್ರಹವಾಗುತ್ತದೆ. ಅದರಿಂದ ತೆರಿಗೆಯನ್ನು ಇಳಿಸಬಹುದು, ಸಾಲವನ್ನು ತೀರಿಸಿಬಿಡಬಹುದು ಎಂದು ಟ್ರಂಪ್ ಭಾವಿಸಿದ್ದಾರೆ. ಆದರೆ ಆ ಪ್ರಮಾಣದಲ್ಲಿ ಹಣ ಸಂಗ್ರಹವಾಗುವ ಸಾಧ್ಯತೆ ಇಲ್ಲ. ಟ್ರಂಪ್ ಅವರ ಸುಂಕ ಸಮರದ ಪರಿಣಾಮವನ್ನು ಈಗಲೇ ಸ್ಪಷ್ಟವಾಗಿ ಹೇಳಲು ಸಾಧ್ಯವಿಲ್ಲ. ಬಹುತೇಕ ದೇಶಗಳು ಪ್ರತಿಕ್ರಮವನ್ನು ಘೋಷಿಸಿವೆ. ಅಮೆರಿಕದ ಕೃಷಿ ಉತ್ಪನ್ನಗಳನ್ನು ಚೀನಾ ನಿಷೇಧಿಸಲು ಹೊರಟಿದೆ. ಅಮೆರಿಕದ ಕೃಷಿಕರ ಉತ್ಪನ್ನಗಳಿಗೆ ಭಾರತದ ಮಾರುಕಟ್ಟೆಯನ್ನು ತೆರೆಯಬೇಕೆಂದು ಅಮೆರಿಕ ಭಾರತವನ್ನು ಒತ್ತಾಯಿಸುತ್ತಿದೆ. ಜರ್ಮನಿ ಮತ್ತು ಕೆನಡಾದಂತಹ ದೇಶಗಳ ಉದ್ಯಮಿಗಳಿಗೆ ಅಮೆರಿಕದಲ್ಲೇ ಉತ್ಪಾದನೆಯನ್ನು ಆರಂಭಿಸುವಂತೆ ಒತ್ತಡ ಬರಬಹುದು. ಅಮೆರಿಕದ ಮಾರುಕಟ್ಟೆಯನ್ನು ನೆಚ್ಚಿಕೊಂಡಿರುವ ಎಲ್ಲ ದೇಶಗಳೂ ಅಮೆರಿಕದ ಒತ್ತಡವನ್ನು ಅನುಭವಿಸಬೇಕು. ಅವುಗಳಿಗಿರುವ ಒಂದೇ ದಾರಿಯೆಂದರೆ ದೇಶದೊಳಗೆ ಅಥವಾ ಬೇರೆ ದೇಶಗಳಲ್ಲಿ ಮಾರುಕಟ್ಟೆಯನ್ನು ಕಂಡುಕೊಳ್ಳಬೇಕು.

ಭಾರತವು ಅಮೆರಿಕದಿಂದ ಮಾಡಿಕೊಳ್ಳುತ್ತಿರುವ ಆಮದಿಗೆ ಹೋಲಿಸಿದರೆ, ನಾವು ಅಮೆರಿಕಕ್ಕೆ ಮಾಡುತ್ತಿರುವ ರಫ್ತು ₹ 3.17 ಲಕ್ಷ ಕೋಟಿಗಿಂತ ಜಾಸ್ತಿ ಇದೆ. ಇದರಿಂದಾಗಿ ಅಮೆರಿಕದ ಕಣ್ಣು ಕೆಂಪಾಗಿದೆ. ಭಾರತವು ಅಮೆರಿಕವನ್ನು ರಮಿಸಲು ಬಹಳಷ್ಟು ಪ್ರಯತ್ನಿಸಿದೆ. ಶೇ 55ರಷ್ಟು ಸರಕುಗಳ ಮೇಲೆ ಸುಂಕದಲ್ಲಿ ಕಡಿತ ಮಾಡಲು ಒಪ್ಪಿದೆ. ಕೃಷಿ ಉತ್ಪನ್ನಗಳ ಮೇಲಿನ ಸುಂಕದ ಕಡಿತಕ್ಕೂ ತಯಾರಿದೆ. ಇದು, ಈಗಾಗಲೇ ಸಂಕಟದಲ್ಲಿರುವ ದೇಶದ ಆರ್ಥಿಕತೆಯನ್ನು ಮತ್ತಷ್ಟು ಸಂಕಟಕ್ಕೆ ತಳ್ಳಬಹುದು. ನಮ್ಮ ಜನರ, ರೈತರ ಹಾಗೂ ಸಣ್ಣ ಉದ್ದಿಮೆಗಳ ಹಿತವನ್ನು ಕಾಪಾಡಿಕೊಳ್ಳುವ ಕಡೆ ನಾವು ಗಮನಕೊಡಬೇಕು.

## ಚುರುಮುರಿ



# ಸಂಪು ಸುಂಕ!

• ತುರುವೇಕೆರೆ ಪ್ರಸಾದ್

‘ಮೋದಿ ಮಾಮ ಏನೆಲ್ಲಾ ಸರ್ಕಸ್ ಮಾಡುದ್ರೂ ಬಿಡ್ದೆ ಟ್ರಂಪ್ ಮಾಮ ಸಕತ್ ಸುಂಕ ತಲೆ ಮೇಲೆ ಮಡಗೇಬಿಟ್ಟವ್ರಲ್ಲ’ ಎಂದ ಗುದ್ಲಿಂಗ ಹರಟೆಕಟ್ಟೇಲಿ.

‘ವ್ಹಾ ಕಣ್ಲಾ, ಇವರಲ್ಲೋಗಿ ಸ್ನೇಹ ಸೌಹಾರ್ದದ ಸಂಕ ಕಟ್ ಬಂದ್ರೂ ಟ್ರಂಪ್ ಸುಂಕ ಮಾತ್ರ ಜಡಿದೇ ಬಿಟ್ಟವ್ರೆ... ಯಾವ ಟ್ರಂಪ್ ಕಾರ್ಡೂ ವರ್ಕ್‌ಔಟ್ ಆದಂಗಿಲ್ಲ’ ಎಂದ ಮಾಲಿಂಗ.

‘ಯಾಕಾಗಿಲ್ಲ? ಚೀನಾ ಮೇಲೆ ಹಾಕಿರೋ ಸುಂಕಕ್ಕಿಂತ ಅರ್ಧಕ್ಕರ್ಧ ಕಮ್ಮಿ ಇಲ್ವಾ? ತಲೆ ಮೇಲೆ ಚಪ್ಪಡಿ ಎಳ್ಕೊಂಡಿರೋರನ್ನ ನೋಡಿ ಕಾಲ್ಮೇಲೆ ಕಲ್ ಹಾಕ್ಕಂಡಿರೋರು ಸಮಾಧಾನ ಪಟ್ಕೊಬೇಕು ತಾನೆ?’ ಎಂದ ಕಲ್ಲೇಶಿ.

‘ಅದೇನೋ ನಿಜ ಅನ್ನು. ಅಲ್ಲಿದು ಬಿಡ್ರಪ್ಪ, ಈಗ ನಮ್ ಸರ್ಕಾರನೂ ಕರೆಂಟು, ಹಾಲು, ಡೀಸಲ್ಲು ಎಲ್ಲಾ ರೇಟು ಏರ್ಸೈತೆ. ಸಿಕ್ಕಿ ಸಿಕ್ಕಿದ್ದಕ್ಕೆಲ್ಲಾ ಹುಡುಕಿ ಟ್ಯಾಕ್ಸ್ ಜಡಿದವ್ರೆ. ಟ್ರಂಪ್ ಸುಂಕದಿಂದ ಉಮೇದು ಹತ್ತಿ ಇವರೂ ‘ಸಂಪು ಸುಂಕ’ ಅಂತ ಜಡಿಬೋದಲ್ವಾ?’

‘ಅಂಗಂತೀಯಾ? ಸಂಪ್ಗೆ ಯಾಕ್ಲಾ ಸುಂಕ?’

‘ದೊಡ್ ದೊಡ್ ಸಂಪ್ ಮಾಡ್ಕಂಡು ಇದ್‌ಬದ್ ನೀರ್ನೆಲ್ಲ ದೊಡ್ ಮನುಷ್ಯರೇ ಡ್ಯಾಮ್ ತರ ಮಾಡಿಟ್ಕಂಡ್‌ಬುಟ್ರೆ ನಮ್ಮಂತೋರ್ಗೆ ನೀರೆಲ್ಲಾ ಇರುತ್ತೆ? ಅದಕ್ಕೆ ಸಂಪ್ ಕೆಪಾಸಿಟಿಗೆ ತಕ್ಕಂಗೆ ಸುಂಕ ಹಾಕೋದು’.

‘ಊ ಕಣ್ಲಾ, ಮೊದ್ಲೇ ಬೇಸ್ಗೆಕಾಲ, ನೀರಿಗೆ ಬರ. ‘ಓವರ್ಹೆಡ್ ಟ್ಯಾಂಕ್ ಟ್ಯಾಕ್ಸು, ನೆಲಮಾಳಿಗೆ ಸಂಪು ಸುಂಕ’ ಅಂತ ಮಾಡ್ಬುಟ್ರೆ ಅದರಲ್ಲೂ ಬೇಕಾದಷ್ಟು ಗೆಬರ್ಕಬಹುದು’.

‘ಕಾಲಿ ಇರೋ ಟ್ಯಾಂಕು, ಸಂಪ್ಗೆ ಹತ್ ಪಟ್ಟು ಸುಂಕ ಹಾಕ್ಬೇಕು’ ಎಂದ ಪರ್ಮೇಶಿ.

‘ಏಯ್! ಕಾಲಿ ಸಂಪ್ಗೆ ಯಾಕ್ಲಾ ಸುಂಕ?’

‘ನೀರಿದ್ರೆ ಓಕೆ, ಕಾಲಿ ಇದ್ರೆ ಅದ್ರಲ್ಲಿ ಏನಾದ್ರು ಬಚ್ಚಿಟ್ಟಬಹುದಲ್ಲ. ಕೋಟಿಗಟ್ಟಲೆ ಬೆಲೆಬಾಳೋ ರಕ್ತಚಂದನ ಸಂಪಲ್ಲಿ ಸಿಕ್ಕಿರ್ಲಿಲ್ವಾ? ಕಲಬುರ್ಗೀಲಿ ಎಸಿಬಿ ರೈಡ್ ಮಾಡ್ದಾಗ ಪೈಪಲ್ಲಿ ನೋಟಿನ ಕಂತೆ ಉದುರ್ಲಿಲ್ವಾ? ಇನ್ನು ಸಂಪಲ್ಲಿ ಕಳ್ಳ ದುಡ್ಡು ಇಡಲ್ಲ ಅಂತ ಏನ್ ಗ್ಯಾರಂಟಿ? ಮೊಣಕೈ ಉದ್ದ ಬ್ಯಾಂಕ್ ಲಾಕರ್ಗೇ ಸಾವಿರ ಸಾವಿರ ಕಿತ್ಕೊತಾರೆ. ಇನ್ನು ಸಂಪ್‌ನಂಥ ಎರಡಾಳುದ್ದ ಸೇಫ್ಟಿ ಲಾಕರ್ಗೆ ಸುಂಕ ಹಾಕ್ಬಾರ್ದಾ?’ ಎಂದ ಪರ್ಮೇಶಿ. ಎಲ್ಲಾ ಹೌದ್ಹೌದು ಎಂದು ಹಲ್ಕಿರಿದರು.

## ದಿನದ ಟ್ವೀಟ್



### ಹೆದರಿಕೆ ಏಕೆ?

ಸಾರ್ವಜನಿಕವಾಗಿ ಸತ್ಯ ಹೇಳಲು ಭಾರತೀಯರು ವಿಪರೀತ ಹೆದರುತ್ತಾರೆ ಏಕೆ?

**ಡಾ. ಅನಿರುದ್ಧ ಮಾಲ್ಪಾಣಿ,** ಸ್ತ್ರೀರೋಗತಜ್ಞ

## ಕಿಡಿನುಡಿ



ವಕ್ಫ್ ತಿದ್ದುಪಡಿ ಮಸೂದೆಯು ಹಿಂದೂ ದೇವಾಲಯಗಳು ಹಾಗೂ ಸಾಮಾನ್ಯ ರೈತರ ಆಸ್ತಿಯನ್ನು ವಕ್ಫ್ ಹೆಸರಿನಲ್ಲಿ ಕಬಳಿಸುವುದಕ್ಕೆ ಕಡಿವಾಣ ಹಾಕಲಿದೆ. ವಕ್ಫ್ ಆಸ್ತಿ ದಾಖಲೆಗಳ ಡಿಜಿಟಲೀಕರಣದಿಂದ ವಕ್ಫ್ ಆಸ್ತಿ ದುರುಪಯೋಗವಾಗುವುದು ನಿಲ್ಲುತ್ತದೆ.

**ಸಿ.ಟಿ. ರವಿ,** ವಿಧಾನಪರಿಷತ್ತಿನ ಬಿಜೆಪಿ ಸದಸ್ಯ

## ಸಂಗತ

# ಸಂಬಂಧಗಳು ಮನುಷ್ಯತ್ವ ಮರೆತಾಗ...

ಈ ಬಗೆಯ ಕ್ರೌರ್ಯಕ್ಕೆ ಕಾರಣ ಹಲವು; ಔಷಧಿಯನ್ನು ಬೇರುಗಳಿಗೇ ಕೊಡಬೇಕಿದೆ

• ದೀಪಾ ಹಿರೇಗುತ್ತಿ

**ಮಹಿಳೆಯೊಬ್ಬಳು** ಗಂಡನನ್ನು ಕೊಂದು ಡ್ರಮ್‌ನಲ್ಲಿ ತುಂಬಿದ್ದ ಸುದ್ದಿ ಹಳೆಯದಾಗುತ್ತಿದ್ದಂತೆಯೇ ಪುರುಷನೊಬ್ಬ ಹೆಂಡತಿಯನ್ನು ಸಾಯಿಸಿ ಸೂಟ್‌ಕೇಸಿನಲ್ಲಿ ತುಂಬಿದ ಸುದ್ದಿ ಹೊರಬಿದ್ದಿದೆ. ಇಂತಹ ಹೀನಾತಿಹೀನ ಕೃತ್ಯಗಳು ಇತ್ತೀಚಿನ ದಿನಗಳಲ್ಲಿ ಪದೇ ಪದೇ ಕೇಳಿಬರುತ್ತಿರುವುದು ಆಘಾತಕಾರಿ ಸಂಗತಿಯಾಗಿದೆ.

1995ರಲ್ಲಿ ದೆಹಲಿಯ ನೈನಾ ಸಾಹ್ನಿ ಎಂಬ 29ರ ಹರಯದ ನತದೃಷ್ಟ ಹೆಣ್ಣುಮಗಳು ತನ್ನ ಗಂಡ ಸುಶೀಲ್ ಶರ್ಮಾನಿಂದ ಕೊಲೆಯಾಗಿ ತಂದೂರ್ ಒಲೆಯಲ್ಲಿ ಸುಡಲ್ಪಟ್ಟಿದ್ದಳು. ಆ ಪ್ರಕರಣವು ದೇಶದಾದ್ಯಂತ ಆತಂಕದ ಅಲೆಗಳನ್ನು ಎಬ್ಬಿಸಿತ್ತು. ಅದಾದ ಬಳಿಕ ಅಂತಹ ಕೃತ್ಯಗಳು ಅಲ್ಲೊಂದು ಇಲ್ಲೊಂದು ವರದಿ ಆಗಿದ್ದವು. ಆದರೆ ಅಂತಹ ಕೃತ್ಯಗಳು ಇತ್ತೀಚೆಗೆ ಪದೇ ಪದೇ ವರದಿಯಾಗುತ್ತಿರುವುದನ್ನು ಓದಿದಾಗ ಸಮಾಜ ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎಂದು ಭಯವಾಗುತ್ತದೆ. ಮನುಷ್ಯತ್ವ ಎಂಬ ಶಬ್ದಕ್ಕೇ ಸವಾಲು ಹಾಕುವಂತಹ, ಪ್ರತಿಯೊಂದು ಹೆಜ್ಜೆಯನ್ನೂ ಜಾಗರೂಕತೆಯಿಂದ ಯೋಜಿಸಿ ಕಾರ್ಯರೂಪಕ್ಕೆ ತರುವ ಈ ತಣ್ಣನೆಯ ಕ್ರೌರ್ಯವು ಮನಸ್ಸಿನಲ್ಲಿ ಹುಟ್ಟುವ ಆ ಕ್ಷಣವಾದರೂ ಯಾವುದು?

ಮನಸ್ಸು, ಕನಸು, ದೇಹ ಎಲ್ಲವನ್ನೂ ಹಂಚಿಕೊಂಡ ಜೀವವನ್ನು ಹೀಗೆ ಬರ್ಬರವಾಗಿ ಮುಗಿಸಿಹಾಕುವುದು ಮನುಷ್ಯ ಎಷ್ಟು ಕ್ರೂರವಾಗಬಲ್ಲ ಎನ್ನುವುದಕ್ಕೆ ಉದಾಹರಣೆ. ಇದಕ್ಕೆ ಬಹಳಷ್ಟು ಸಂದರ್ಭಗಳಲ್ಲಿ ವಿವಾಹೇತರ ಸಂಬಂಧ, ಅದಕ್ಕೆ ಸಂಬಂಧಿಸಿದ ಶಂಕೆಗಳೇ ಕಾರಣ ಆಗಿರುತ್ತವೆ. ಜತೆಗೆ ಅಹಂ, ಅಸೂಯೆ, ಹಣಕಾಸಿನ ಲಾಭ, ತಮ್ಮ ತಪ್ಪು ಸಮಾಜಕ್ಕೆ ತಿಳಿಯುವ ಭಯ ಇವೆಲ್ಲವೂ ಜತೆಯಾಗುತ್ತವೆ. ಸ್ನೇಹದ ಹೆಸರಿನಲ್ಲೂ ನಂಬಿದವರ ಕತ್ತು ಕುಯ್ಯುವ ನೀಚತನ ಕೂಡ ಇದೆ.

ನಿಜ, ಮನುಷ್ಯ ಸಂಬಂಧಗಳು ಬಹಳ ನಾಜೂಕಾಗಿರುತ್ತವೆ. ಅದರಲ್ಲೂ ರಕ್ತಸಂಬಂಧವಲ್ಲದ ಗಂಡ-ಹೆಂಡತಿ ಅಥವಾ ಪ್ರೇಮಿಗಳ ಸಂಬಂಧವು ಹಗ್ಗದ ಮೇಲಿನ ನಡಿಗೆಯೇ. ಪ್ರೇಮವೆಂದರೆ ಧಾರಾವಾಹಿ, ಸಿನಿಮಾ, ಸಾಮಾಜಿಕ ಜಾಲತಾಣಗಳಲ್ಲಿ ತೋರಿಸುವ ಡೇಟಿಂಗ್, ಉಡುಗೊರೆ, ರಮ್ಯವಾದ ವಿವಾಹದ ಆಚರಣೆ ಮಾತ್ರವಲ್ಲ; ಅದೊಂದು ಬದ್ಧತೆ. ದಿನದಿನವೂ ನಿಭಾಯಿಸಬೇಕಾದ ಜವಾಬ್ದಾರಿ. ನಿಜವಾದ ಪ್ರೇಮ ಧಗಧಗನೆ ಉರಿವ ಒಣಸೌದೆಯಲ್ಲ, ಅದು ನಿಧಾನವಾಗಿ ಹೊತ್ತಿಕೊಂಡು ಉರಿಯುವ ಕಲ್ಲಿದ್ದಲು. ಆದರೆ ದುರ್ದೈವವಶಾತ್ ಸಣ್ಣ ಪುಟ್ಟ ಆಕರ್ಷಣೆಗಳನ್ನೇ ಪ್ರೇಮ ಎಂದುಕೊಳ್ಳುವ ಅಪಕ್ವ ಮನಃಸ್ಥಿತಿ ಇವೆಲ್ಲ ಸಮಸ್ಯೆಗಳಿಗೆ ಕಾರಣ.

ಮನುಷ್ಯರು ಎಂದಮೇಲೆ ಆಕರ್ಷಣೆ ಸಹಜವಾದದ್ದು. ಬದುಕಿನ ಯಾವ ಹಂತದಲ್ಲಾದರೂ ಎದುರಾಗಬಹುದಾದ ಇಂತಹ ತಾತ್ಕಾಲಿಕ ವ್ಯಾಮೋಹವನ್ನು ಬದಿಗೆ ಸರಿಸಿ ಮುನ್ನಡೆಯುವುದು ಜಾಣತನ. ಆದರೆ ಅಂತಹ ಪ್ರೌಢಿಮೆ ಎಲ್ಲರಿಗೂ ಇರುವುದಿಲ್ಲ. ರಾತ್ರಿ ಕಂಡ ಬಾವಿಗೆ ಹಗಲಿಗೆ ಬೀಳುವಂತೆ ಹಾದಿ ತಪ್ಪುವ ಮೂರ್ಖತನ ಬರುಬರುತ್ತ ಈ ಮಟ್ಟಕ್ಕೆ ಬಂದು ಮುಟ್ಟುವುದು ಮಾತ್ರ ಊಹೆಗೂ ಮೀರಿದ್ದು!

ವಿವಾಹದಲ್ಲಿ ಹೊಂದಾಣಿಕೆಯೇ ಆಗದಿದ್ದರೆ ಸೌಹಾರ್ದದಿಂದ ಬೇರೆಯಾಗುವ ಮೂಲಕ ಸಮಸ್ಯೆಯನ್ನು ಪರಿಹಾರ ಮಾಡಿಕೊಳ್ಳುವ ಅವಕಾಶ ಇದ್ದರೂ ಹೀಗೇಕಾಗುತ್ತಿದೆ ಎಂಬ ಪ್ರಶ್ನೆ ಎಲ್ಲರಲ್ಲೂ ಹುಟ್ಟಬಹುದು. ದುರದೃಷ್ಟವಶಾತ್ ನಮ್ಮ ದೇಶದಲ್ಲಿ ವಿಚ್ಛೇದನ, ಮಹಿಳೆಯರ ಮರುವಿವಾಹದಂತಹ ವಿಷಯಗಳು ನಡತೆಯ ಪರಿಣಾಮ ಎಂಬಂತೆ ಪರಿಗಣಿತವಾಗುತ್ತವೆ. ಅವು ಸಹಜ ಎಂಬ ಮನಃಸ್ಥಿತಿ ಬಹಳ ದೂರವಿದೆ. ಇನ್ನು ಸೇಡು ತೀರಿಸಿಕೊಳ್ಳಲು ಕಾನೂನನ್ನು ಕೈಗೆತ್ತಿಕೊಳ್ಳುವುದೇ ಹೀರೊಯಿಸಂ ಎಂದು ಸಿನಿಮಾಗಳು ಸಾರಿ ಸಾರಿ ಹೇಳಿವೆ, ಸಮಾಜ ಅದನ್ನು ನಂಬಿಬಿಟ್ಟಿದೆ. ಜಗತ್ತಿನ ಕಣ್ಣಿನಲ್ಲಿ ಆದರ್ಶ ಸಂಸಾರದ ಮುಖವಾಡ ಹಾಕಿಕೊಂಡಿರುವವರಿಗೆ ಅದು ಕಳಚಿ ಬೀಳುವುದು ಇಷ್ಟವಾಗುವುದಿಲ್ಲ. ಹೀಗಾಗಿ ಕೊಲೆ ಮಾಡಿ ಶವದ ಸುಳಿವೇ ಸಿಗದಂತೆ ಮಾಡಿದರೆ ಎಲ್ಲ ರೀತಿಯಲ್ಲಿಯೂ ಸುರಕ್ಷಿತ ಎಂದು ಯೋಚಿಸಿ ಈ ರೀತಿಯ ಹೀನ ಕೃತ್ಯ ಎಸಗುತ್ತಾರೆ. ಅವರಿಗೆ ಗೊತ್ತಿಲ್ಲದ ವಿಷಯವೇನೆಂದರೆ ಕಾನೂನಿನ ಕೈಗಳು ಬಹಳ ಉದ್ದವಿರುತ್ತವೆ ಎಂಬುದು. ಮಾಧ್ಯಮದಲ್ಲಿ ಬರುವ ಈ ರೀತಿಯ ಅಪರಾಧಗಳನ್ನು ನೋಡಿ ಸ್ಫೂರ್ತಿ ಪಡೆಯುವವರು, ಇಂತಹ ಪ್ರಕರಣಗಳನ್ನು ಪೊಲೀಸರು ತಕ್ಷಣ ಭೇದಿಸಬಲ್ಲರು ಎಂಬುದರ ಕುರಿತು ಜಾಣಮರೆವು ತೋರುತ್ತಾರೆ!



ಒಂದು ಕಾಲದಲ್ಲಿ ನಮ್ಮ ತುಟಿಯಂಚಿನಲ್ಲಿ ನಗುವನ್ನು ಅರಳಿಸಿದ ಯಾವುದೇ ಸಂಗತಿಯ ಕುರಿತು ಪಶ್ಚಾತ್ತಾಪ ಪಡಬಾರದಂತೆ. ಆದರೆ ಈ ಅಪರಾಧಿಗಳು ತಮ್ಮವರೊಂದಿಗೇ ತೋರುವ ಕ್ರೌರ್ಯ ಊಹೆಗೂ ಮೀರಿದ್ದು! ಇಂದು ಹಣದ ಹಿಂದೆ ಬಿದ್ದಿರುವ ಸಮಾಜ, ಮಾನವೀಯ ಮೌಲ್ಯಗಳನ್ನು ಮರೆತಿದೆ. ಹಿಂದೆ ಶಾಲೆಗಳಲ್ಲಿದ್ದ ನೀತಿಪಾಠದ ತರಗತಿಗಳು ವ್ಯರ್ಥವೆಂದು ವಿಜ್ಞಾನವನ್ನು ಅವಧಿಗಿಂತ ಹೆಚ್ಚು ಬೋಧಿಸಲಾಗುತ್ತಿದೆ. ಬೆಳಗಿನಿಂದ ಸಂಜೆಯವರೆಗೆ ತರಗತಿಯಲ್ಲಿ ಕೂರುವ ಮಕ್ಕಳ ಮನಸ್ಸಿಗೆ ಮುದವನೀಯುವ ಆಟದ ಅವಧಿಗಳೂ ವ್ಯರ್ಥವೆಂದು ಮಕ್ಕಳ ಮುದುಡಿದ ಮುಖ ನೋಡಿಯೂ ನೋಡದಂತೆ ಅಲ್ಲೂ ಗಣಿತ ಪಾಠ ಮಾಡಲಾಗುತ್ತಿದೆ. ಇದೀಗ ಇಂತಹ ಕೃತ್ಯಗಳು ನಮ್ಮ ಲೆಕ್ಕಾಚಾರದಲ್ಲಿ ತಪ್ಪಿದೆಯೆಂಬ ಸ್ಪಷ್ಟ ಸಂದೇಶ ನೀಡುತ್ತಿವೆ. ಇದು, ಗಿಡದ ಹೂವು ಮುರುಟಿದರೆ ಹೂವಿಗೆ ಉಪಚಾರ ಮಾಡುವ ಸಮಸ್ಯೆಯಲ್ಲ, ಬೇರುಗಳಿಂದಲೇ ಔಷಧಿ ಕೊಡಬೇಕಾದ ಸಮಸ್ಯೆ. ನಮ್ಮಲ್ಲಿ ಅತ್ಯಂತ ಅವಗಣನೆಗೆ ಪಾತ್ರವಾಗಿರುವ ಮಾನಸಿಕ ಆರೋಗ್ಯದ ಕಡೆಗೂ ತುರ್ತು ಗಮನ ಅಗತ್ಯ. ಸರ್ಕಾರಗಳು, ಸಮಾಜ ಜತೆಜತೆಯಾಗಿ ಕಾರ್ಯಯೋಜನೆ ಹಾಕಿಕೊಂಡರೆ ಮಾತ್ರ ಪರಿಹಾರವಾಗಬಲ್ಲ ಸಮಸ್ಯೆ.

## ವಾಚಕರ ವಾಣಿ

### ಎಲ್ಲದಕ್ಕೂ ಕೋರ್ಟ್ ಆದೇಶ ಬೇಕೆ?

ಬಸವಸಾಗರ ಜಲಾಶಯದಿಂದ ರೈತರ ಬೆಳೆಗಳಿಗೆ ನೀರು ಬಿಡಲು ರಾಜ್ಯ ಹೈಕೋರ್ಟ್ ಆದೇಶಿಸಿದೆ ಎಂಬ ಸುದ್ದಿ (ಪ್ರ.ವಾ., ಏ.4) ಓದಿದ ಬಳಿಕ ಕೋರ್ಟುಗಳ ಮಧ್ಯಪ್ರವೇಶ ಇಲ್ಲದೆ ಯಾವುದೇ ಕೆಲಸ ಕಾರ್ಯಗಳು ಆಗುವುದಿಲ್ಲವೇನೊ ಎನ್ನುವ ಅನುಮಾನ ಮೂಡಿತು.

ಜಲಾಶಯದ ನೀರನ್ನು ರೈತರ ಬೆಳೆಗಳಿಗೆ ಬಿಡಲು ಕೋರ್ಟ್ ಆದೇಶ, ಕುಡಿಯುವ ನೀರಿಗೂ ಕೋರ್ಟ್ ಆದೇಶ, ಹೀಗೆ ಪ್ರತಿಯೊಂದಕ್ಕೂ ಕೋರ್ಟ್ ಆದೇಶದ ಅಗತ್ಯವಿದ್ದರೆ ಇನ್ನುಳಿದ ಇಲಾಖೆಗಳ, ಅಧಿಕಾರಿಗಳ ಅಗತ್ಯವಿದೆಯೇ?

**ಟಿ.ವಿ.ಬಿ.ರಾಜನ್,** ತಲಘಟ್ಟಪುರ

### ದೇವರ ದರ್ಶನ: ಭಿನ್ನಭೇದ ಏಕೆ?

ತಿರುಮಲ ತಿರುಪತಿ ದೇವಸ್ಥಾನದಲ್ಲಿ (ಟಿಟಿಡಿ) ಭಕ್ತರಿಗೆ ಶೀಘ್ರ ದರ್ಶನ ದೊರೆಯುವಂತೆ ಮಾಡುವ ಉದ್ದೇಶದಿಂದ ವಿಐಪಿ (ಅತಿ ಗಣ್ಯ ವ್ಯಕ್ತಿ) ದರ್ಶನದ ಸಮಯವನ್ನು ಬದಲಾವಣೆ ಮಾಡಲಾಗಿದೆ ಎಂದು ಟಿಟಿಡಿ ಟ್ರಸ್ಟ್ ಸದಸ್ಯರೊಬ್ಬರು ಹೇಳಿರುವುದು (ಪ್ರ.ವಾ., ಏ.4) ವರದಿಯಾಗಿದೆ. ಭಕ್ತರಿಗೆ ಬೇರೆ ಹಾಗೂ ವಿಐಪಿಗಳಿಗೆ ಬೇರೆ ದರ್ಶನ ವ್ಯವಸ್ಥೆ ಎಂದರೆ, ವಿಐಪಿಗಳು ಭಕ್ತರಲ್ಲವೇ? ವಿಐಪಿಗಳೆಂದರೆ ಯಾರು? ಅಧಿಕಾರ, ಹಣವಿದ್ದವರು ವಿಐಪಿಗಳಾದರೆ, ಅವರಿಗೆ ಅಧಿಕಾರ, ಹಣ ಕೊಟ್ಟವರಾರು? ಮತದಾರರು ಅಧಿಕಾರ ಕೊಟ್ಟರು, ಕೂಲಿಕಾರ್ಮಿಕರು ಹಣ ಸಂಪಾದನೆಗೆ ನೆರವಾದರು. ಆದರೂ ಮತದಾರರು ಮತ್ತು ಕೂಲಿಕಾರ್ಮಿಕರು ವಿಐಪಿಗಳಾಗಲಿಲ್ಲ, ಭಕ್ತರಾಗಿಯೇ ಉಳಿದರು. ಮರ ದೊಡ್ಡದಾಗಲು ಮತ್ತು ಹಣ್ಣು ಕೊಡಲು ಕಾರಣವಾದ ಬೇರು ಭೂಮಿಯಲ್ಲೇ ಉಳಿಯಿತು. ಬೇರುಗಳಿಂದ ಹೀರಲ್ಪಟ್ಟ ಕಾಂಡ, ಹಣ್ಣುಗಳು ವಿಐಪಿಗಳಾದದ್ದು ವಿಪರ್ಯಾಸವಲ್ಲವೇ?

ಇನ್ನೊಂದು ಕಡೆ ಇಂತಹ ತಾರತಮ್ಯಗಳು ಮನುಷ್ಯನಿರ್ಮಿತ, ದೇವರು ಮಾಡಿದ್ದಲ್ಲ ಎನ್ನುವುದಾದರೆ, ದೇವರನ್ನು ಬಳಸಿಕೊಂಡು ವ್ಯವಸ್ಥಿತವಾಗಿ ಒಂದು ವರ್ಗ ವ್ಯಾಪಾರ ಮಾಡುತ್ತಿದೆಯಲ್ಲವೇ? ದೇವರ ವ್ಯಾಪಾರದ ಬಲೆಯಲ್ಲಿ ಭಕ್ತರು ಸಿಕ್ಕಿಬಿದ್ದಿದ್ದಾರೆ ಅನಿಸುವುದಿಲ್ಲವೇ?

**ತಾ.ಸಿ.ತಿಮ್ಮಯ್ಯ,** ಬೆಂಗಳೂರು

### ನಾರಿಯರಿಂದ ನಾರಿಯರಿಗಾಗಿ...

ಮಹಿಳೆಯರೇ ಪ್ರತ್ಯೇಕ ರಾಜಕೀಯ ಪಕ್ಷ ಸಂಘಟಿಸಲಿ ಎಂಬ ಹೊಸ ವಿಚಾರವನ್ನು ವೆಂಕಟೇಶ ಮಾಚಕನೂರ ಅವರು ಪ್ರಸ್ತಾಪಿಸಿದ್ದಾರೆ (ವಾ.ವಾ., ಏ.4). ಜಾನಪದ ಕತೆಯಲ್ಲಿ ಮಹಿಳೆಯರದೇ ಆದ ‘ಪ್ರಮೀಳಾರಾಜ್ಯ’ ಎಂಬುದು ಇತ್ತೆಂದು ಓದಿದ ನೆನಪು. ಮಂತ್ರಿಗಳಿಂದ ದಾಸಿಯರವರೆಗಿನ ಎಲ್ಲಾ ಹುದ್ದೆಗಳಲ್ಲಿ ವನಿತೆಯರೇ ರಾಜ್ಯಭಾರ ಮಾಡುತ್ತಿದ್ದರಂತೆ (ಈ ಕುರಿತು ಒಂದು ಸಿನಿಮಾ ಸಹ ಬಂದಿತ್ತು). ಅಂದರೆ, ನೂರಕ್ಕೆ ನೂರು ಮಹಿಳೆಯರೇ ಆಯಕಟ್ಟಿನ ಸ್ಥಳಗಳಲ್ಲಿದ್ದರು. ಹಾಗೇನಾದರೂ ಆದಲ್ಲಿ ಪುರುಷರು ರಾಜಕೀಯ ಮೀಸಲಾತಿಗಾಗಿ ಹೋರಾಟ ನಡೆಸಬಹುದು. ‘ನಾರಿಯರಿಂದ ನಾರಿಯರಿಗಾಗಿ ನಾರಿಯರಿಗೋಸ್ಕರ!’ ಆಡಳಿತಕ್ಕೆ ಜಯವಾಗಲಿ.

**ಗಣೇಶ ಜೋಶಿ,** ಧಾರವಾಡ

### ಭಾಷಾ ವಿವಾದಕ್ಕೆ ಹೊಸ ಆಯಾಮ...

ಮಹಾರಾಷ್ಟ್ರದಲ್ಲಿ ಎಲ್ಲ ಸರ್ಕಾರಿ ಕಚೇರಿಗಳಲ್ಲಿನ ಸಿಬ್ಬಂದಿ ಕಡ್ಡಾಯವಾಗಿ ಮರಾಠಿ ಭಾಷೆಯಲ್ಲಿಯೇ ಮಾತನಾಡಬೇಕು ಎಂದು ಅಲ್ಲಿನ ಸರ್ಕಾರ ಇತ್ತೀಚೆಗೆ ಆದೇಶ ಹೊರಡಿಸಿದೆ. ಈ ಆದೇಶದ ಬಗ್ಗೆ ಇನ್ನೂ ಚರ್ಚೆ ಮುಂದುವರಿದಿರುವಾಗಲೇ ಮಹಾರಾಷ್ಟ್ರ ನವನಿರ್ಮಾಣ ಸೇನೆಯ ರಾಜ್ ಠಾಕ್ರೆ ಅವರು ಮತ್ತೊಂದು ಬೇಡಿಕೆ ಮುಂದಿಟ್ಟಿದ್ದಾರೆ. ಮಹಾರಾಷ್ಟ್ರದಲ್ಲಿ ಎಲ್ಲ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸರ್ವ ವ್ಯವಹಾರವನ್ನೂ ರಾಜ್ಯದ ಅಧಿಕೃತ ಆಡಳಿತ ಭಾಷೆಯಾದ ಮರಾಠಿಯಲ್ಲೇ ನಡೆಸುವುದನ್ನು ಕಡ್ಡಾಯಗೊಳಿಸಲು ಆಗ್ರಹಪಡಿಸಿದ್ದಾರೆ. ಭಾಷೆ ಸೂಕ್ಷ್ಮ ಮತ್ತು ಭಾವನಾತ್ಮಕ ವಿಷಯವಾಗಿದ್ದು ಅದು ಸಮೂಹ ಸನ್ನಿಯಂತೆ ದೇಶದಾದ್ಯಂತ ಹರಡಿ ಈಗಾಗಲೇ ಗೊಂದಲದಲ್ಲಿರುವ ಭಾಷಾ ವಿವಾದಕ್ಕೆ ಹೊಸ ಆಯಾಮ ಜೋಡಿಸುವುದರಲ್ಲಿ ಸಂಶಯವಿಲ್ಲ.

ಸ್ಥಳೀಯ ಭಾಷೆಗೆ ಆದ್ಯತೆ ನೀಡಬೇಕು ಎನ್ನುವ ಆಗ್ರಹದಲ್ಲಿ ತಪ್ಪಿಲ್ಲ. ಆದರೆ, ಈ ಮಧ್ಯೆ ಯಾವುದೋ ‘ಇಸಂ’ ಮತ್ತು ರಾಷ್ಟ್ರೀಯತೆ ಹೆಸರಿನಲ್ಲಿ ಬ್ಯಾಂಕುಗಳಲ್ಲಿ ಹಿಂದಿ ಭಾಷೆಯನ್ನು ತುರುಕುತ್ತಿರುವುದು ಈ ಬೆಳವಣಿಗೆಗೆ ಕಾರಣ ಎನ್ನಲಾಗುತ್ತಿದೆ. ಭಾಷಾ ವಿವಾದಗಳಿಗೆ ದಕ್ಷಿಣದವರನ್ನು ಮಾತ್ರ ಹೊಣೆಯಾಗಿಸುವವರು ತಿರುಗಿ ನೋಡುವಂತಾಗಿದೆ.

**ರಮಾನಂದ ಶರ್ಮಾ,** ಬೆಂಗಳೂರು

### ಬಂಡೀಪುರ ಹೆದ್ದಾರಿ: ನಿಷೇಧ ತೆರವು ಬೇಡ

ಬಂಡೀಪುರ ಮಾರ್ಗವಾಗಿ ಕೇರಳದ ವಯನಾಡುವಿಗೆ ಸಂಪರ್ಕ ಕಲ್ಪಿಸುವ ಹೆದ್ದಾರಿಯಲ್ಲಿ ರಾತ್ರಿ ವಾಹನ ಸಂಚಾರ ನಿಷೇಧ ತೆರವು ಬೇಡ ಎಂದು ಚಾಮರಾಜನಗರದಲ್ಲಿ ಪರಿಸರವಾದಿಗಳು ಸಾಂಕೇತಿಕ ಪ್ರತಿಭಟನೆ ನಡೆಸಿರುವುದು ಶ್ಲಾಘನೀಯ. ಇತ್ತೀಚಿನ ವರ್ಷಗಳಲ್ಲಿ ನಮ್ಮ ರಾಜ್ಯದಲ್ಲಿ ಹುಲಿಗಳ ಸಂಖ್ಯೆಯಲ್ಲಿ ತುಸು ಕಡಿಮೆ ಆಗಿರುವುದು ನಮ್ಮ ಅರಣ್ಯ ಸಚಿವರಿಗೆ ಗೊತ್ತಿರುವ ವಿಷಯವೇ ಆಗಿದೆ. ಆದರೂ ಅವರು ಇತ್ತೀಚೆಗೆ ದೆಹಲಿಯಲ್ಲಿ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹಾದುಹೋಗುವ ಎರಡು ರಾಷ್ಟ್ರೀಯ ಹೆದ್ದಾರಿಗಳಲ್ಲಿ ರಾತ್ರಿ ಸಂಚಾರ ಕುರಿತು ಮುಖ್ಯಮಂತ್ರಿ ಜತೆ ಸಮಾಲೋಚಿಸಿ, ಕಾನೂನು ತಜ್ಞರ ಅಭಿಪ್ರಾಯ ಪಡೆದು ಸರ್ವಸಮ್ಮತ ನಿರ್ಧಾರ ಕೈಗೊಳ್ಳಲಾಗುವುದು ಎಂದು ಹೇಳಿರುವುದು ಬೇಸರದ ವಿಷಯ.

ವಯನಾಡು ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಲೋಕಸಭಾ ಉಪಚುನಾವಣೆಯ ಸಂದರ್ಭದಲ್ಲಿ ವಯನಾಡು ಕ್ಷೇತ್ರದ ಜನರಿಗೆ ನಿಷೇಧ ತೆರವು ಆಶ್ವಾಸನೆಯನ್ನು ನೀಡಿದ್ದರೆಂಬ ಮಾತಿದೆ. ಅದನ್ನು ಈಡೇರಿಸುವ ಸಲುವಾಗಿ ರಾತ್ರಿ ವೇಳೆ ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರೆ, ಅರಣ್ಯದಲ್ಲಿ ಸ್ವಚ್ಛಂದವಾಗಿ ರಾತ್ರಿ ವೇಳೆ ಓಡಾಡುವ ವನ್ಯಜೀವಿಗಳ ರಕ್ಷಣೆಗೆ ತೊಡಕಾಗುವುದರಲ್ಲಿ ಸಂಶಯವಿಲ್ಲ ಹಾಗೂ ಅವುಗಳ ಸಂತತಿ ಕ್ಷೀಣಿಸುತ್ತಾ ಹೋಗಿ ಪರಿಸರದ ಮೇಲೆ ವ್ಯತಿರಿಕ್ತ ಪರಿಣಾಮ ಆಗಬಹುದು. ಈ ತಿಂಗಳ 6 ರಂದು ಇದೇ ವಿಷಯಕ್ಕೆ ಸಂಬಂಧಿಸಿದಂತೆ, ವಿವಿಧೆಡೆಯ ಪರಿಸರ ಪ್ರೇಮಿಗಳು ರಾಷ್ಟ್ರೀಯ ಹೆದ್ದಾರಿ 766ರಲ್ಲಿ ಮೂರು ಕಿ.ಮೀ. ದೂರ ಪಾದಯಾತ್ರೆ ಹಮ್ಮಿಕೊಂಡಿದ್ದಾರೆ, ನಮ್ಮ ರಾಜ್ಯ ಸರ್ಕಾರ ಯಾವುದೇ ಒತ್ತಡಕ್ಕೂ ಮಣಿಯಬಾರದು. ನಿಷೇಧ ಮುಂದುವರಿಸಬೇಕು.

**ಬೆಸಗರಹಳ್ಳಿ ರವಿಪ್ರಸಾದ್,** ಮೈಸೂರು

## 25 ವರ್ಷಗಳ ಹಿಂದೆ

ಬುಧವಾರ, 5-4-2000

**• ರಾಬ್ಡಿ, ಲಾಲೂ ಬಂಧನಕ್ಕೆ ವಾರಂಟ್**

**ಪಟ್ನಾ, ಏ. 4 (ಪಿಟಿಐ)**- ಬಿಹಾರದ ಮುಖ್ಯಮಂತ್ರಿ ರಾಬ್ಡಿದೇವಿ ಹಾಗೂ ಆರ್‌ಜೆಡಿ ಅಧ್ಯಕ್ಷ ಲಾಲೂ ಪ್ರಸಾದ್ ಅವರ ಬಂಧನಕ್ಕೆ ಇಲ್ಲಿನ ಸಿಬಿಐ ನ್ಯಾಯಾಲಯ ಇಂದು ಜಾಮೀನುರಹಿತ ವಾರಂಟ್ ಹೊರಡಿಸಿದೆ.

ನಿಗದಿತ ಆದಾಯ ಮೀರಿ ಆಸ್ತಿ ಮಾಡಿದ್ದಾರೆಂಬ ಪ್ರಕರಣ ಕುರಿತು ವಿಚಾರಣೆ ನಡೆಸುತ್ತಿರುವ ಸಿಬಿಐ ನ್ಯಾಯಾಲಯದ ನಿಯೋಜಿತ ನ್ಯಾಯಾಧೀಶ ಎಸ್.ಕೆ.ಲಾಲ್ ಈ ಸಂಬಂಧ ಆದೇಶ ಹೊರಡಿಸಿದ್ದಾರೆ.

ನ್ಯಾಯಾಲಯ ಬಂಧನ ವಾರಂಟ್ ಹೊರಡಿಸಿದ್ದರಿಂದಾಗಿ, ಮೂರು ವಾರಗಳ ಹಿಂದಷ್ಟೇ ಅಧಿಕಾರಕ್ಕೆ ಬಂದ ರಾಬ್ಡಿದೇವಿ ನೇತೃತ್ವದ ಸರ್ಕಾರ ತೀವ್ರ ಬಿಕ್ಕಟ್ಟಿಗೆ ಸಿಕ್ಕಿದೆ. ಮುಖ್ಯಮಂತ್ರಿ ಸ್ಥಾನಕ್ಕೆ ರಾಬ್ಡಿ ರಾಜೀನಾಮೆ ನೀಡಬೇಕು ಎಂದು ಎನ್‌ಡಿಎ ಆಗ್ರಹಿಸಿದೆ. ‘ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ’ ಎಂದು ಲಾಲೂ ಪ್ರಸಾದ್ ಹೇಳಿದ್ದಾರೆ.

**• ಪಶ್ಚಿಮ ಘಟ್ಟ ಅಭಿವೃದ್ಧಿ: 76 ಹುದ್ದೆ ರದ್ದು**

**ಬೆಂಗಳೂರು, ಏ. 4**- ಇಂಗ್ಲೆಂಡಿನ ಸಾಗರೋತ್ತರ ಅಭಿವೃದ್ಧಿ ಸಂಸ್ಥೆಯ ಆರ್ಥಿಕ ನೆರವಿನೊಂದಿಗೆ ಕೈಗೊಂಡಿದ್ದ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮವು ಇದೇ ಮಾರ್ಚ್ 31ರಂದು ಪೂರ್ಣಗೊಂಡಿರುವುದರಿಂದ 76 ಹುದ್ದೆಗಳನ್ನು ರದ್ದುಗೊಳಿಸಲು ಸರ್ಕಾರ ನಿರ್ಧರಿಸಿದೆ ಎಂದು ಅರಣ್ಯ ಸಚಿವ ಕೆ.ಎಚ್.ರಂಗನಾಥ್ ಇಂದು ಇಲ್ಲಿ ತಿಳಿಸಿದರು.

ಜಪಾನ್ ನೆರವಿನ ಸಾಗರೋತ್ತರ ಆರ್ಥಿಕ ಸಹಕಾರ ನಿಧಿ (ಒಇಸಿಎಫ್) ಯೋಜನೆ ಹಾಗೂ ಇತರೆ ಇಲಾಖೆಗಳಿಗೆ 109 ಮಂದಿ ಅಧಿಕಾರಿಗಳನ್ನು ವರ್ಗಾಯಿಸಲಾಗುವುದು. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಮೂರು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ 16 ವಲಯ ಅರಣ್ಯ ಅಧಿಕಾರಿಗಳ ಹುದ್ದೆಗಳು ಸೇರಿವೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಪಶ್ಚಿಮ ಘಟ್ಟಗಳ ಯೋಜನೆ ಅನುಷ್ಠಾನಕ್ಕಾಗಿ ಸರ್ಕಾರವು 235 ಹುದ್ದೆಗಳನ್ನು ರಚಿಸಿತ್ತು. ಈ 235 ಹುದ್ದೆಗಳಲ್ಲಿ 65 ಹುದ್ದೆಗಳನ್ನು ಉಳಿಸಿಕೊಂಡು, 139 ಮಂದಿ ಅಧಿಕಾರಿಗಳನ್ನು ಇತರ ಇಲಾಖೆಗಳಿಗೆ ವರ್ಗಾವಣೆ ಮಾಡಿ 76 ಹುದ್ದೆಗಳನ್ನು ರದ್ದುಗೊಳಿಸಿದೆ ಎಂದರು.

## 50 ವರ್ಷಗಳ ಹಿಂದೆ

ಶನಿವಾರ, 5-4-1975

**• ಉಪವಾಸ ಮುಷ್ಕರಕ್ಕೆ ಮುರಾರ್ಜಿ ಬಿಗಿ ಪಟ್ಟು**

**ನವದೆಹಲಿ, ಏ. 4**- ಗುಜರಾತ್ ವಿಧಾನಸಭೆಗೆ ಚುನಾವಣೆ ನಡೆಯಬೇಕಾದ ಕಾಲದ ಬಗ್ಗೆ ಸಂಸ್ಥಾ ಕಾಂಗ್ರೆಸ್ಸಿನ ಮುರಾರ್ಜಿ ದೇಸಾಯಿ ಮತ್ತು ಪ್ರಧಾನಿ ಇಂದಿರಾ ಗಾಂಧಿ ತಮ್ಮ ಪಟ್ಟು ಸಡಿಲಿಸದ ಕಾರಣ ಇಂದು ಮಾತುಕತೆಗಳು ವಿಫಲವಾದವು.

ಚುನಾವಣೆಗೆ ಮೂರು- ನಾಲ್ಕು ತಿಂಗಳ ವ್ಯತ್ಯಾಸವು ಉಪವಾಸಕ್ಕೆ ಕಾರಣ ಆಗಬಾರದು ಎಂದು ಇಂದಿರಾ ಗಾಂಧಿ ಅವರು ಹೇಳಿದರೆ, ಮೇ ತಿಂಗಳ ಕೊನೆಯ ಮುನ್ನ ಚುನಾವಣೆ ನಡೆಸದಿದ್ದರೆ ‘ಆಮರಣಾಂತ ಉಪವಾಸ’ ಮಾಡುವ ತಮ್ಮ ನಿರ್ಧಾರವನ್ನು ಮುರಾರ್ಜಿ ಮತ್ತೆ ಸ್ಪಷ್ಟಪಡಿಸಿದರು.

ಏಪ್ರಿಲ್ 7ರಂದು ಆರಂಭಿಸಲು ಉದ್ದೇಶಿಸಿರುವ ಅನಿರ್ದಿಷ್ಟ ಕಾಲದ ಉಪವಾಸವನ್ನು ಮುಂದಕ್ಕೆ ಹಾಕುವ ಪ್ರಶ್ನೆಯೇ ಇಲ್ಲ ಎಂದು ಸುದ್ದಿಗಾರರಿಗೆ ಅವರು ತಿಳಿಸಿದರು.

**• ಉಪಸಭಾಪತಿ ರಾಜೀನಾಮೆ**

**ಬೆಂಗಳೂರು, ಏ. 4**- ವಿಧಾನ ಪರಿಷತ್ತಿನ ಉಪಸಭಾಪತಿ ಸ್ಥಾನಕ್ಕೆ ಟಿ.ಎನ್. ನರಸಿಂಹಮೂರ್ತಿ ಅವರು ಇಂದು ರಾಜೀನಾಮೆ ನೀಡಿದರು.

ನರಸಿಂಹಮೂರ್ತಿ ಅವರು ರಾಜೀನಾಮೆ ಬರೆದಿರುವ ಪತ್ರ ತಮಗೆ ತಲುಪಿದೆಯೆಂದೂ ತಾವು ಅದನ್ನು ಅಂಗೀಕಾರ ಮಾಡಿರುವುದಾಗಿಯೂ ಸಭಾಪತಿ ಎಂ.ವಿ.ವೆಂಕಟಪ್ಪ ಅವರು ವಿಧಾನ ಪರಿಷತ್ತಿನಲ್ಲಿ ಪ್ರಶ್ನೋತ್ತರ ವೇಳೆಯ ನಂತರ ಪ್ರಕಟಿಸಿದರು.

ವಿರೋಧ ಪಕ್ಷದ ನಾಯಕ ರಾಮಕೃಷ್ಣ ಹೆಗಡೆ ಅವರು ಆ ಬಗ್ಗೆ ಏನನ್ನೋ ಹೇಳಲು ಎದ್ದು ನಿಂತರು.

ತತ್‌ಕ್ಷಣ ಸಭಾನಾಯಕ ಹುಚ್ಚಮಾಸ್ತಿ ಗೌಡ ಅವರು ಕ್ರಿಯಾಲೋಪ ಎತ್ತಿದರು.

‘ರಾಜೀನಾಮೆ ಸ್ವೀಕೃತವಾಗಿದೆ ಎಂದು ಸಭಾಪತಿಗಳು ಪ್ರಕಟಿಸಿದ್ದಾರೆ’ ಎಂದು ಸಚಿವ ಎಸ್.ಎಂ. ಕೃಷ್ಣ ಅವರು ಹೇಳಿದರು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. 

## ವಕ್ಫ್ ತಿದ್ದುಪಡಿ ಮಸೂದೆಯಿಂದ ಮುಸ್ಲಿಂ ಸಮುದಾಯಕ್ಕೆ ಅನುಕೂಲವೇ ಅನನುಕೂಲವೇ?

# ಸಂವಿಧಾನ ಆಶಯಕ್ಕೆ ಧಕ್ಕೆ



2014ರಿಂದ ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿಯು ಆರ್‌ಎಸ್‌ಎಸ್‌ನ ಗುಪ್ತ ಕಾರ್ಯಸೂಚಿಗಳನ್ನು ವ್ಯವಸ್ಥಿತವಾಗಿ ಜಾರಿಗೊಳಿಸುತ್ತಿದೆ. ಭಾರತದಲ್ಲಿ ಮುಸ್ಲಿಮರನ್ನು ಮತ್ತು ಇತರ ಹಿಂದೂಯೇತರ ಸಮುದಾಯಗಳನ್ನು ರಾಷ್ಟ್ರದ ಎರಡನೇ ದರ್ಜೆ ಪ್ರಜೆಗಳನ್ನಾಗಿ ಕಾಣುವ ಕಾರ್ಯಸೂಚಿಯ ಮುಂದುವರಿದ ಭಾಗವೇ ವಕ್ಫ್ ತಿದ್ದುಪಡಿ ಮಸೂದೆ. ಸಂಘ ಪರಿವಾರದ ಮೂಲಭೂತವಾದಕ್ಕೆ ಅನುಗುಣವಾಗಿ ಮುಸ್ಲಿಮರ ವಿರುದ್ಧ ರಾಜಕೀಯ ಹುನ್ನಾರ, ಧಾರ್ಮಿಕ ದ್ವೇಷ, ಅಸೂಯೆ ಎಲ್ಲವೂ ಈ ಮಸೂದೆಯಲ್ಲಿ ಅಡಗಿವೆ

ಪ್ರಜಾವಾಣಿ ಚರ್ಚೆ

• ರಮೇಶ್ ಬಾಬು

ವೈವಿಧ್ಯದಲ್ಲಿ ಏಕತೆಯನ್ನು ಪ್ರತಿಪಾದಿಸಿಕೊಂಡಿರುವ ವಿಶ್ವದ ಅತಿ ದೊಡ್ಡ ರಾಷ್ಟ್ರ ಭಾರತ. ಭಾರತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ನೇತೃತ್ವದಲ್ಲಿ ಸ್ವಾತಂತ್ರ್ಯವನ್ನು ಗಳಿಸಿ, ಜನತಂತ್ರ ವ್ಯವಸ್ಥೆಯನ್ನು ಅಳವಡಿಸಿಕೊಂಡು ಡಾ.ಬಿ.ಆರ್.ಅಂಬೇಡ್ಕರ್ ಅವರ ನಾಯಕತ್ವದಲ್ಲಿ ದೊರೆತ ಸಂವಿಧಾನವನ್ನು ಅನುಸರಣೆ ಮಾಡಿಕೊಂಡು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಗಟ್ಟಿ ಮಾಡಿಕೊಂಡ ನಮ್ಮ ದೇಶ ಈಗ ಹೋಗುತ್ತಿರುವ ದಾರಿ ಅಪಾಯಕಾರಿಯಾಗಿದೆ.

ನಮ್ಮ ದೇಶದ ವಕ್ಫ್ ಕಾಯ್ದೆಗೆ ಶತಮಾನದ ಇತಿಹಾಸವಿದೆ. ಬ್ರಿಟಿಷರ ಕಾಲದಲ್ಲೇ ವಕ್ಫ್ ಆಸ್ತಿಗಳನ್ನು ಕಾಯ್ದೆಯ ವ್ಯಾಪ್ತಿಗೆ ತರಲಾಗಿತ್ತು. ಅಂತಿಮವಾಗಿ 1995ರ ಕಾಯ್ದೆಯ ಮುಖಾಂತರ ದೇಶದಲ್ಲಿರುವ ವಕ್ಫ್ ಆಸ್ತಿಗಳನ್ನು ಸಂರಕ್ಷಣೆ ಮಾಡಲು ಕೇಂದ್ರ ವಕ್ಫ್ ಕೌನ್ಸಿಲ್, ರಾಜ್ಯ ವಕ್ಫ್ ಮಂಡಳಿ ಮತ್ತು ವಕ್ಫ್ ಟ್ರಿಬ್ಯೂನಲ್‌ಗಳು ರಚನೆಯಾದವು. ಮುಸ್ಲಿಂ ಸಮುದಾಯದ ಬಡವರ ಮತ್ತು ದುರ್ಬಲ ವರ್ಗದವರ ಪ್ರಯೋಜನಕ್ಕಾಗಿ ದೇವರ ಹೆಸರಿನಲ್ಲಿ ದಾನ ಮಾಡುವ ಆಸ್ತಿಗಳೇ ವಕ್ಫ್ ಆಸ್ತಿಗಳಾಗಿವೆ. ಮುಸ್ಲಿಂ ಸಮುದಾಯದ ಪ್ರಯೋಜನಕ್ಕಾಗಿ ಮೌಖಿಕವಾಗಿ ಅಥವಾ ಲಿಖಿತವಾಗಿ ನೂರಾರು ವರ್ಷಗಳಿಂದ ವಕ್ಫ್ ಹೆಸರಿನಲ್ಲಿ ಮುಸ್ಲಿಮರು ಅಥವಾ ಅಲ್ಲದವರೂ ಆಸ್ತಿಗಳನ್ನು ದಾನವಾಗಿ ನೀಡುತ್ತಾ ಬಂದಿದ್ದಾರೆ. ಸಮಾಜದ ಇತರೆ ವಾಹಿನಿಗಳಲ್ಲಿ ಕಂಡುಬರುವ ಲೋಪಗಳ ರೀತಿಯಲ್ಲಿ ವಕ್ಫ್ ಆಸ್ತಿಯ ನಿರ್ವಹಣೆ ಮತ್ತು ಸಂರಕ್ಷಣೆಯಲ್ಲಿ ಕೆಲವು ಲೋಪಗಳು ಆಗಿರಬಹುದು. ಆದರೆ, ಒಲ್ಲದವರಿಗೆ ಮೊಸರಲ್ಲಿ ಕಲ್ಲು ಎಂಬಂತೆ ಮುಸ್ಲಿಮರನ್ನು ಗುರಿಯಾಗಿಸಿಕೊಂಡು ವಕ್ಫ್ ಕಾಯ್ದೆ ತಿದ್ದುಪಡಿಯ ಹೆಸರಿನಲ್ಲಿ ಕೇಂದ್ರ ಸರ್ಕಾರ ಇಡೀ ವಕ್ಫ್ ಆಸ್ತಿಯನ್ನು ಸರ್ಕಾರದ ಹಿಡಿತಕ್ಕೆ ತೆಗೆದುಕೊಳ್ಳುವ ವ್ಯವಸ್ಥಿತವಾದ ಪಿತೂರಿ ನಡೆಸಿದೆ.

ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ತಮ್ಮ ಸಂಘಟನೆ ಬಲಯುತವಾಗಿ ಇಲ್ಲದ ಕಾರಣ ಸಂಘ ಪರಿವಾರ ಮತ್ತು ಹಿಂದೂ ಮಹಾಸಭಾಗಳು ಬ್ರಿಟಿಷರೊಂದಿಗೆ ಶಾಮೀಲಾಗಿ ಮೂಲಭೂತವಾದಕ್ಕೆ ಪೂರಕವಾಗಿ ಹಿಂದೂ ರಾಷ್ಟ್ರದ ಘೋಷಣೆಯ ಆಲೋಚನೆಯನ್ನು ಪ್ರತಿಪಾದಿಸಿದ್ದವು. ಇದೇ ಕಾರಣಕ್ಕಾಗಿ ತ್ರಿವರ್ಣ ಧ್ವಜವನ್ನು ವಿರೋಧಿಸಿ ಹಿಂದೂ ರಾಷ್ಟ್ರಕ್ಕೆ ಕೇಸರಿ ಧ್ವಜ ಮತ್ತು ಹಿಂದೂ ಧಾರ್ಮಿಕ ಆಚರಣೆಗಳಿಗೆ ಪೂರಕವಾದ ಮನುಸ್ಮೃತಿ ಆಧಾರಿತ ಕಾನೂನು ಬೇಕು ಎಂದು ಆಗ್ರಹವಾಗಿ ಹೇಳಿದ್ದವು. ಆದರೆ ಮಹಾತ್ಮ ಗಾಂಧಿ, ಜವಾಹರಲಾಲ್ ನೆಹರೂ, ವಲ್ಲಭ ಭಾಯಿ ಪಟೇಲ್, ಡಾ.ಅಂಬೇಡ್ಕರ್ ಹಾಗೂ ಇತರ ರಾಷ್ಟ್ರೀಯ ನಾಯಕರ ಜನಾಂದೋಲನ ಧ್ವನಿಗೆ ಅನುಗುಣವಾಗಿ ಸರ್ವಧರ್ಮಗಳನ್ನೂ ಒಳಗೊಂಡ, ಒಕ್ಕೂಟ ವ್ಯವಸ್ಥೆಯ ವೈವಿಧ್ಯದಲ್ಲಿ ಏಕತೆಯನ್ನು ಸಾರುವ ಜಾತ್ಯತೀತ ರಾಷ್ಟ್ರಕ್ಕೆ ಸಂವಿಧಾನದ ಮೂಲಕ ಅವಕಾಶ ಕಲ್ಪಿಸಲಾಯಿತು.

ಭಾರತದ ಅನೇಕ ಸಾರ್ವತ್ರಿಕ ಚುನಾವಣೆಗಳಲ್ಲಿ ಜನರ ತಿರಸ್ಕಾರಕ್ಕೆ ಒಳಗಾಗಿದ್ದ ಅಂದಿನ ಜನಸಂಘ ಮತ್ತು ಇಂದಿನ ಬಿಜೆಪಿ, ಬೇರೆ ಬೇರೆ ಕಾರಣಗಳಿಗೆ ಹಿಂದೆ ತಮ್ಮ ರಹಸ್ಯ ಕಾರ್ಯಸೂಚಿಗಳನ್ನು ಕೈಬಿಟ್ಟಿದ್ದವು. 2014ರ ಲೋಕಸಭಾ ಚುನಾವಣೆಯ ನಂತರ ಕೇಂದ್ರದಲ್ಲಿ ಅಧಿಕಾರ ಪಡೆದಿರುವ ಬಿಜೆಪಿ, ಈಗ ಆರ್‌ಎಸ್‌ಎಸ್‌ನ ಗುಪ್ತ ಕಾರ್ಯಸೂಚಿಗಳನ್ನು ವ್ಯವಸ್ಥಿತವಾಗಿ ಜಾರಿಗೊಳಿಸುತ್ತಿದೆ. ಭಾರತದಲ್ಲಿ ಮುಸ್ಲಿಮರನ್ನು ಮತ್ತು ಇತರೆ ಹಿಂದೂಯೇತರ ಸಮುದಾಯಗಳನ್ನು ರಾಷ್ಟ್ರದ ಎರಡನೇ ದರ್ಜೆ ಪ್ರಜೆಗಳನ್ನಾಗಿ ಕಾಣುವ ಕಾರ್ಯಸೂಚಿಯ ಮುಂದುವರಿದ ಭಾಗವೇ ವಕ್ಫ್ ತಿದ್ದುಪಡಿ ಮಸೂದೆ.

ನ್ಯಾ.ಸಾಚಾರ್ ಸಮಿತಿ ವರದಿಗೆ ಅನುಗುಣವಾಗಿ ದೇಶದ ಮುಸ್ಲಿಮರ ಸಾಮಾಜಿಕ ಅಭಿವೃದ್ಧಿಗೆ ಚಿಂತಿಸದ ಕೇಂದ್ರದ ಬಿಜೆಪಿ ಸರ್ಕಾರ, ಪೌರತ್ವ ಕಾಯ್ದೆ, ಜಮ್ಮು ಕಾಶ್ಮೀರದ ವಿಶೇಷ ಸ್ಥಾನಮಾನ ರದ್ದತಿ, ಹಿಜಾಬ್, ಹಲಾಲ್ ಹೆಸರಿನಲ್ಲಿ ಮುಸ್ಲಿಮರನ್ನು ಸಮಾಜ ವಾಹಿನಿಯಿಂದ ದೂರ ತಳ್ಳುವ ಪ್ರಯತ್ನ ಮಾಡುತ್ತಿದೆ. ಈಗ ಸಂಸತ್ತಿನಲ್ಲಿ ಅಂಗೀಕಾರವಾಗಿರುವ ವಕ್ಫ್ ತಿದ್ದುಪಡಿ ಮಸೂದೆಯು ಸಂವಿಧಾನದ 26ನೇ ವಿಧಿ ಮತ್ತು ಧಾರ್ಮಿಕ ದತ್ತಿ ಕಾಯ್ದೆಗೆ ವಿರುದ್ಧವಾಗಿದೆ. ತಿದ್ದುಪಡಿ ಮಸೂದೆಯು ಸುಪ್ರೀಂ ಕೋರ್ಟ್‌ನ ವಕ್ಫ್ ಕಾಯ್ದೆಯ ತೀರ್ಪುಗಳಿಗೆ ಅನುಗುಣವಾಗಿ ಇಲ್ಲ. 2013ರ ತಿದ್ದುಪಡಿಯ ಮೂಲಕ ಜಾರಿಗೊಳಿಸಲಾಗಿದ್ದ ಕೆಲವು ಕಲಂಗಳನ್ನು ಕೈಬಿಡುವುದರ ಮೂಲಕ ವಕ್ಫ್ ಮಸೂದೆಯನ್ನು ದುರ್ಬಲಗೊಳಿಸಲಾಗಿದೆ. ಮಸೂದೆಯಿಂದ ಬಾಧಿತರಾಗುವ ಮುಸ್ಲಿಮರನ್ನು, ಮುಸ್ಲಿಂ ಸಂಘಟನೆಗಳನ್ನು ಮತ್ತು ಮುಸ್ಲಿಂ ಸಮುದಾಯವನ್ನು ಪರಿಗಣಿಸಿ ಅವರ ಅಭಿಪ್ರಾಯಗಳಿಗೆ ಮಾನ್ಯತೆ ನೀಡಿಲ್ಲ. ಈ ಮಸೂದೆಯ ಮುಖಾಂತರ ಮುಸ್ಲಿಂ ಸಮುದಾಯದ ವಿರುದ್ಧ ನಡೆಸಿರುವ ಹುನ್ನಾರ ಬಹಿರಂಗವಾಗಿ ಕಾಣುತ್ತಿದೆ. ವಕ್ಫ್ ಮಸೂದೆ ಹೆಸರಿನಲ್ಲಿ ಧಾರ್ಮಿಕವಾಗಿ ಮುಸ್ಲಿಂ ಸಮುದಾಯವನ್ನು ಶೋಷಣೆ ಮಾಡುವ ಕೆಲಸವನ್ನು ಮಾಡಲಾಗಿದೆ. ತಿದ್ದುಪಡಿ ಮಸೂದೆಯ ಹೆಸರಿನಲ್ಲಿ ವಕ್ಫ್ ಆಸ್ತಿಯ ಮೇಲೆ ಹಿಡಿತವನ್ನು ಹೊಂದುವ ಪ್ರಯತ್ನವನ್ನು ಕೇಂದ್ರ ಸರ್ಕಾರ ಮಾಡಿದೆ. ಆಸ್ತಿಯನ್ನು ದಾನ ಮಾಡಲು ಕನಿಷ್ಠ 5 ವರ್ಷ ಇಸ್ಲಾಂ ಧರ್ಮ ಆಚರಣೆ ಮಾಡಿರಬೇಕೆಂಬ ನಿಯಮ ಹಾಸ್ಯಾಸ್ಪದವಾಗಿದೆ. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಗಳಿಗೆ ಇದ್ದಂತಹ ಅಧಿಕಾರವನ್ನು ಕಸಿಯುವ ಪ್ರಯತ್ನವನ್ನು ಮಾಡಲಾಗಿದೆ. ಒಟ್ಟಾರೆಯಾಗಿ ತಿದ್ದುಪಡಿ ಮಸೂದೆಯು ಸಂವಿಧಾನದ ಮೂಲ ಆಶಯಗಳಿಗೆ ವಿರುದ್ಧವಾಗಿದೆ.

1987ರಲ್ಲಿ ಬೊಫೋರ್ಸ್ ಹಗರಣಕ್ಕೆ ಸಂಬಂಧಪಟ್ಟಂತೆ ಸಂಸತ್ ಮೊದಲ ಜಂಟಿ ಸಂಸದೀಯ ಸಮಿತಿಯನ್ನು ರಚಿಸಿತು. ವಕ್ಫ್ ಕಾಯ್ದೆಯ ತಿದ್ದುಪಡಿಗೆ ಸಂಬಂಧಪಟ್ಟಂತೆ ಬಿಜೆಪಿ ಸಂಸದರಾದ ಜಗದಾಂಬಿಕಾ ಪಾಲ್ ಅಧ್ಯಕ್ಷತೆಯಲ್ಲಿ ಉದ್ದೇಶಿತ ತಿದ್ದುಪಡಿ ಮಸೂದೆಗೆ ಶಕ್ತಿ ತುಂಬುವ ಕಾರಣಕ್ಕಾಗಿ ಜಂಟಿ ಸದನ ಸಮಿತಿಯನ್ನು ರಚಿಸಲಾಯಿತು. ಸಮಿತಿಯು ಸುಮಾರು 111 ಗಂಟೆ ಚರ್ಚೆ ನಡೆಸಿ, 92 ಲಕ್ಷ ಇ–ಮೇಲ್ ಅಭಿಪ್ರಾಯ ಸಂಗ್ರಹಿಸಿದೆ. ಆದರೆ, ಸಮಿತಿಯಲ್ಲಿನ ವಿರೋಧ ಪಕ್ಷದ ಸದಸ್ಯರ ಅಭಿಪ್ರಾಯಗಳಿಗೆ ಮನ್ನಣೆ ನೀಡದೆ ಸಂಘ ಪರಿವಾರದ ಆಣತಿಯಂತೆ ಸಂಸತ್ತಿಗೆ ವರದಿ ಸಲ್ಲಿಸಿದೆ. ಸಮಿತಿಯಲ್ಲಿದ್ದ ವಿರೋಧ ಪಕ್ಷದ ಸದಸ್ಯರು ತಿದ್ದುಪಡಿ ಮಸೂದೆಯ 28 ಕಲಂಗಳನ್ನು ಕೈಬಿಡಲು ಲಿಖಿತವಾಗಿ ತಿಳಿಸಿದ್ದರೂ ಅದನ್ನು ಪರಿಗಣಿಸಲಾಗಿಲ್ಲ. ಮುಸ್ಲಿಮರ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸುವ ಮತ್ತು ಅವರ ಧಾರ್ಮಿಕ ಆಚರಣೆಗೆ ಧಕ್ಕೆ ತರುವ ಅಂಶಗಳನ್ನು ಮಸೂದೆಯಲ್ಲಿ ಸೇರಿಸಲಾಗಿದೆ. ವಕ್ಫ್ ಆಸ್ತಿ ಸಂರಕ್ಷಣಾ ಸಮಿತಿಯಲ್ಲಿ ಇಬ್ಬರು ಮುಸ್ಲಿಮೇತರರನ್ನು ನೇಮಕ ಮಾಡಲು ಅವಕಾಶ ನೀಡಿ ಜಿಲ್ಲಾಧಿಕಾರಿಗಳ ಮೂಲಕ ವಕ್ಫ್ ಆಸ್ತಿಯ ನಿರ್ವಹಣೆಯನ್ನು ಸರ್ಕಾರದ ತೆಕ್ಕೆಗೆ ತೆಗೆದುಕೊಂಡಿರುವುದು ನಾಚಿಕೆಗೇಡಿನ ಸಂಗತಿ. ಹಿಂದೂ ಧಾರ್ಮಿಕ ಕೇಂದ್ರಗಳಲ್ಲಿ, ಮಠ ಮಂದಿರಗಳಲ್ಲಿ, ಜೈನ ಮಂದಿರಗಳಲ್ಲಿ ಅಥವಾ ಗುರುದ್ವಾರದ ಸಮಿತಿಗಳಲ್ಲಿ ಇತರೆ ಸಮುದಾಯದವರು ನೇಮಕವಾಗಲು ಕಾನೂನಿನಲ್ಲಿ ಅವಕಾಶ ಇಲ್ಲದಿರುವಾಗ, ವಕ್ಫ್ ಆಸ್ತಿಯ ಸಮಿತಿಗಳಲ್ಲಿ ಮುಸ್ಲಿಮೇತರರನ್ನು ನೇಮಿಸುವುದರ ಹಿಂದೆ ರಾಜಕೀಯ ಹುನ್ನಾರ, ಧಾರ್ಮಿಕ ದ್ವೇಷ, ಅಸೂಯೆ ಎಲ್ಲವೂ ಮಿಳಿತಗೊಂಡಿವೆ. ಸಂಘ ಪರಿವಾರದ ಮೂಲಭೂತವಾದಕ್ಕೆ ಅನುಗುಣವಾಗಿ ಮುಸ್ಲಿಮರ ಮೇಲೆ ವಿಷ ಕಾರುವ, ಅವರನ್ನು ಈ ದೇಶದ ಎರಡನೇ ದರ್ಜೆಯ ಪ್ರಜೆಗಳನ್ನಾಗಿಸುವ ವ್ಯವಸ್ಥಿತ ಪ್ರಯತ್ನವನ್ನು ವಕ್ಫ್ ತಿದ್ದುಪಡಿ ಮಸೂದೆಯಲ್ಲಿ ಕಾಣಬಹುದು.

ಈ ಮಸೂದೆಯು ಸಂವಿಧಾನದ ಆಶಯಗಳಿಗೆ ಮಾರಕವಾಗಿದ್ದು, ಡಾ. ಅಂಬೇಡ್ಕರ್ ಅವರ ಪರಿಕಲ್ಪನೆಯ ಸರ್ವಧರ್ಮಗಳ ಸಂವಿಧಾನ ಭಾರತವನ್ನು ಒಡೆಯುವ ಪ್ರಯತ್ನ ಎನ್ನುವುದರಲ್ಲಿ ಅನುಮಾನವಿಲ್ಲ.

**ಲೇಖಕ:** ಕೆಪಿಸಿಸಿ ಮಾಧ್ಯಮ ಮತ್ತು ಸಂವಹನ ವಿಭಾಗದ ಅಧ್ಯಕ್ಷ

# ಬಡ ಮುಸ್ಲಿಮರ ಆಶಾಕಿರಣ



ವಕ್ಫ್‌ನಿಂದ ಬರುವ ಆದಾಯದ ಮೂಲಕ ಮುಸ್ಲಿಂ ಹೆಣ್ಣುಮಕ್ಕಳಿಗೆ ವಿದ್ಯಾರ್ಥಿ ವೇತನ, ಆರೋಗ್ಯ ರಕ್ಷಣೆ ಮತ್ತು ತಾಯಂದಿರ ಕಲ್ಯಾಣ, ಮಹಿಳಾ ಉದ್ಯಮಿಗಳಿಗೆ ಕೌಶಲ ಅಭಿವೃದ್ಧಿ ಮತ್ತು ಕಿರುಬಂಡವಾಳ ಬೆಂಬಲ, ಫ್ಯಾಷನ್ ವಿನ್ಯಾಸ, ಆರೋಗ್ಯ ರಕ್ಷಣೆ ಮತ್ತು ಉದ್ಯಮ ಶೀಲತೆಯಂತಹ ಕ್ಷೇತ್ರಗಳಲ್ಲಿ ವೃತ್ತಿಪರ ತರಬೇತಿ, ವಿಧವೆಯರಿಗೆ ಪಿಂಚಣಿ, ಪಿತ್ರಾರ್ಜಿತ ವಿವಾದಗಳು ಮತ್ತು ಹಿಂಸಾಚಾರ ಪ್ರಕರಣಗಳಲ್ಲಿ ಕಾನೂನು ನೆರವು ನೀಡುವ ಉದ್ದೇಶವನ್ನು ಹೊಸ ಮಸೂದೆ ಹೊಂದಿದೆ

• ಅರವಿಂದ ಬೆಲ್ಲದ

ಸ್ವಾತಂತ್ರ್ಯ ಪೂರ್ವದಿಂದಲೇ ತನ್ನ ಕರಾಳ ಅಸ್ತಿತ್ವವನ್ನು ಬಿಗಿಯಾಗಿ ಉಳಿಸಿಕೊಂಡು ಬಂದಿದ್ದ ವಕ್ಫ್ ಎಂಬ 'ದು–ಶಾಸನ'ವೊಂದು ಕೊನೆಗೂ ಭಾರತೀಯ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಆಶಯಕ್ಕೆ ಅನುಗುಣವಾಗಿ ತಿದ್ದುಪಡಿಗೊಂಡಿದೆ. ಕಠಿಣ ಪದಗಳಲ್ಲಿ ಹೇಳಬೇಕೆಂದರೆ, ಕರಾಳ ಕಾಯ್ದೆಯೊಂದು ಮಡಿದು ಬೀಳುವ ಹಂತ ತಲುಪಿದೆ. ಸ್ವಾತಂತ್ರ್ಯ ಬಂದ ಬಳಿಕವೂ ಕಾಂಗ್ರೆಸ್ ಸರ್ಕಾರದ ಮಡಿಲ ಕೂಸಾಗಿ ಉಳಿದುಕೊಂಡಿದ್ದ ವಕ್ಫ್ ಕಾಯಿದೆಗೆ ಏ.2ರಂದು ಲೋಕಸಭೆಯಲ್ಲಿ ಸೂಕ್ತ ತಿದ್ದುಪಡಿ ಮಾಡುವ ಮೂಲಕ ದೇಶದ ಸಾರ್ವಭೌಮತ್ವ ಹಾಗೂ ನೆಲದ ಕಾನೂನಿಗೆ ವ್ಯತಿರಿಕ್ತವಾದ ವಿಚಾರಗಳ ವಿರುದ್ಧ ನಿರ್ಣಾಯಕ ಗೆಲುವು ಸಾಧಿಸಿದಂತಾಗಿದೆ. ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಹಲವು ಗಂಟೆಗಳ ಸುದೀರ್ಘ ಚರ್ಚೆಯ ಬಳಿಕ ಅಂಗೀಕೃತಗೊಂಡ ಈ ಮಸೂದೆ ಇನ್ನು ಮುಂದೆ 'ಉಮೀದ್' ಎಂದು ಕರೆಸಿಕೊಳ್ಳಲಿದೆ.

ನಿರೀಕ್ಷೆಯಂತೆ ಕಾಂಗ್ರೆಸ್ ಹಾಗೂ ಅದರ ಮಿತ್ರಪಕ್ಷಗಳು ತಿದ್ದುಪಡಿಯನ್ನು ವಿರೋಧಿಸಿವೆ. ಅದು ನಿರೀಕ್ಷಿತವಷ್ಟೇ ಅಲ್ಲ, ಸಹಜವೂ ಹೌದು. ಏಕೆಂದರೆ, ಇಷ್ಟು ವರ್ಷ ತಾನು ಪೋಷಿಸಿ ಪೊರೆದುಕೊಂಡು ಬಂದ 'ಮತಬ್ಯಾಂಕ್'ನ ಪಟ್ಟಭದ್ರ ಹಿತಾಸಕ್ತಿಗಳನ್ನು ಕಳೆದುಕೊಳ್ಳುವುದಕ್ಕೆ ಕಾಂಗ್ರೆಸ್ ಹೇಗೆ ಮನಸ್ಸು ಮಾಡಲು ಸಾಧ್ಯ? ಆದರೆ, ಈ ತಿದ್ದುಪಡಿ ಮಸೂದೆ ಅಸಾಂವಿಧಾನಿಕ ಎಂದು ಹೇಳುವ ಕಾಂಗ್ರೆಸ್‌ನ ಆರೋಪವನ್ನು ಮಾತ್ರ ಪ್ರತಿರೋಧಿಸಬೇಕಾಗುತ್ತದೆ. ಏಕೆಂದರೆ, ವಕ್ಫ್ ಕಾಯ್ದೆಯಲ್ಲಿ ಇದ್ದ ಅನೇಕ ಅಂಶಗಳು ಅಸಾಂವಿಧಾನಿಕವಾಗಿದ್ದವು. ಮಾತ್ರವಲ್ಲ, ಅದು ಮುಸ್ಲಿಂ ಸಮುದಾಯದ ಬಡವರು, ಮಹಿಳೆಯರು ಹಾಗೂ ಅಶಕ್ತರ ಆಶಯಕ್ಕೆ ವಿರುದ್ಧವೂ, ಆ ಸಮುದಾಯದ ಪಟ್ಟಭದ್ರ ಹಿತಾಸಕ್ತಿಗಳಿಗೆ ಪೂರಕವೂ ಆಗಿತ್ತು. ಹೀಗಾಗಿ ಯಾವ ಮುಲಾಜಿಗೂ ಒಳಪಡದೆ ಕೇಂದ್ರ ಸರ್ಕಾರ ಈ ಕಾಯ್ದೆಯ ಸ್ವರೂಪ ಬದಲಾಯಿಸಿರುವುದು ಸ್ವತಂತ್ರ ಭಾರತದ ಇತಿಹಾಸದಲ್ಲೇ ಒಂದು ದಿಟ್ಟ ಕ್ರಮ. ಜಮ್ಮು- ಕಾಶ್ಮೀರಕ್ಕೆ ಇದೇ ಕಾಂಗ್ರೆಸ್ ಸರ್ಕಾರ ಕೊಟ್ಟಿದ್ದ ವಿಶೇಷಾಧಿಕಾರ ರದ್ದತಿ, ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ, ತ್ರಿವಳಿ ತಲಾಕ್ ರದ್ದತಿಯಂತಹ ಕ್ರಾಂತಿಕಾರಕ ನಿರ್ಣಯದ ಬಳಿಕ ಈ ದೇಶ ಕಂಡ ಅತ್ಯಂತ ಬಲಿಷ್ಠ ಹಾಗೂ ಮಹತ್ವದ ಮಸೂದೆ ಇದಾಗಿದೆ.

**ವಿಸ್ತೃತ ಚರ್ಚೆ:** ವಕ್ಫ್ ಕಾಯ್ದೆ ತಿದ್ದುಪಡಿಗೆ ಸಂಬಂಧಪಟ್ಟಂತೆ ಇಷ್ಟು ವಿಸ್ತೃತವಾದ ಚರ್ಚೆ ಹಾಗೂ ಅನುಸಂಧಾನ ಇತ್ತೀಚಿನ ವರ್ಷಗಳಲ್ಲಿ ನಡೆದ ನಿದರ್ಶನ ಇಲ್ಲ. ಈ ಸಂಬಂಧ ಜಗದಾಂಬಿಕಾ ಪಾಲ್ ನೇತೃತ್ವದಲ್ಲಿ ರಚಿಸಿದ್ದ ಸಂಸತ್ತಿನ ಜಂಟಿ ಸಮಿತಿ ಇಡೀ ದೇಶವನ್ನು ಪರ್ಯಟನೆ ಮಾಡಿ ವಸ್ತುಸ್ಥಿತಿಯ ಅಧ್ಯಯನ ನಡೆಸಿತ್ತು. 97.27 ಲಕ್ಷ ಅರ್ಜಿಗಳು ಹಾಗೂ ಮನವಿಗಳನ್ನು ಸೂಕ್ಷ್ಮವಾಗಿ ಅವಲೋಕನ ನಡೆಸಿತ್ತು. ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶದ 284 ನಿಯೋಗಗಳ ಜತೆಗೆ ಸಂವಾದ ನಡೆಸಿ ತನ್ನ ವರದಿಯನ್ನು ಸಂಸತ್ತಿಗೆ ಸಲ್ಲಿಸಿತ್ತು. ಇದರ ಮೇಲೆ ಕೇಂದ್ರ ಸಂಪುಟ ಸಭೆಯಲ್ಲೂ ಸುದೀರ್ಘ ಚರ್ಚೆ ನಡೆದ ಬಳಿಕವೇ ಸಂಸತ್ತಿನ ಎರಡೂ ಸದನಗಳಲ್ಲಿ ಮಂಡನೆ ಮಾಡಲಾಗಿತ್ತು. ಹೀಗಿರುವಾಗ ಕಾಂಗ್ರೆಸ್ ಆರೋಪಿಸುವಂತೆ 'ಉಮೀದ್' ಸಂವಿಧಾನ ವಿರೋಧಿಯಾಗಲು ಹೇಗೆ ಸಾಧ್ಯ?

ಭಾರತೀಯ ರೈಲ್ವೆ, ರಕ್ಷಣಾ ಇಲಾಖೆಯ ಬಳಿಕ ಅತಿ ಹೆಚ್ಚು ಆಸ್ತಿ ಇರುವುದು ವಕ್ಫ್ ಬೋರ್ಡ್ ಬಳಿ. ಸರ್ಕಾರಕ್ಕಿಂತಲೂ ಹೆಚ್ಚು ಆಸ್ತಿಯನ್ನು ಖಾಸಗಿಯವರು ಹೊಂದುವುದು ಹಾಗೂ ಅದರ ಉದ್ದೇಶಕ್ಕೆ ವ್ಯತಿರಿಕ್ತವಾಗಿ ಬಳಕೆ ಮಾಡುವುದು ಕಾಯ್ದೆಯ ಸ್ಪಷ್ಟ ಉಲ್ಲಂಘನೆಯಾಗಿದ್ದು, ರಾತ್ರೋರಾತ್ರಿ ಒಂದು ಜಾಗವನ್ನು ವಕ್ಫ್ ಎಂದು ಘೋಷಿಸಿ ಸ್ವಾಹಾ ಮಾಡುವ ಪ್ರಕರಣಗಳಿಗೆ ಇನ್ನು ಮುಂದೆ ತೆರೆ ಬೀಳಲಿದೆ.

**ಕರಾಳ ಹಾದಿ:** 'ವಕ್ಫ್'ನ ಮೂಲ ಭಾರತವಲ್ಲ. ಕ್ರಿ.ಪೂ 634ರಲ್ಲಿ ಪ್ರವಾದಿ ಮುಹಮ್ಮದ್ ಅವರ ಮಾರ್ಗದರ್ಶನದಲ್ಲಿ ಭೂಮಿಯ ಸದ್ಬಳಕೆಗಾಗಿ ಎರಡನೇ ಖಲೀಫಾ ಅವರು ಈ ನಿಯಮ ರೂಪಿಸಿದ್ದರು. ಇದು ಅರಬ್ ಜಗತ್ತಿನಲ್ಲಿ ಭೂದಾನದ ಪ್ರವೃತ್ತಿಗೆ ಚಾಲನೆ ನೀಡಿತು. ಭಾರತದಲ್ಲಿ ಇದು ಪ್ರವೇಶಿಸಿದ್ದು ಮಹಮ್ಮದ್ ಘೋರಿಯೊಂದಿಗೆ. ಪೃಥ್ವಿರಾಜ್ ಚೌಹಾಣನನ್ನು ಸೋಲಿಸಿದ ಬಳಿಕ ಅವನ ಸಾಮ್ರಾಜ್ಯದ ಸುತ್ತ ಮಸೀದಿಗಳನ್ನು ನಿರ್ಮಿಸಿ ಅದನ್ನು ವಕ್ಫ್ ಸ್ವತ್ತು (ಅಲ್ಲಾನ ಜಾಗ) ಎಂದು ಇಸ್ಲಾಮಿಕ್ ಧರ್ಮಗುರುಗಳು ಘೋಷಿಸಿದರು. ಮುಂದೆ ಎಲ್ಲ ಇಸ್ಲಾಮಿಕ್ ದೊರೆಗಳು ಇದನ್ನೇ ಮುಂದುವರಿಸಿದರು.

ಬ್ರಿಟಿಷರು ಆರಂಭದಲ್ಲಿ ಭಾರತದ ಧಾರ್ಮಿಕ ವಿದ್ಯಮಾನಗಳಲ್ಲಿ ತಟಸ್ಥವಾಗಿಯೇ ಇದ್ದರು. ಆದರೆ, ವಕ್ಫ್ ಮಂಡಳಿಯಲ್ಲಿನ ಆಂತರಿಕ ಕಲಹ, ಭ್ರಷ್ಟಾಚಾರ ಬ್ರಿಟಿಷರನ್ನು ತಲುಪಿದ್ದರಿಂದ 1828–29ರಲ್ಲಿ ಭೂ ಮರುಸ್ವಾಧೀನ ಕಾಯ್ದೆ (Land Resumption act) ಜಾರಿಗೆ ತಂದು ವಕ್ಫ್ ಸ್ವತ್ತುಗಳ ಮೇಲೆ ತೆರಿಗೆ ವಿಧಿಸಿದರು. 1923ರಲ್ಲಿ ಮುಸ್ಲಿಂ ಲೀಗ್ ಒತ್ತಡದ ಫಲವಾಗಿ ಬ್ರಿಟಿಷ್ ಸರ್ಕಾರ ವಕ್ಫ್ ಕಾಯ್ದೆಗೆ ನೀತಿಗಳನ್ನು ರೂಪಿಸಿತು. ಇದರ ಪರಿಣಾಮ ಬ್ರಿಟಿಷ್ ಆಡಳಿತದ ಎಲ್ಲ ರಾಜ್ಯಗಳಲ್ಲಿ ವಕ್ಫ್ ಮಂಡಳಿಗಳು ರಚನೆಗೊಂಡವು. 1954ರಲ್ಲಿ ಪ್ರಧಾನಿ ಜವಾಹರಲಾಲ್ ನೆಹರೂ ಅವರು ರಾಜ್ಯ ಮಟ್ಟದಲ್ಲಿ ವಕ್ಫ್ ಮಂಡಳಿ ರಚಿಸಲು ಅವಕಾಶ ಕಲ್ಪಿಸಿದರು. 1995ರಲ್ಲಿ ಅಂದಿನ ಪ್ರಧಾನಿ ಪಿ.ವಿ.ನರಸಿಂಹರಾವ್ ನೇತೃತ್ವದ ಸರ್ಕಾರ ಜಾರಿಗೆ ತಂದ ವಕ್ಫ್ ತಿದ್ದುಪಡಿ ಕಾಯ್ದೆ ಅನೇಕ ಅನಾಹುತಕಾರಿ ಅಂಶಗಳಿಂದ ಕೂಡಿತ್ತು. ಇದು ವಕ್ಫ್ ಶಕ್ತಿ ಹಾಗೂ ಭೂದಾಹ ಹೆಚ್ಚಳಕ್ಕೆ ಇನ್ನಿಲ್ಲದ ಅವಕಾಶ ಮಾಡಿಕೊಟ್ಟಿತು. ಮಂಡಳಿಯೊಳಗಿನ ಪಟ್ಟಭದ್ರರು ನಡೆಸುವ ಅವ್ಯವಹಾರ ಹಾಗೂ ಆಸ್ತಿಯ ಮಾರುಕಟ್ಟೆ ಮೌಲ್ಯಗಳೆರಡೂ ಈಗ ಹಲವು ಪಟ್ಟು ಹೆಚ್ಚಿದ್ದು, ಈ ವ್ಯವಸ್ಥೆಯನ್ನು ಸುಧಾರಿಸಿ ಮುಸ್ಲಿಂ ಸಮುದಾಯದ ಬಡವರು, ಮಹಿಳೆಯರು, ಶೋಷಿತರಿಗೆ ನ್ಯಾಯ ಕೊಡಿಸುವ ಕೆಲಸ ತೀರಾ ಅನಿವಾರ್ಯವಾಗಿತ್ತು. ಈ ಕಾರಣಕ್ಕಾಗಿಯೇ ಮೋದಿ ಸರ್ಕಾರ ಹಲವು ಸವಾಲುಗಳನ್ನು ಮೆಟ್ಟಿ ನಿಲ್ಲುವ 'ಉಮೀದ್' ಪ್ರದರ್ಶಿಸಿದೆ.

ಮುಸ್ಲಿಂ ಸಮುದಾಯದ ಬಡವರು, ಮಹಿಳೆಯರು ಮತ್ತು ನಿರ್ಲಕ್ಷಿತರಿಗೆ 'ಉಮೀದ್' ಆಶಾಕಿರಣವಾಗಿದೆ. ವಕ್ಫ್‌ನಿಂದ ಬರುವ ಆದಾಯದ ಮೂಲಕ ಮುಸ್ಲಿಂ ಹೆಣ್ಣುಮಕ್ಕಳಿಗೆ ವಿದ್ಯಾರ್ಥಿ ವೇತನ, ಆರೋಗ್ಯ ರಕ್ಷಣೆ ಮತ್ತು ತಾಯಂದಿರ ಕಲ್ಯಾಣ, ಮಹಿಳಾ ಉದ್ಯಮಿಗಳಿಗೆ ಕೌಶಲ ಅಭಿವೃದ್ಧಿ ಮತ್ತು ಕಿರುಬಂಡವಾಳ ಬೆಂಬಲ, ಫ್ಯಾಷನ್ ವಿನ್ಯಾಸ, ಆರೋಗ್ಯ ರಕ್ಷಣೆ ಮತ್ತು ಉದ್ಯಮಶೀಲತೆಯಂತಹ ಕ್ಷೇತ್ರಗಳಲ್ಲಿ ವೃತ್ತಿಪರ ತರಬೇತಿ, ವಿಧವೆಯರಿಗೆ ಪಿಂಚಣಿ, ಪಿತ್ರಾರ್ಜಿತ ವಿವಾದಗಳು ಮತ್ತು ಹಿಂಸಾಚಾರ ಪ್ರಕರಣಗಳಲ್ಲಿ ಕಾನೂನು ನೆರವು ನೀಡುವ ಉದ್ದೇಶವನ್ನು ಹೊಸ ಮಸೂದೆ ಹೊಂದಿದೆ. ವಕ್ಫ್ ಭೂಮಿ ದುರುಪಯೋಗ ಮತ್ತು ಅತಿಕ್ರಮಣವನ್ನು ತಡೆಗಟ್ಟುವುದರಿಂದ ವಕ್ಫ್ ಮಂಡಳಿಗಳಿಗೆ ಆದಾಯ ಹೆಚ್ಚಾಗುತ್ತದೆ. ಇದನ್ನು ಕಲ್ಯಾಣ ಕಾರ್ಯಕ್ರಮಗಳಿಗೆ ಬಳಸಬಹುದು. ಆರೋಗ್ಯ ರಕ್ಷಣೆ, ಶಿಕ್ಷಣ, ವಸತಿ ಮತ್ತು ಜೀವನೋಪಾಯಕ್ಕಾಗಿ ಧನಸಹಾಯ ಸಿಗಲಿದೆ. ವಿಶೇಷವಾಗಿ ಮುಸ್ಲಿಂ ಸಮುದಾಯದಲ್ಲಿರುವ ಹಿಂದುಳಿದ, ನಿರ್ಲಕ್ಷಿತ ಪಂಗಡಗಳ ಸಬಲೀಕರಣ ಸಾಧ್ಯ. ವಕ್ಫ್ ಮಂಡಳಿಯಲ್ಲಿ ಈ ವರ್ಗಕ್ಕೂ ಪ್ರಾತಿನಿಧ್ಯ ಸಿಗಲಿದೆ. ಬೊಹ್ರಾ ಮತ್ತು ಅಘಖಾನಿ ಸಮುದಾಯದವರಿಗೂ ಪ್ರಾತಿನಿಧ್ಯ ಸಿಗಲಿದೆ. ಈವರೆಗೆ ಇವರನ್ನು ದೂರ ಇಡಲಾಗಿತ್ತು.

ಅಂದಹಾಗೆ, ಕರ್ನಾಟಕದಲ್ಲೂ ವಕ್ಫ್ ಭೂ ದಾಹದ ಕಬಂಧ ಬಾಹು ಚಾಚಿದೆ. ಕೇವಲ ಹಿಂದೂಗಳದಷ್ಟೇ ಅಲ್ಲ, ಬಡ ಮುಸ್ಲಿಮರದೂ ಸೇರಿ ಸಾವಿರಾರು ಎಕರೆಯಷ್ಟು ಕೃಷಿ ಹಾಗೂ ಖಾಸಗಿ ಭೂಮಿಯನ್ನು ವಕ್ಫ್ ಮಂಡಳಿ ಅತಿಕ್ರಮಿಸಿಕೊಂಡಿದೆ ಎಂಬ ಆರೋಪವಿದೆ. ಕೃಷಿಕರ ಪಹಣಿಯಲ್ಲಿ ವಕ್ಫ್ ಎಂದು ನಮೂದಾಗಿದ್ದ ಪ್ರಕರಣ ಇನ್ನೂ ಹಸಿರಾಗಿದೆ. ಈ ಸಂಬಂಧ ಬಿಜೆಪಿ ರಾಜ್ಯ ಘಟಕ ಹೋರಾಟ ನಡೆಸಿ ಸರ್ಕಾರದ ಕಣ್ಣು ತೆರೆಸಿದೆ. ಜತೆಗೆ ಪಕ್ಷದ ನಿಯೋಗ ಸಂಸತ್ತಿನ ಜಂಟಿ ಸಮಿತಿ ಅಧ್ಯಕ್ಷರನ್ನೂ ಭೇಟಿ ಮಾಡಿ ವಸ್ತುಸ್ಥಿತಿಯ ವಿವರಣೆ ನೀಡಿತ್ತು. ಕೇವಲ ಹತ್ತೇ ದಿನಗಳ ಪ್ರವಾಸದಲ್ಲಿ 4,500 ದೂರುಗಳು ಬಂದಿದ್ದವು ಎಂದರೆ ವಕ್ಫ್ ಮಂಡಳಿ ರಾಜ್ಯದಲ್ಲಿ ಸೃಷ್ಟಿಸಿದ ಅವಾಂತರದ ಪರಿಣಾಮ ಎಷ್ಟೆಂದು ಊಹಿಸಬಹುದು. ಅದೆಲ್ಲದಕ್ಕಿಂತ ಮುಖ್ಯವಾಗಿ, 2012ರಲ್ಲಿ ಸಲ್ಲಿಕೆಯಾದ ಅನ್ವರ್ ಮಾಣಿಪ್ಪಾಡಿ ವರದಿಯು ವಕ್ಫ್‌ನ ಕರಾಳತೆಯನ್ನು ಮೊದಲ ಬಾರಿಗೆ ಬಯಲು ಮಾಡಿತ್ತು. 27 ಸಾವಿರ ಎಕರೆ ವಕ್ಫ್ ಆಸ್ತಿಯನ್ನು ಖಾಸಗಿ ವ್ಯಕ್ತಿಗಳು ದುರ್ಬಳಕೆ ಮಾಡಿಕೊಂಡಿದ್ದಾರೆ. ಕಾಂಗ್ರೆಸ್‌ನ ಪ್ರಭಾವಿ ನಾಯಕರೂ ಭಾಗಿ ಆಗಿದ್ದಾರೆ ಎಂದು ವರದಿ ಹೇಳಿತ್ತು. ಹೀಗಾಗಿ ಸಂವಿಧಾನದಲ್ಲಿ ನಂಬಿಕೆ ಇಲ್ಲದವರು ಮಾತ್ರ ಇಂಥ ಪ್ರಗತಿಪರ ಮಸೂದೆಯನ್ನು ವಿರೋಧಿಸುತ್ತಾರೆ; ಹಗರಣಗಳನ್ನು ಬೆಂಬಲಿಸುತ್ತಾರೆ.

**ಲೇಖಕ:** ವಿಧಾನಸಭೆಯಲ್ಲಿ ಬಿಜೆಪಿ ಉಪನಾಯಕ

## ಸಿನಿ ಬಿಟ್ಸ್



ಅಜಯ್ ರಾವ್

### ಏ.18ಕ್ಕೆ ಯುದ್ಧಕಾಂಡ ತೆರೆಗೆ

**ಅಜಯ್ ರಾವ್** ನಟಿಸಿ, ನಿರ್ಮಿಸಿರುವ 'ಯುದ್ಧಕಾಂಡ' ಚಿತ್ರ ಏ.18ರಂದು ತೆರೆಗೆ ಬರಲಿದೆ. ಹೆಣ್ಣುಮಕ್ಕಳ ಮೇಲಿನ ಅತ್ಯಾಚಾರ ಮತ್ತು ಮಕ್ಕಳ ದುರ್ಬಳಕೆ ಕುರಿತಾದ ಕಥೆಯನ್ನು ಹೊಂದಿರುವ ಚಿತ್ರಕ್ಕೆ ಪವನ್ ಭಟ್ ನಿರ್ದೇಶನವಿದೆ.

'ನಮ್ಮ ನ್ಯಾಯ ವ್ಯವಸ್ಥೆ ಮೇಲೆ ಬೆಳಕು ಚೆಲ್ಲುವ ಕಥೆಯಿದು. ಎಷ್ಟೋ ಪ್ರಕರಣಗಳಲ್ಲಿ ಎಷ್ಟು ವರ್ಷವಾದರೂ ನ್ಯಾಯ ಸಿಗುವುದಿಲ್ಲ. ವಿಶೇಷವಾಗಿ ಹೆಣ್ಣುಮಕ್ಕಳ ಮೇಲಾದ ಅತ್ಯಾಚಾರ ಪ್ರಕರಣಗಳಿಗೆ ತ್ವರಿತವಾಗಿ ನ್ಯಾಯ ಸಿಗಬೇಕು. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. ಮಕ್ಕಳ ದುರ್ಬಳಕೆ, ಅತ್ಯಾಚಾರ ಮೊದಲಾದ ಘಟನೆಗಳು ಆಗದಂತೆ ಎಚ್ಚರವಹಿಸಲು ಕಠಿಣ ಕಾನೂನಿನ ಅಗತ್ಯವಿದೆ. ಚಿತ್ರದಲ್ಲಿ ಅನ್ಯಾಯಕ್ಕೊಳಗಾದ ಹೆಣ್ಣೊಬ್ಬಳು ನ್ಯಾಯಕ್ಕಾಗಿ ಹೋರಾಡುತ್ತಾಳೆ. ಆಕೆ ನಮ್ಮ ಸಮಾಜದ ಎಲ್ಲ ಹೆಣ್ಣು ಮಕ್ಕಳ ಪ್ರತಿನಿಧಿ. ಇದು ಯಾವುದೇ ಓರ್ವ ಹೆಣ್ಣು ಮಗಳಿಗೆ ಸೀಮಿತವಾದ ಕಥೆಯಲ್ಲ' ಎಂದರು ಅಜಯ್ ರಾವ್.

'ಸಾಕಷ್ಟು ಸಾಲ ಮಾಡಿಕೊಂಡಿದ್ದೇನೆ ಎಂಬ ಸುದ್ದಿ ಹರಿದಾಡುತ್ತಿದೆ. ಅದು ನಿಜ. ಆದರೆ ನನ್ನ ಖುಷಿಗಾಗಿ ಸಾಲ ಮಾಡಿಕೊಂಡಿರುವೆ. ಇದು ನನ್ನ ನಿರ್ಮಾಣದ ಎರಡನೇ ಸಿನಿಮಾ. ಇದಕ್ಕಾಗಿ ಸಾಲವಾಗಿರುವುದಕ್ಕೆ ನನಗೆ ಬೇಸರವಿಲ್ಲ. ₹200 ಇಟ್ಟುಕೊಂಡು ಬೆಂಗಳೂರಿಗೆ ಬಂದವನು. ಇವತ್ತು ನಟ, ನಿರ್ಮಾಪಕ ಎಲ್ಲವೂ ಆಗಿರುವೆ. ದುಡಿದು ಸಾಲ ತೀರಿಸುವ ಶಕ್ತಿಯಿದೆ. ಇನ್ನೂ ಎತ್ತರಕ್ಕೆ ಬೆಳೆಯುವ ಕನಸಿದೆ' ಎಂದು ಅವರು ಸಾಲದ ಕುರಿತು ಸಮಜಾಯಿಷಿ ನೀಡಿದರು.


ಅರ್ಚನಾ ಜೋಯಿಸ್ ನಾಯಕಿ. ಪ್ರಕಾಶ್ ಬೆಳವಾಡಿ, ಟಿ.ಎಸ್.ನಾಗಾಭರಣ ಮುಖ್ಯ ಪಾತ್ರದಲ್ಲಿದ್ದಾರೆ. ಕೆವಿಎನ್ ಸಂಸ್ಥೆ ಈ ಚಿತ್ರವನ್ನು ವಿತರಣೆ ಮಾಡುತ್ತಿದೆ. ಹೇಮಂತ್ ಜೋಯಿಸ್ ಹಾಗೂ ಪ್ರವೀಣ್ ಭಟ್ ಸಂಗೀತ, ಕಾರ್ತಿಕ್ ಛಾಯಾಚಿತ್ರಗ್ರಹಣ ಈ ಚಿತ್ರಕ್ಕಿದೆ.

### ಹೊಸಬರ 'ಉದಯ ಸೂರ್ಯ'

**ಬಹುತೇಕ** ಹೊಸಬರಿಂದ ಕೂಡಿರುವ 'ಉದಯ ಸೂರ್ಯ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಎಸ್.ಎಸ್.ಪ್ರಕಾಶ್ ರಾಜ್ ಕಥೆ ಬರೆದು, ನಿರ್ದೇಶಿಸಿದ್ದಾರೆ.

'ಪ್ರೀತಿಯಲ್ಲಿ ಮೋಸ ಹೋದ ಇಬ್ಬರು ಸ್ನೇಹಿತರ ಕಥೆಯಿದು. ಸತ್ಯ ಘಟನೆಯನ್ನು ಆಧರಿಸಿ ಕಥೆ ಸಿದ್ಧಪಡಿಸಿದ್ದೇವೆ. ಹಳ್ಳಿ ಸೊಗಡಿನ ಕನ್ನಡ ಭಾಷೆಯನ್ನು ಬಳಸಲಾಗಿದೆ. ಏಪ್ರಿಲ್ ಮೂರನೇ ವಾರದಲ್ಲಿ ಚಿತ್ರ ತೆರೆ ಕಾಣುತ್ತಿದೆ' ಎಂದರು ನಿರ್ದೇಶಕರು.

ಶ್ರೀ ಸಿದ್ದೇಶ್ವರ ಫಿಲ್ಮ್ಸ್ ಚಿತ್ರವನ್ನು ನಿರ್ಮಿಸಿದೆ. ನಿರ್ದೇಶಕರೇ ಚಿತ್ರದ ನಾಯಕ. ತ್ರಿವೇಣಿ ನಾಯಕಿ. ಏಳು ಹಾಡುಗಳಿದ್ದು, ಯಶವಂತ ಭೂಪತಿ ಸಂಗೀತವಿದೆ. ಸಾಮ್ರಾಟ್ ನಾಗರಾಜ್ ಛಾಯಾಚಿತ್ರಗ್ರಹಣ, ಮಲ್ಲಿ ಸಂಕಲನವಿದೆ. ಶಿವಮೊಗ್ಗ, ನ್ಯಾಮತಿ, ಹೊನ್ನಾಳಿ, ಹಂಚಿನಸಿದ್ದಾಪುರ ಮುಂತಾದೆಡೆ ಚಿತ್ರೀಕರಣಗೊಂಡಿದೆ.




ತ್ರಿವೇಣಿ



## ಪದಬಂಧ 6002

– ವಿದ್ಯಾ ವಿನಯ್



**ಎಡದಿಂದ ಬಲಕ್ಕೆ**

1.ಇದು ಸಮುದ್ರದೊಳಗಿನ ಬೆಂಕಿ (4)
2.ನಡುವೆ ರಂಪವಿದ್ದಾಗಿನ ಪೀಳಿಗೆ (4)
4.ಕನ್ನಡಿಗನ ಚಾಳೀಸು ಇಲ್ಲಿದೆ (4)
6.ಕೊತ್ತಂಬರಿ ಬೀಜವನ್ನು ಹೀಗೂ ಹೇಳುತ್ತಾರೆ (3)
7.ಅತ್ಯಂತ ಚಿಕ್ಕ ಚೂರು ಇಲ್ಲಿ ಉಲ್ಟಾ ಆಗಿದೆ (2)
9.ಉಲ್ಟಾ ಕಾಣುತ್ತಿರುವ ಬೆಟ್ಟು (3)
11.ಸೂರ್ಯನ ಇನ್ನೊಂದು ಹೆಸರು (2)
13.ಗಾದೆಯಂತೆ ಒಲ್ಲದ ಗಂಡನಿಗೆ ಇದರಲ್ಲಿ ಕಲ್ಲು! (3)
14.ಎಳೆತನದಿಂದಲೂ ಮೊಳೆತ ಸ್ನೇಹ (4)
16.ಆಹ್ವಾನ ಪತ್ರ ಇಲ್ಲಿದೆ (4)
17.ವರ್ಷದ ಎರಡೆರಡು ತಿಂಗಳುಗಳ ಕಾಲದ ಅವಧಿ (4)

**ಮೇಲಿಂದ ಕೆಳಕ್ಕೆ**

1.ಮಾನಸಿಕ ಪ್ರಭಾವವನ್ನು ಬೀರಿ ವಶಪಡಿಸಿಕೊಳ್ಳುವುದು (5)
2.ಪಲ್ಲವಿ ನುಡಿವಾಗ ಬಡಿದ ಸಿಡಿಲು! (2)
3.ಕನ್ನಡದಲ್ಲಿ ಡಿಗ್ರಿಯನ್ನು ಪಡೆದವನು (5)
5.ಸುರುಳಿಯಾಕಾರದ ಪಚನಾಂಗ (3)
8.ಕಲ್ಲಿನ ಹಾಗೆ ಗಟ್ಟಿಯಾಗಿರುವ ಸಕ್ಕರೆ ಬಿಲ್ಲೆ (5)
10.ಜೋಡಣೆಯನ್ನು ಹೀಗೆನ್ನಿ (3)
12.ಲೋಹದ ಹಕ್ಕಿಯಲ್ಲಿನ ಪಯಣ (5)
15.ಅಬಲೆ ಬೀಸಿದ ಜಾಲ (2))

### 6001ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಬಂದರು 6.ಜುಗಾರಿ
7.ರಾದ್ಧಾಂತ 8.ಧಿಮಾಕು
10.ಗಗ್ಗರ 14.ಛೇದನ
16.ಕನ್ನಡಿ 17.ಜಠರ
18.ವಜೀರ

**ಮೇಲಿಂದ ಕೆಳಕ್ಕೆ:**
1.ಬಂಡವಾಳ 2.ರುಜುವಾತು
3. ಪರಿಧಿ 4.ಪರಾಕು
5.ಅಂತರಾಳ 9.ಮಾಸರ
10.ಗದ್ಗದ 11.ಕೂಲಂಕಷ
12.ಗುಂಜಾರವ 13.ಜಲಚರ
14.ಛೇಡಿಸು 15.ನಜರ

## ಸುಡೊಕು 6387

| | | | | | | | | |
|---|---|---|---|---|---|---|---|---|
| | 7 | 9 | | | 3 | | 8 | 1 |
| | | | | 8 | | 2 | | 9 |
| 8 | 1 | | 2 | 6 | | 7 | 3 | |
| | 8 | | | | | 1 | | 5 |
| | 9 | 2 | 8 | 1 | 5 | | 6 | |
| 5 | | | | | | 8 | | |
| 9 | | 7 | 5 | | | | | 6 |
| | 5 | | | | 2 | | 4 | |
| 4 | 3 | | 6 | | 1 | | | 2 |

### ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 6386 ಸುಡೊಕು

| | | | | | | | | |
|---|---|---|---|---|---|---|---|---|
| 9 | 2 | 8 | 3 | 6 | 7 | 4 | 5 | 1 |
| 3 | 6 | 4 | 9 | 1 | 5 | 8 | 7 | 2 |
| 5 | 7 | 1 | 2 | 4 | 8 | 9 | 6 | 3 |
| 7 | 4 | 2 | 6 | 3 | 9 | 1 | 8 | 5 |
| 8 | 3 | 9 | 5 | 7 | 1 | 2 | 4 | 6 |
| 1 | 5 | 6 | 8 | 2 | 4 | 3 | 9 | 7 |
| 2 | 8 | 5 | 1 | 9 | 6 | 7 | 3 | 4 |
| 4 | 9 | 3 | 7 | 5 | 2 | 6 | 1 | 8 |
| 6 | 1 | 7 | 4 | 8 | 3 | 5 | 2 | 9 |

## ಗುಂಡಣ್ಣ




## ದಿನ ಭವಿಷ್ಯ

ವಿದ್ವಾಂಶಕರ ಸೋಮಯಾಜಿ, ಕಮ್ಮರಡಿ — ಶನಿವಾರ ಏಪ್ರಿಲ್ 5, 2025

**ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ:** ಚೈತ್ರ ಶುದ್ಧ ಅಷ್ಟಮಿ ಗಂ. 19-27 ನಕ್ಷತ್ರ: ಪುನರ್ವಸು ಗಂ. 29-32 ಯೋಗ: ಅತಿಗಂಡ ಗಂ. 20-03 ಕರಣ: ವಿಷ್ಟಿ ಗಂ. 07-45, ಮೀನ ಮಾಸದ 22 ನೇ ದಿನ, ಮಳೆನಕ್ಷತ್ರ: ರೇವತಿ 2.
**ರಾಹುಕಾಲ:** ಬೆಳಿಗ್ಗೆ 09-00 – 10-30
**ಸೂರ್ಯೋದಯ:** 06-27 ಸೂರ್ಯಾಸ್ತ : 06-39, ಮುಸ್ಲಿಂ ದಿನಾಂಕ : 06 ಶವ್ವಾಲ್
**ದಿನ ವಿಶೇಷ:** ಅನ್ನಪೂರ್ಣ ಪೂಜಾ, ಅಶೋಕಾಷ್ಟಮಿ, ಓಳಿ ಪ್ರಾರಂಭ (ಜೈನ್)
**ಅದೃಷ್ಟ ಸಂಖ್ಯೆ:** 7, 11

**ಮೇಷ:** ನಿಮ್ಮ ಆರ್ಥಿಕ ಬಲ ಮತ್ತು ಪ್ರಯತ್ನಬಲವೆಷ್ಟಿದ್ದರೂ, ಸಹೋದರರ ಅಥವಾ ಸಂಬಂಧಿಕರ ಸಹಾಯ ಕೇಳುವುದು ಅನಿವಾರ್ಯವಾಗುವುದು. ಪೂಜಾ ಕಾರ್ಯಗಳಲ್ಲಿ ಪಾಲ್ಗೊಳ್ಳುವ ಮನಸ್ಸಾಗಲಿದೆ.

**ವೃಷಭ:** ಇಂದಿನ ಪರಿಸ್ಥಿತಿಯಲ್ಲಿ ಮನಸ್ಸನ್ನು ಬಾಹ್ಯ ವಿಚಾರಗಳ ಕಡೆಗೆ ಹೋಗದಂತೆ ಹತೋಟಿಯಲ್ಲಿ ಇಟ್ಟುಕೊಳ್ಳುವುದು ಸಾಹಸದ ವಿಚಾರ. ಕಬ್ಬಿಣ ಕೆಲಸದ ಗುತ್ತಿಗೆದಾರರಿಗೆ ಹೊಸ ಗುತ್ತಿಗೆ ಸಿಗುವ ಸಂಭವಗಳಿವೆ.

**ಮಿಥುನ:** ವ್ಯಾಪಾರ ವೃತ್ತಿಯಲ್ಲಿ ಆರೋಗ್ಯಕರ ಪೈಪೋಟಿ ಕಂಡುಬಂದರೂ ಸಹ ಸಮಾಧಾನಕರ ಲಾಭ ಇರುವುದು. ಇಂದಿನ ಅವಕಾಶಗಳನ್ನು ಉತ್ತಮವಾಗಿ ಉಪಯೋಗಿಸಿಕೊಳ್ಳಿ. ಸಾಹಿತಿಗಳಿಗೆ ಹೆಚ್ಚಿನ ಅವಕಾಶಗಳು ಲಭಿಸುವುದು.

**ಕರ್ಕಾಟಕ:** ಆಹಾರ ಪದಾರ್ಥಗಳ ತಯಾರಕರಿಗೆ ವ್ಯಾಪಾರಸ್ಥರಿಗೆ ಉತ್ತಮ ಲಾಭ ಸಿಗಲಿದೆ. ಇತರರ ಅನುಮಾನಕ್ಕೆ ಎಡೆಮಾಡಿಕೊಡುವಂತಹ ಕೆಲಸ ನಿಮ್ಮಿಂದ ನಡೆಯಲಿದೆ. ನಿಮ್ಮ ಪ್ರತಿಸ್ಪರ್ಧಿಗಳು ಹೆಚ್ಚಲಿದ್ದಾರೆ.

**ಸಿಂಹ:** ವಚನ ಪಾಲನೆಯಿಂದ ಹಾಗೂ ಉನ್ನತ ಅಧಿಕಾರಿಗಳ ಸವಿನುಡಿಯಿಂದ ಮಾನಸಿಕ ಉಲ್ಲಾಸ ಸಿಗುವುದು. ಸರ್ಕಾರಿ ನೌಕರರಿಗೆ ಏಳಿಗೆ ಪ್ರಾಪ್ತಿ. ಪುತ್ರರ ಮುಖಾಂತರ ಹೆಚ್ಚುವರಿ ಆದಾಯ ಹಾಗೂ ಗೌರವ ಸಿಗಲಿದೆ.

**ಕನ್ಯಾ:** ವ್ಯವಹಾರದಲ್ಲಿ ಹೊಸ ತಂತ್ರಜ್ಞಾನದ ಅಳವಡಿಕೆಯಿಂದಾಗಿ ಉತ್ತಮ ಆದಾಯ ಪ್ರಾಪ್ತಿಯಾಗುವುದು. ನಿರಾಸೆಯ ಜೀವನ ಶೈಲಿಯು ಹಂತ ಹಂತವಾಗಿ ಮುಕ್ತಾಯವಾಗುವುದು. ಶ್ರದ್ಧೆಯಿಂದ ಕೆಲಸ ಮಾಡಿದರೆ ಜಯವಾಗುವುದು.

**ತುಲಾ:** ಮನೆ ನವೀಕರಣಗೊಳಿಸುವ ಕಾರ್ಯಕ್ಕೆ ಕೈ ಹಾಕುವವರು ವಾಸ್ತುಶಾಸ್ತ್ರದ ಬಗ್ಗೆ ಗಮನಕೊಡಿ. ಕಾರ್ಯದಲ್ಲಿ ಸಣ್ಣಪುಟ್ಟ ತೊಡಕುಗಳು ಕಾಣಿಸಿಕೊಂಡರೂ ಕೆಲಸಗಳು ಅಬಾಧಿತವಾಗಿ ಸಾಗುವುದು.

**ವೃಶ್ಚಿಕ:** ಇತ್ತೀಚಿನ ದಿನಗಳಲ್ಲಿ ಸಹೋದರರಲ್ಲಿ ಮೂಡಿದ ಭಿನ್ನಾಭಿಪ್ರಾಯವು ತಂದೆ ತಾಯಿಯ ಹಿತವಚನಗಳಿಂದ ಉತ್ತಮ ಬಾಂಧವ್ಯವಾಗಿ ಬೆಳೆಯಲಿದೆ. ಶಿಶುವಿನ ಜನನ ಕುಟುಂಬದ ಸರ್ವರ ಸಂತೋಷಕ್ಕೆ ಕಾರಣವಾಗುತ್ತದೆ.


**ಧನು:** ಕೃಷಿ ಅಥವಾ ಕೃಷಿ ಕೈಗಾರಿಕೆಯಲ್ಲಿನ ವ್ಯವಹಾರಗಳು ಸಮಾಧಾನಕರ ಆದಾಯ ತರಲಿವೆ. ಆರಕ್ಷಕ ಅಧಿಕಾರಿಗಳಿಗೆ ಕೆಲಸದ ಒತ್ತಡ ನಿವಾರಣೆಯಾಗಲಿದೆ. ಹಿರಿಯ ಅಧಿಕಾರಿಗಳಿಂದ ಪ್ರಶಂಸೆಯ ಮಾತುಗಳು ಬರಲಿದೆ.

**ಮಕರ:** ಕೇವಲ ಮಾತಿನಲ್ಲಿ ಅಲ್ಲದೇ ವ್ಯವಹಾರದಲ್ಲಿಯೂ ಚಾಣಾಕ್ಷತನ ತೋರುವುದು ನಿಮ್ಮ ಏಳಿಗೆಗೆ ಕಾರಣವಾಗಲಿದೆ. ಬಂಡವಾಳ ಹೂಡಿಕೆ ಹಾಗೂ ಷೇರು ಖರೀದಿಯ ವಿಚಾರಗಳತ್ತ ಆಸಕ್ತಿಯು ಹೆಚ್ಚಲಿದೆ.

**ಕುಂಭ:** ಬೇರೆಯವರ ಸಮಸ್ಯೆಗಳಿಗೆ ನೆರವಾಗುವ ಗುಣ ಹೊಂದಿರುವ ನಿಮಗೆ ದೇವರ ಆಶೀರ್ವಾದ ಸದಾ ಇರುವುದು. ಲೆಕ್ಕ ಪರಿಶೋಧಕರಿಗೆ ಹಾಗೂ ನ್ಯಾಯವಾದಿಗಳಿಗೆ ಉತ್ತಮ ಅವಕಾಶಗಳು ಒದಗಿ ಬರುವುದು.

**ಮೀನ:** ವಿದೇಶೀ ಗೆಳೆಯನ ಆಗಮನ ಮತ್ತು ಸಹವಾಸದಿಂದ ವ್ಯವಹಾರದಲ್ಲಿ ಉತ್ತಮ ಬದಲಾವಣೆಗಳನ್ನು ಕಾಣುವಿರಿ. ಮನಸ್ಸು ಉಲ್ಲಾಸದಾಯಕವಾಗಿ ಇರುತ್ತದೆ. ಮನೆಯಲ್ಲಿ ಸಂತಸದ ವಾತಾವರಣ ಸೃಷ್ಟಿಯಾಗಲಿದೆ.

**ಷೇರುಪೇಟೆ ವಹಿವಾಟು** 930




**ಎನ್ಎಸ್ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ | 23,250 |
| ಇಂದಿನ ಅಂತ್ಯ | 22,904 |
| ▼ | 345 |
| ದಿನದ ಕನಿಷ್ಠ | 22,857 |

**ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**



| | |
|---|---|
| ಬೆಂಗಳೂರು | |
| 100ಕ್ಕೆ | ₹480 |
| 12 ಕ್ಕೆ | ₹66 |
| ಮೈಸೂರು | |
| 100ಕ್ಕೆ | ₹480 |

**ರಾಮನಗರ ರೇಷ್ಮೆಗೂಡು**



ಮಿಶ್ರತಳಿ (ಸಿ.ಬಿ) ₹305-567
ದ್ವಿತಳಿ (ಬಿ.ವಿ) ₹188-720

**ಎನ್.ಆರ್.ಪುರ ರಬ್ಬರ್**



(ಪ್ರತಿ ಕೆ.ಜಿಗೆ)

ಆರ್ಎಸ್ಎಸ್-4 ₹202
ಆರ್ಎಸ್ಎಸ್-5 ₹197
ಗುಡ್ ಲಾಟ್ ₹188

**ಮುದ್ರೆಮನೆ ಕಾಫಿ** (50 ಕೆಜಿಗೆ)



| | |
|---|---|
| ಎಪಿ | ₹28000 |
| ಎಪಿ | ₹16800 |
| ಆರ್‌ಪಿ | ₹22750 |
| ಆರ್‌ಸಿ | ₹12750 |



ಬೆಳಗಾವಿಯ ಜೆಎನ್ಎಂಸಿ ಕ್ಯಾಂಪಸ್‌ನಲ್ಲಿ ನಡೆದ 'ಎಜ್ಯುಕೇಶನ್ ಎಕ್ಸ್‌ಪೋ–2025' ಅನ್ನು ಕೆಎಲ್ಇ ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ವೀಕ್ಷಿಸಿದರು

# ಎಜ್ಯುಕೇಶನ್ ಎಕ್ಸ್‌ಪೋ ಆರಂಭ

ಪ್ರಜಾವಾಣಿ ವಾರ್ತೆ

**ಬೆಳಗಾವಿ:** ಇಲ್ಲಿನ ಜೆಎನ್ಎಂಸಿ ಕ್ಯಾಂಪಸ್‌ನಲ್ಲಿ ಕೆಎಲ್ಇ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ (ಕಾಹೇರ್) ಆಶ್ರಯದಲ್ಲಿ ಎರಡು ದಿನ ನಡೆಯುವ 'ಎಜ್ಯುಕೇಶನ್ ಎಕ್ಸ್‌ಪೋ 2025'ಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು.

ವಿವಿಧ ಕಾಲೇಜುಗಳಿಂದ ಬಂದಿದ್ದ ವಿದ್ಯಾರ್ಥಿಗಳು ಮತ್ತು ಅವರು ಪಾಲಕರು, ಕಾಹೇರ್‌ನಲ್ಲಿನ ವಿವಿಧ ಕೋರ್ಸ್, ಅವುಗಳನ್ನು ಕಲಿತವರಿಗೆ ಭಾರತ ಮತ್ತು ವಿದೇಶದಲ್ಲಿ ಲಭ್ಯವಿರುವ ಉದ್ಯೋಗಾವಕಾಶ ಕುರಿತು ಮಾಹಿತಿ ಪಡೆದುಕೊಂಡರು.

ಸಮಾರಂಭ ಉದ್ಘಾಟಿಸಿದ ಕೆಎಲ್ಇ ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಮಾತನಾಡಿ, 'ಪಿಯುಸಿ ದ್ವಿತೀಯ ವರ್ಷ ಓದಿದ ವಿದ್ಯಾರ್ಥಿಗಳಿಗಾಗಿ ನಮ್ಮಲ್ಲಿ ಅಲೈಡ್ ಹೆಲ್ತ್ ಸೈನ್ಸ್ ಕೋರ್ಸ್‌ಗಳನ್ನು ಪರಿಚಯಿಸಿದ್ದೇವೆ. ಕೋರ್ಸ್ ಮುಗಿದ ತಕ್ಷಣವೇ ವಿದ್ಯಾರ್ಥಿಗಳು ಪ್ರತಿಷ್ಠಿತ ಸಂಸ್ಥೆಗಳಲ್ಲಿ ಉದ್ಯೋಗ ಪಡೆಯಬಹುದು' ಎಂದರು.

ಕಾಹೇರ್ ಕುಲಪತಿ ಡಾ.ನಿತಿನ್ ಗಂಗಾನೆ, ಕುಲಸಚಿವ ಡಾ.ಎಂ.ಎಸ್. ಗಣಾಚಾರಿ, ಕೆಎಲ್ಇ–ಯುಎಸ್ಎಂ ನಿರ್ದೇಶಕ ಡಾ.ಎಚ್.ಬಿ. ರಾಜಶೇಖರ ಇದ್ದರು.

## ಅಡಿಕೆ ಧಾರಣೆ (₹ಗಳಲ್ಲಿ)

| | |
|---|---|
| **ಕಾರ್ಕಳ** | |
| ಹೊಸತು | 25000-43000 |
| ಹಳತು | 30000-49500 |
| **ಶಿವಮೊಗ್ಗ** | |
| ಗೊರಬಲು | 22309-22309 |
| ರಾಶಿ | 50009-52809 |
| **ಸಿದ್ದಾಪುರ** | |
| ಬಿಳಿಗೋಟು | 24509-29809 |
| ಚಾಲಿ | 33709-39339 |
| ಕೋಕ | 13099-17199 |
| ಹಳೆಚಾಲಿ | 34899-39339 |
| ಕೆಂಪುಗೋಟು | 20609-21809 |
| ರಾಶಿ | 41099-47299 |
| ತಟ್ಟಿಬೆಟ್ಟೆ | 28909-36119 |
| **ಶಿರಸಿ** | |
| ಬೆಟ್ಟೆ | 26900-39689 |
| ಬಿಳಿಗೋಟು | 16099-31189 |
| ಚಾಲಿ | 32809-40909 |
| ಕೆಂಪುಗೋಟು | 10869-25299 |
| ರಾಶಿ | 40099-46699 |
| **ಯಲ್ಲಾಪುರ** | |
| ಬಿಳಿಗೋಟು | 16899-30899 |
| ಚಾಲಿ | 31809-40849 |
| ಕೋಕ | 4609-16899 |
| ಕೆಂಪುಗೋಟು | 14969-26919 |
| ರಾಶಿ | 40689-54900 |
| ತಟ್ಟಿಬೆಟ್ಟೆ | 28506-38690 |

ಸೆನ್ಸೆಕ್ಸ್ 930 ಅಂಶ ಕುಸಿತ • ಕಚ್ಚಾ ತೈಲ ದರ ದಾಖಲೆ ಇಳಿಕೆ

# ಟ್ರಂಪ್ ಸುಂಕಕ್ಕೆ ಬೆದರಿದ ಗೂಳಿ



**ಮುಂಬೈ (ಪಿಟಿಐ):** ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪ್ರತಿ ಸುಂಕದ ಬಿಸಿ ದೇಶದ ಷೇರುಪೇಟೆಗೂ ತಟ್ಟಿದೆ. ಶುಕ್ರವಾರದ ವಹಿವಾಟಿನಲ್ಲಿ ಸೂಚ್ಯಂಕಗಳು ಇಳಿಕೆ ದಾಖಲಿಸಿವೆ.

ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಇಳಿಕೆಯ ನಡುವೆಯೂ ರಿಲಯನ್ಸ್ ಇಂಡಸ್ಟ್ರೀಸ್, ಎಲ್ ಆ್ಯಂಡ್ ಟಿ, ಇನ್ಫೊಸಿಸ್ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದವು. ಟ್ರಂಪ್ ನೀತಿಯಿಂದ ವ್ಯಾಪಾರ ಸಮರ ಶುರುವಾಗುವ ಭೀತಿ ತಲೆದೋರಿರುವುದು ದೇಶೀಯ ಷೇರುಪೇಟೆಯ ಇಳಿಕೆಗೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಹೂಡಿಕೆದಾರರ ಸಂಪತ್ತು ₹10 ಲಕ್ಷ ಕೋಟಿ ಕರಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 930 ಅಂಶ ಇಳಿಕೆಯಾಗಿ (ಶೇ 1.22) 75,364 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು. ಒಂದು ಸಂದರ್ಭದಲ್ಲಿ 1,054 ಅಂಶ ಇಳಿಕೆ ಕಂಡಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 345 ಅಂಶ ಇಳಿಕೆ (ಶೇ 1.49) ಕಂಡು 22,904 ಅಂಶಗಳಲ್ಲಿ ಸ್ಥಿರಗೊಂಡಿತು.

ಟಾಟಾ ಸ್ಟೀಲ್ ಷೇರಿನ ಮೌಲ್ಯದಲ್ಲಿ ಶೇ 8.59ರಷ್ಟು ಇಳಿಕೆಯಾಗಿದೆ. ಟಾಟಾ ಮೋಟರ್ಸ್, ಎಲ್ ಆ್ಯಂಡ್ ಟಿ, ಅದಾನಿ ಪೋರ್ಟ್ಸ್, ಇಂಡಸ್ ಇಂಡ್ ಬ್ಯಾಂಕ್, ಟೆಕ್ ಮಹೀಂದ್ರ, ರಿಲಯನ್ಸ್ ಇಂಡಸ್ಟ್ರೀಸ್, ಸನ್ ಫಾರ್ಮಾ, ಎಚ್‌ಸಿಎಲ್ ಟೆಕ್ನಾಲಜೀಸ್, ಟಿಸಿಎಸ್, ಇನ್ಫೊಸಿಸ್, ಎನ್‌ಟಿಪಿಸಿ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಬಜಾಜ್ ಫೈನಾನ್ಸ್, ಎಚ್‌ಡಿಎಫ್‌ಸಿ ಬ್ಯಾಂಕ್, ನೆಸ್ಲೆ ಇಂಡಿಯಾ, ಐಸಿಐಸಿಐ ಬ್ಯಾಂಕ್, ಐಟಿಸಿ, ಏಷ್ಯನ್ ಪೇಂಟ್ಸ್ ಮತ್ತು ಎಕ್ಸಿಸ್ ಬ್ಯಾಂಕ್ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಬಿಎಸ್ಇ ಮಿಡ್‌ಕ್ಯಾಪ್ ಶೇ 3.08 ಮತ್ತು ಸ್ಮಾಲ್‌ಕ್ಯಾಪ್ ಸೂಚ್ಯಂಕ ಶೇ 3.43ರಷ್ಟು ಕುಸಿದಿವೆ.

'ಟ್ರಂಪ್ ನೀತಿಯು ಅಮೆರಿಕದಲ್ಲಿ ಆರ್ಥಿಕ ಹಿಂಜರಿತ ಮತ್ತು ಹಣದುಬ್ಬರ ಏರಿಕೆಗೆ ದಾರಿ ಮಾಡಿಕೊಡುವ ಸಾಧ್ಯತೆಯಿದೆ. ಇದು ಪ್ರಮುಖ ದೇಶಗಳ ಆರ್ಥಿಕತೆ ಬೆಳವಣಿಗೆ ಮೇಲೂ ಪರಿಣಾಮ ಬೀರಿದೆ. ಈ ಭೀತಿಯಿಂದಾಗಿ ಹೂಡಿಕೆದಾರರು ಷೇರುಗಳ ಮಾರಾಟಕ್ಕೆ ಮುಂದಾಗಿದ್ದಾರೆ. ಹಾಗಾಗಿ, ಸೂಚ್ಯಂಕಗಳು ಕುಸಿದಿವೆ' ಎಂದು ಮೆಹ್ತಾ ಈಕ್ವಿಟಿ ಲಿಮಿಟೆಡ್‌ನ ಹಿರಿಯ ಉಪಾಧ್ಯಕ್ಷ (ಸಂಶೋಧನೆ) ಪ್ರಶಾಂತ್ ತಾಪ್ಸೆ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಶೇ 3.26ರಷ್ಟು ಇಳಿಕೆಯಾಗಿದ್ದು, ಪ್ರತಿ ಬ್ಯಾರೆಲ್‌ಗೆ 67.85 ಡಾಲರ್ ಆಗಿದೆ. ಕಳೆದ ಮೂರು ವರ್ಷದ ಅವಧಿಯಲ್ಲಿ ಅತಿಹೆಚ್ಚು ಕುಸಿತ ದಾಖಲಿಸಿದ ದಿನ ಇದಾಗಿದೆ.

### ಅಮೆರಿಕದ ಷೇರುಪೇಟೆ ತಲ್ಲಣ

**ಲಂಡನ್ (ರಾಯಿಟರ್ಸ್):** ಟ್ರಂಪ್ ಸುಂಕ ನೀತಿಯಿಂದಾಗಿ ಶುಕ್ರವಾರ ಅಮೆರಿಕದ ಷೇರುಪೇಟೆಗಳು ಕುಸಿತ ಕಂಡಿವೆ. ಚೀನಾವು ಅಮೆರಿಕದ ಸರಕುಗಳ ಮೇಲೆ ಹೆಚ್ಚುವರಿ ಸುಂಕ ಘೋಷಿಸಿರುವುದು ಈ ಇಳಿಕೆಗೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಎಸ್ ಆ್ಯಂಡ್ ಪಿ 500 ಸೂಚ್ಯಂಕವು ಶೇ 2.5ರಷ್ಟು ಕುಸಿದಿದೆ. ಅತಿಹೆಚ್ಚು ಮಾರುಕಟ್ಟೆ ಬಂಡವಾಳ ಹೊಂದಿರುವ 500 ಕಂಪನಿಗಳು ಈ ಗುಚ್ಛದಲ್ಲಿವೆ. ಈ ಕಂಪನಿಗಳ ಮಾರುಕಟ್ಟೆ ಮೌಲ್ಯವು ಒಂದೇ ದಿನ ₹205 ಲಕ್ಷ ಕೋಟಿ ಕರಗಿದೆ. ಡೌ ಜೋನ್ಸ್ ಶೇ 3.98 ಹಾಗೂ ನಾಸ್ಡಾಕ್ ಸೂಚ್ಯಂಕ ಶೇ 2.6ರಷ್ಟು ಇಳಿಕೆಯಾಗಿದೆ.

2020ರ ಮಾರ್ಚ್ 16ರಂದು ಕೋವಿಡ್ ಸಾಂಕ್ರಾಮಿಕದ ಅವಧಿಯಲ್ಲಿ ಅಮೆರಿಕದ ಷೇರುಪೇಟೆಯು ಮಹಾಪತನ ಕಂಡಿತ್ತು. ಇದಾದ ಬಳಿಕ ದಿನವೊಂದರಲ್ಲಿ ಕಂಡಿರುವ ಅತಿಹೆಚ್ಚು ಕುಸಿತ ಇದಾಗಿದೆ.

ಆ್ಯಪಲ್ ಶೇ 9ರಷ್ಟು ಹಾಗೂ ಎನ್ವಿಡಿಯಾ ಕಂಪನಿಯ ಷೇರಿನ ಮೌಲ್ಯದಲ್ಲಿ ಶೇ 8ರಷ್ಟು ಇಳಿಕೆಯಾಗಿದೆ.

ಅಮೆರಿಕದ ದೊಡ್ಡ ಕಂಪನಿಗಳ ಪೂರೈಕೆ ಸರಪಳಿಯು ವಿದೇಶಗಳಲ್ಲಿ ಹರಡಿಕೊಂಡಿದೆ. ಆ ರಾಷ್ಟ್ರಗಳು ಸುಂಕ ಹೆಚ್ಚಿಸಿದರೆ ಬಿಡಿಭಾಗ ಮತ್ತು ಕಚ್ಚಾ ವಸ್ತುಗಳ ಬೆಲೆ ಏರಿಕೆಯಾಗಲಿದೆ. ಇದರಿಂದ ನಷ್ಟವಾಗುವ ಆತಂಕ ದೊಡ್ಡ ಕಂಪನಿಗಳಿಗೆ ಎದುರಾಗಿದೆ. ಇದು ಹೂಡಿಕೆದಾರರ ಬಲವನ್ನು ಕುಗ್ಗಿಸಿದೆ ಎಂದು ತಜ್ಞರು ಹೇಳಿದ್ದಾರೆ.

ಟೋಕಿಯೊ ಮತ್ತು ಸೋಲ್ ಮಾರುಕಟ್ಟೆಯೂ ಇಳಿಕೆ ಕಂಡಿವೆ.

### ಔಷಧ ಕಂಪನಿ ಷೇರಿನ ಮೌಲ್ಯ ಕುಸಿತ

**ನವದೆಹಲಿ (ಪಿಟಿಐ):** ದೇಶದ ಔಷಧ ಕಂಪನಿಗಳ ಷೇರಿನ ಮೌಲ್ಯವು ಶೇ 11ರಷ್ಟು ಇಳಿಕೆಯಾಗಿದೆ.

ಔಷಧ ವಲಯದ ಮೇಲೆ ಟ್ರಂಪ್ ಆಡಳಿತವು ಪ್ರತಿ ಸುಂಕ ವಿಧಿಸಿಲ್ಲ. ಆದರೆ, ಅಮೆರಿಕಕ್ಕೆ ಪೂರೈಕೆಯಾಗುವ ಎಲ್ಲಾ ಸರಕುಗಳ ಮೇಲೆ ಶೇ 10ರಷ್ಟು ಮೂಲ ಸುಂಕ ವಿಧಿಸಿದೆ. ಇದರಿಂದ ಷೇರಿನ ಮೌಲ್ಯ ಇಳಿದಿದೆ. ಅರಬಿಂದೊ ಫಾರ್ಮಾ, ಲಾರಸ್ ಲ್ಯಾಬ್ಸ್, ಐಪಿಸಿಎ ಲ್ಯಾಬ್ಸ್, ಲುಪಿನ್, ಬಯೊಕಾನ್, ಸಿಪ್ಲಾ, ಮಾರ್ಕ್ಸನ್ಸ್, ಡಾ.ರೆಡ್ಡೀಸ್ ಲ್ಯಾಬೊರೇಟರೀಸ್, ಸನ್ ಫಾರ್ಮಾಸ್ಯುಟಿಕಲ್ ಕಂಪನಿಯ ಷೇರಿನ ಮೌಲ್ಯ ಇಳಿಕೆಯಾಗಿದೆ.

## ಸುದ್ದಿ 2 ನಿಮಿಷ

### ಬೆಳ್ಳಿ ದರ ಕೆ.ಜಿಗೆ ₹5 ಸಾವಿರ ಇಳಿಕೆ

**ನವದೆಹಲಿ (ಪಿಟಿಐ):** ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಇಳಿಕೆಯಾಗಿದೆ.

ಚಿನ್ನದ ದರವು 10 ಗ್ರಾಂಗೆ (ಶೇ 99.9 ಪರಿಶುದ್ಧತೆ) ₹1,350 ಕಡಿಮೆಯಾಗಿದ್ದು, ₹93 ಸಾವಿರಕ್ಕೆ ಮಾರಾಟವಾಗಿದೆ.

ಆಭರಣ ಚಿನ್ನವು ಇಷ್ಟೇ ಪ್ರಮಾಣದಲ್ಲಿ ಇಳಿಕೆಯಾಗಿ, ₹92,550 ಆಗಿದೆ.



ಬೆಳ್ಳಿ ದರ ಕೆ.ಜಿಗೆ ₹5 ಸಾವಿರ ಕಡಿಮೆಯಾಗಿ ₹95,500 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಪ್ರತಿ ಔನ್ಸ್‌ಗೆ (28.34) ಚಿನ್ನದ ದರ ₹1,854 (21.74 ಡಾಲರ್) ಕಡಿಮೆಯಾಗಿದೆ. ಬೆಳ್ಳಿ ಧಾರಣೆ ₹2,671 (31.32 ಡಾಲರ್) ಇಳಿದಿದೆ. ಟ್ರಂಪ್ ನೀತಿಯೂ ದರ ಇಳಿಕೆಗೆ ಕಾರಣವಾಗಿದೆ ಎಂದು ತಿಳಿಸಿದೆ.

### ಸೇವಾ ವಲಯ ಪ್ರಗತಿ ಕುಂಠಿತ

**ನವದೆಹಲಿ (ಪಿಟಿಐ):** ದೇಶದ ಸೇವಾ ವಲಯದ ಬೆಳವಣಿಗೆಯು ಮಾರ್ಚ್ ತಿಂಗಳಲ್ಲಿ ಇಳಿಕೆಯಾಗಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯು ಶುಕ್ರವಾರ ತಿಳಿಸಿದೆ.

ಫೆಬ್ರುವರಿಯಲ್ಲಿ ಸೂಚ್ಯಂಕವು 59 ಇತ್ತು. ಮಾರ್ಚ್‌ನಲ್ಲಿ 58.5ಕ್ಕೆ ದಾಖಲಾಗಿದೆ. ಮಾರಾಟದಲ್ಲಿನ ಇಳಿಕೆಯಿಂದ ಸೂಚ್ಯಂಕವು ಇಳಿದಿದೆ. ಆದರೆ, ದೀರ್ಘಾವಧಿ ಸರಾಸರಿಯು 54.2ಕ್ಕಿಂತ ಹೆಚ್ಚಿದೆ ಎಂದು ತಿಳಿಸಿದೆ.

'ಫೆಬ್ರುವರಿಗೆ ಹೋಲಿಸಿದರೆ ಮಾರ್ಚ್‌ನಲ್ಲಿ ದೇಶೀಯ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೇಡಿಕೆ ಇಳಿದಿದೆ. ಹೀಗಾಗಿ ಬೆಳವಣಿಗೆ ಕೂಡ ಕಡಿಮೆಯಾಗಿದೆ' ಎಂದು ಎಚ್ಎಸ್‌ಬಿಸಿ ಇಂಡಿಯಾದ ಮುಖ್ಯ ಅರ್ಥಶಾಸ್ತ್ರಜ್ಞ ಪ್ರಂಜುಲ್ ಭಂಡಾರಿ ಹೇಳಿದ್ದಾರೆ.

**ಖಾದ್ಯ ತೈಲ ಮುಂಬೈ** (10 ಕೆಜಿಗೆ)



(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

| | |
|---|---|
| ಶೇಂಗಾ (ರಿಫೈನ್ಡ್) | ₹1370 (1380) |
| ಸೋಯಾ (ರಿಫೈನ್ಡ್) | ₹1300 (1330) |
| ಸೂರ್ಯಕಾಂತಿ (ರಿಫೈನ್ಡ್) | ₹1415 (1415) |
| ಪಾಮೋಲಿನ್ | ₹1350 (1360) |

**ವಿನಿಮಯ ದರ**

| | |
|---|---|
| $ ಡಾಲರ್ | 85.44 |
| £ ಪೌಂಡ್ | 110.73 |
| € ಯುರೊ | 93.65 |
| ¥ ಯೆನ್ (100ಕ್ಕೆ) | 59 |

**ಮುಂಬೈ ಧಾರಣೆ (ಶೇಂಗಾ)**

04-04-2025

| | |
|---|---|
| ಜಾವಾ 70/80(ಹೊಸ) | 9600-9700 |
| ಜಾವಾ 80/90(ಹೊಸ) | 9100-9200 |
| ದಪ್ಪ ಮಧ್ಯಪ್ರದೇಶ(ಹೊಸ) | 7500-7600 |
| ದಪ್ಪ ಗುಜರಾತ್(ಹೊಸ) | 7800-7900 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1380 (1390) |
| ಒಂದು ವಾರದ ಡೆಲಿವರಿ | 1375 (1385) |
| ಪಾಮ್ ವಾರದ ಡೆಲಿವರಿ | 1348 (1358) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1350 (1355) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಚಿನ್ನ 10ಗ್ರಾಂ ₹90,700 (90,300)
ಬೆಳ್ಳಿ ಕೆ.ಜಿ ₹92,800 (99,100)

ಆವರಣದಲ್ಲಿ ಹಿಂದಿನ ವಹಿವಾಟಿನ ದರ



## ಮುಂಬೈ ತಲುಪಿದ ವಿಮಾನ: ನಿರಾಳ

**ಮುಂಬೈ (ಪಿಟಿಐ):** ತಾಂತ್ರಿಕ ದೋಷದಿಂದಾಗಿ ಟರ್ಕಿ ದಿಯರ್ ಬಕಿರ್ ನಿಲ್ದಾಣದಲ್ಲಿ 40 ಗಂಟೆ ನಿಲುಗಡೆ ಹೊಂದಿದ್ದ ವರ್ಜಿನ್ ಅಟ್ಲಾಂಟಿಕ್ ವಿಮಾನ ಕಡೆಗೂ ರಾತ್ರಿ 9 ಗಂಟೆಗೆ ಮುಂಬೈ ನಿಲ್ದಾಣಕ್ಕೆ ಬಂದಿಳಿಯಿತು.

ಈ ವಿಮಾನದಲ್ಲಿ 250ಕ್ಕೂ ಹೆಚ್ಚು ಪ್ರಯಾಣಿಕರಿದ್ದರು. ಈ ವಿಮಾನ ಲಂಡನ್‌ನಿಂದ ಮುಂಬೈಗೆ ಹೊರಟಿತ್ತು. ತಾಂತ್ರಿಕ ದೋಷದ ಕಾರಣ ಟರ್ಕಿಯ ವಿಮಾನನಿಲ್ದಾಣದಲ್ಲಿ ಇಳಿಸಲಾಗಿತ್ತು.

ಭಾರತೀಯರು ಸೇರಿದಂತೆ ವಿಮಾನದಲ್ಲಿದ್ದ 250ಕ್ಕೂ ಅಧಿಕ ಪ್ರಯಾಣಿಕರು ಸುಮಾರು 40 ಗಂಟೆ ಟರ್ಕಿಯ ನಿಲ್ದಾಣದಲ್ಲೇ ಉಳಿಯುವಂತಾಗಿತ್ತು.

ಎಲ್ಲ ತಾಂತ್ರಿಕ ದೋಷ ಸರಿಪಡಿಸಲಾದ ಕುರಿತು ಖಾತರಿ ದೊರೆತ ಬಳಿಕ, ಸ್ಥಳೀಯ ಕಾಲಮಾನ ಮಧ್ಯಾಹ್ನ 1 ಗಂಟೆಗೆ ಟರ್ಕಿ ನಿಲ್ದಾಣದಿಂದ ವಿಮಾನ ನಿರ್ಗಮಿಸಿತ್ತು ಎಂದು ಅಧಿಕಾರಿಗಳು ಈ ಮೊದಲು ತಿಳಿಸಿದ್ದರು.

ವಿಮಾನದಲ್ಲಿದ್ದ ಪ್ರಯಾಣಿಕರೊಬ್ಬರು, 'ಎಲ್ಲ ಪ್ರಯಾಣಿಕರು ನೆಲದಲ್ಲೇ ಕುಳಿತು ಕಾಲ ಕಳೆಯಬೇಕಾಯಿತು. ಹೊದಿಕೆ, ಸಸ್ಯಾಹಾರವೂ ಲಭ್ಯವಿರಲಿಲ್ಲ' ಎಂದು ಪ್ರತಿಕ್ರಿಯಿಸಿದರು.

ಶೇ 34ರಷ್ಟು ಸುಂಕ ಹೇರಿಕೆ: ವ್ಯಾಪಾರ ಬಿಕ್ಕಟ್ಟು ಸೃಷ್ಟಿ

# ಅಮೆರಿಕಕ್ಕೆ ಚೀನಾ ತಿರುಗೇಟು

**ಬೀಜಿಂಗ್ (ಪಿಟಿಐ):** ಅಮೆರಿಕದಿಂದ ಆಮದಾಗುವ ಎಲ್ಲಾ ಸರಕುಗಳ ಮೇಲೆ ಚೀನಾವು ಶೇ 34ರಷ್ಟು ಸುಂಕ ವಿಧಿಸಿದ್ದು, ಏಪ್ರಿಲ್ 10ರಿಂದ ಈ ಹೊಸ ಸುಂಕ ನೀತಿಯು ಜಾರಿಗೆ ಬರಲಿದೆ. ಇದರಿಂದ ಜಗತ್ತಿನ ಎರಡು ಪ್ರಮುಖ ರಾಷ್ಟ್ರಗಳ ನಡುವೆ ವ್ಯಾಪಾರ ಬಿಕ್ಕಟ್ಟು ಸೃಷ್ಟಿಯಾಗಿದೆ.

ಟ್ರಂಪ್ ಆಡಳಿತವು ಚೀನಾ ಸೇರಿ ಜಗತ್ತಿನ 180 ದೇಶಗಳ ಮೇಲೆ ಪ್ರತಿ ಸುಂಕ ವಿಧಿಸಿದೆ. ಚೀನಾದ ಸರಕು ಗಳ ಮೇಲೆ ಈಗಾಗಲೇ ಶೇ 20ರಷ್ಟು ಸುಂಕ ವಿಧಿಸಲಾಗಿದೆ. ಈಗ ಶೇ 34ರಷ್ಟು ಪ್ರತಿ ಸುಂಕ ವಿಧಿಸಿತ್ತು. ಒಟ್ಟಾರೆ ಸುಂಕದ ಪ್ರಮಾಣ ಶೇ 54ರಷ್ಟು ಆಗಿದೆ. ಇದಕ್ಕೆ ಪ್ರತೀಕಾರವಾಗಿ ಚೀನಾ ಕೂಡ ಸುಂಕ ಹೆಚ್ಚಿಸುವ ಮೂಲಕ ತಿರುಗೇಟು ನೀಡಿದೆ.

ರಾಷ್ಟ್ರದ ಹಿತಾಸಕ್ತಿ ಕಾಪಾಡಲು ಅಮೆರಿಕದ 16 ಸಂಸ್ಥೆಗಳಿಗೆ ಪೂರೈಸುತ್ತಿದ್ದ ಸರಕುಗಳ ರಫ್ತನ್ನು ರದ್ದುಪಡಿಸಲು ನಿರ್ಧರಿಸಲಾಗಿದೆ ಎಂದು ಚೀನಾದ ವಾಣಿಜ್ಯ ಸಚಿವಾಲಯ ತಿಳಿಸಿದೆ.

'ಅಮೆರಿಕದ ಸುಂಕ ನೀತಿಯು ವಿಶ್ವ ವ್ಯಾಪಾರ ಸಂಘಟನೆ (ಡಬ್ಲ್ಯುಟಿಒ) ಮತ್ತು ದ್ವಿಪಕ್ಷೀಯ ವ್ಯಾಪಾರದ ನಿಯಮಗಳನ್ನು ಉಲ್ಲಂಘಿಸುತ್ತಿದೆ. ಶಾಸನಾತ್ಮಕ ಹಕ್ಕು ಮತ್ತು ದೇಶದ ಹಿತಾಸಕ್ತಿ ರಕ್ಷಣೆಗಾಗಿ ಹೋರಾಡುತ್ತೇವೆ. ಅಮೆರಿಕವು ತನ್ನ ಸುಂಕದ ನೀತಿಯನ್ನು ಸ್ಥಗಿತಗೊಳಿಸಬೇಕು' ಎಂದು ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ಗುವೋ ಜಿಯಾಕುನ್ ಹೇಳಿದ್ದಾರೆ.

ಕಳೆದ ವರ್ಷ ಅಮೆರಿಕವು ಚೀನಾಕ್ಕೆ ₹12.26 ಲಕ್ಷ ಕೋಟಿ ಮೌಲ್ಯದ ಸರಕುಗಳನ್ನು ರಫ್ತು ಮಾಡಿದೆ. ಇದೇ ಅವಧಿಯಲ್ಲಿ ಅಮೆರಿಕವು ಚೀನಾದಿಂದ ₹37.53 ಲಕ್ಷ ಕೋಟಿ ಮೌಲ್ಯದ ಸರಕುಗಳನ್ನು ಆಮದು ಮಾಡಿಕೊಂಡಿದೆ.

### ಭಾರತದ ಮೇಲಿನ ಪ್ರತಿ ಸುಂಕ ಶೇ 26ಕ್ಕೆ ಇಳಿಕೆ

**ನವದೆಹಲಿ (ಪಿಟಿಐ):** ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತವು ಭಾರತದ ಮೇಲೆ ವಿಧಿಸಿದ್ದ ಶೇ 27ರಷ್ಟು ಪ್ರತಿ ಸುಂಕವನ್ನು ಪರಿಷ್ಕರಿಸಿದ್ದು, ಶೇ 26ಕ್ಕೆ ತಗ್ಗಿಸಿದೆ. ಏಪ್ರಿಲ್ 9ರಿಂದ ಈ ನೀತಿಯು ಜಾರಿಗೆ ಬರಲಿದೆ.

ಟ್ರಂಪ್ ಅವರು ಭಾರತ, ಚೀನಾ, ಬ್ರಿಟನ್, ಐರೋಪ್ಯ ಒಕ್ಕೂಟ ಸೇರಿ ಹಲವು ರಾಷ್ಟ್ರಗಳ ಮೇಲೆ ಪ್ರತಿ ಸುಂಕದ ಪಟ್ಟಿ ಪ್ರಕಟಿಸಿದ್ದರು. ಈ ಪಟ್ಟಿಯಲ್ಲಿ ಭಾರತವು ಅಮೆರಿಕದ ಉತ್ಪನ್ನಗಳ ಮೇಲೆ ಶೇ 52ರಷ್ಟು ಸುಂಕ ವಿಧಿಸುತ್ತಿದೆ ಎಂದು ಪ್ರಸ್ತಾಪಿಸಿದ್ದರು.

ಶ್ವೇತ ಭವನದ ದಾಖಲೆಯಲ್ಲಿ ಪ್ರಕಟಿಸಿದ್ದ ಸುಂಕದ ಪ್ರಮಾಣವನ್ನು ಈಗ ಪರಿಷ್ಕರಿಸಲಾಗಿದೆ.




ಬ್ಯಾಂಕಾಕ್‌ನಲ್ಲಿ ಶುಕ್ರವಾರ ನಡೆದ ಬಿಮ್‌ಸ್ಟೆಕ್ 6ನೇ ಶೃಂಗಸಭೆಯಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ, ನೇಪಾಳದ ಪ್ರಧಾನಿ ಕೆ.ಪಿ. ಶರ್ಮಾ ಒಲಿ (ಎಡದಿಂದ ಮೊದಲನೇಯವರು), ಬಾಂಗ್ಲಾದೇಶದ ಮುಖ್ಯ ಸಲಹೆಗಾರ ಮುಹಮ್ಮದ್ ಯೂನುಸ್, ಥಾಯ್ಲೆಂಡ್ ಪ್ರಧಾನಿ ಪೇಟೊಂಗ್‌ಟಾರ್ನ್ ಶಿನವತ್ರಾ, ಭೂತಾನ್ ಪ್ರಧಾನಿ ಡ್ಯಾಶೋ ಶೆರಿಂಗ್ ಟೊಬ್ಗೆ, ಮ್ಯಾನ್ಮಾರ್‌ನ ಸೇನಾ ನಾಯಕ ಹಿರಿಯ ಜನರಲ್ ಮಿನ್ ಆಂಗ್ ಹ್ಲೈಂಗ್ ಮತ್ತು ಶ್ರೀಲಂಕಾದ ಪ್ರಧಾನಿ ಹರಿಣಿ ಅಮರಸೂರಿಯಾ ಪಾಲ್ಗೊಂಡಿದ್ದರು ಚಿತ್ರ: ಪ್ರಧಾನಿ ಕಚೇರಿ

ಯೂನುಸ್‌ಗೆ ಭಾರತದ ಕಳಕಳಿ ಒತ್ತಿ ಹೇಳಿದ ಪ್ರಧಾನಿ ಮೋದಿ

# 'ಬಾಂಗ್ಲಾ: ಹಿಂದೂಗಳಿಗೆ ಸುರಕ್ಷೆ ಬೇಕು'

**ಬ್ಯಾಂಕಾಕ್ (ಪಿಟಿಐ):** ಬಾಂಗ್ಲಾದೇಶದಲ್ಲಿನ ಹಿಂದೂಗಳು ಸೇರಿದಂತೆ ಅಲ್ಪಸಂಖ್ಯಾತರ ಸುರಕ್ಷತೆಯ ಬಗ್ಗೆ ಭಾರತಕ್ಕಿರುವ ತೀವ್ರ ಕಳಕಳಿಯ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಬಾಂಗ್ಲಾದ ಮಧ್ಯಂತರ ಸರ್ಕಾರದ ಸಲಹೆಗಾರ ಮುಹಮ್ಮದ್ ಯೂನುಸ್ ಅವರಿಗೆ ಶುಕ್ರವಾರ ತಿಳಿಸಿದ್ದಾರೆ.

ಇಲ್ಲಿ ಆಯೋಜಿಸಿದ್ದ 'ಬಿಮ್‌ಸ್ಟೆಕ್' (ಬಿಐಎಂಎಸ್‌ಟಿಇಸಿ) ಗುಂಪಿನ ನಾಯಕರ ಶೃಂಗಸಭೆಯ ವೇಳೆ ಉಭಯ ನಾಯಕರು ಭೇಟಿಯಾದರು. ಹಿಂದೂಗಳು ಸೇರಿದಂತೆ ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ಬಾಂಗ್ಲಾದೇಶದ ಸರ್ಕಾರ ಕೂಲಂಕಷವಾಗಿ ತನಿಖೆ ಮಾಡಲಿದೆ. ಆ ಮೂಲಕ ಅವರ ಭದ್ರತೆಯನ್ನು ಖಾತ್ರಿಪಡಿಸಲಿದೆ ಎಂಬ ನಿರೀಕ್ಷೆಯನ್ನು ಭಾರತ ಹೊಂದಿರುವುದಾಗಿ ಮೋದಿ ಅವರು ಯೂನುಸ್ ಅವರಿಗೆ ತಿಳಿಸಿದ್ದಾರೆ.

ಉಭಯ ನಾಯಕರ ಸಭೆಯ ವಿವರ ನೀಡಿದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ, 'ಪ್ರಜಾಸತ್ತಾತ್ಮಕ, ಸ್ಥಿರ, ಶಾಂತಿಯುತ, ಪ್ರಗತಿಪರ ಮತ್ತು ಎಲ್ಲರನ್ನೂ ಒಳಗೊಂಡ ಬಾಂಗ್ಲಾದೇಶಕ್ಕೆ ಭಾರತದ ಬೆಂಬಲ ಸದಾ ಇರುವುದೆಂದು ಪ್ರಧಾನಿ ಪುನರುಚ್ಚರಿಸಿದ್ದಾರೆ' ಎಂದು ಮಿಸ್ರಿ ಹೇಳಿದರು.

ಶೇಖ್ ಹಸೀನಾ ಅವರನ್ನು ಹಸ್ತಾಂತರಿಸುವಂತೆ ಮೋದಿ ಅವರ ಬಳಿ ಯೂನುಸ್ ಪ್ರಸ್ತಾಪಿಸಿದ್ದಾರೆಯೇ ಎಂದು ಕೇಳಿದಾಗ, ಮಿಸ್ರಿ ನೇರ ಉತ್ತರ ನೀಡಲಿಲ್ಲ. 'ಈಗ ಈ ವಿಷಯದ ಬಗ್ಗೆ ಮಾತನಾಡುವುದು ಸೂಕ್ತವಲ್ಲ. ಈ ಬಗ್ಗೆ ಬಾಂಗ್ಲಾದೇಶದಿಂದ ಮನವಿ ಸ್ವೀಕರಿಸಿರುವುದಾಗಿ ಸಚಿವಾಲಯವು ಈ ಹಿಂದೆಯೇ ಹೇಳಿದೆ' ಎಂದರು.

**ನೇಪಾಳ ಪ್ರಧಾನಿ ಜತೆಗೆ ಫಲಪ್ರದ ಮಾತುಕತೆ:** ಮೋದಿ ಅವರು ನೇಪಾಳ ಪ್ರಧಾನಿ ಕೆ.ಪಿ. ಶರ್ಮಾ ಒಲಿ ಅವರನ್ನು ಭೇಟಿಯಾಗಿ ಇಂಧನ, ಸಂಪರ್ಕ, ಸಂಸ್ಕೃತಿ ಮತ್ತು ಡಿಜಿಟಲ್ ತಂತ್ರಜ್ಞಾನದಂತಹ ಕ್ಷೇತ್ರಗಳ ಕುರಿತು ಫಲಪ್ರದ ಮಾತುಕತೆ ನಡೆಸಿದರು.

### 'ಬಿಮ್‌ಸ್ಟೆಕ್'ಗೆ ಯುಪಿಐ: ಮೋದಿ ಪ್ರಸ್ತಾವ

**ಬ್ಯಾಂಕಾಕ್ (ಪಿಟಿಐ):** ಬಿಮ್‌ಸ್ಟೆಕ್ ಸದಸ್ಯ ರಾಷ್ಟ್ರಗಳ ಗುಂಪಿಗೆ ಹೊಸ ಹುರುಪು ನೀಡುವ ಪ್ರಯತ್ನದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಭಾರತದ ಯುಪಿಐ (ಏಕೀಕೃತ ಪಾವತಿ ವ್ಯವಸ್ಥೆ) ಅನ್ನು ಸದಸ್ಯ ರಾಷ್ಟ್ರಗಳ ಪಾವತಿ ವ್ಯವಸ್ಥೆಗಳೊಂದಿಗೆ ಜೋಡಿಸುವ ಪ್ರಸ್ತಾವ ಮುಂದಿಟ್ಟಿದ್ದಾರೆ.

ಈ ಕ್ರಮವು, ಬಂಗಾಳ ಕೊಲ್ಲಿ ಪ್ರದೇಶದಲ್ಲಿ ವ್ಯಾಪಾರ, ವಹಿವಾಟು ಮತ್ತು ಪ್ರವಾಸೋದ್ಯಮದ ಬೆಳವಣಿಗೆಗೆ ಎಲ್ಲ ಹಂತಗಳಲ್ಲೂ ಪ್ರಯೋಜನಕಾರಿಯಾಗಿದೆ ಎಂದು ಅವರು ಹೇಳಿದ್ದಾರೆ.

ಇಲ್ಲಿ ನಡೆಯುತ್ತಿರುವ ಬಿಮ್‌ಸ್ಟೆಕ್ 6ನೇ ಶೃಂಗಸಭೆ ಉದ್ದೇಶಿಸಿ ಮಾತನಾಡಿದ ಅವರು, ಬಿಮ್‌ಸ್ಟೆಕ್ ಚೇಂಬರ್ ಆಫ್ ಕಾಮರ್ಸ್ ಸ್ಥಾಪನೆ, ವಾರ್ಷಿಕ ವ್ಯಾಪಾರ ಶೃಂಗಸಭೆಗಳ ಆಯೋಜನೆ ಮತ್ತು ಸದಸ್ಯ ರಾಷ್ಟ್ರಗಳ ನಡುವೆ ಸ್ಥಳೀಯ ಕರೆನ್ಸಿಗಳ ಮೂಲಕ ವ್ಯಾಪಾರ ವಹಿವಾಟು ಉತ್ತೇಜಿಸುವ ಉದ್ದೇಶ ಹೊಂದಿರುವುದಾಗಿ ತಿಳಿಸಿದರು.

### ಮ್ಯಾನ್ಮಾರ್‌ಗೆ ಹೆಚ್ಚಿನ ನೆರವು: ಭರವಸೆ

'ಇತ್ತೀಚೆಗೆ ಭೂಕಂಪದಿಂದ ನಲುಗಿದ ಮ್ಯಾನ್ಮಾರ್‌ಗೆ ಹೆಚ್ಚಿನ ನೆರವು ನೀಡಲು ಭಾರತ ಸಿದ್ಧವಿದೆ. ಹಾಗೆಯೇ ಆಂತರಿಕ ಸಂಘರ್ಷ ಪರಿಹರಿಸಲು ವಿಶ್ವಾಸಾರ್ಹ ಮತ್ತು ಎಲ್ಲರನ್ನು ಒಳಗೊಳ್ಳುವ ಚುನಾವಣೆಗಳಿಗೆ ಒತ್ತು ನೀಡಲಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಮ್ಯಾನ್ಮಾರ್ ಸೇನಾ ಸರ್ಕಾರದ ಮುಖ್ಯಸ್ಥ ಹಿರಿಯ ಜನರಲ್ ಮಿನ್ ಆಂಗ್ ಹ್ಲೈಂಗ್ ಅವರಿಗೆ ಆಶ್ವಾಸನೆ ನೀಡಿದರು.

ಶೃಂಗಸಭೆಯ ವೇಳೆ ಅವರನ್ನು ಭೇಟಿಯಾದ ಮೋದಿ, 'ವಿಶ್ವಾಸಾರ್ಹ ಮತ್ತು ಎಲ್ಲರನ್ನು ಒಳಗೊಳ್ಳುವ ಚುನಾವಣೆಗಳ ಮೂಲಕ ಮ್ಯಾನ್ಮಾರ್‌ನಲ್ಲಿ ಪ್ರಜಾಪ್ರಭುತ್ವ ಪ್ರಕ್ರಿಯೆಯನ್ನು ಶೀಘ್ರ ಮರುಸ್ಥಾಪಿಸುವ ಮಹತ್ವವನ್ನು ಒತ್ತಿಹೇಳಿದ್ದಾರೆ' ಎಂದು ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಬಜೆಟ್ ಅಧಿವೇಶನದ ಕೊನೆ ದಿನ • ಸೋನಿಯಾ ಗಾಂಧಿ ಹೇಳಿಕೆಗೆ ತೀವ್ರ ಆಕ್ಷೇಪ

# ಸಂಸತ್: ಬಿಜೆಪಿ, ವಿಪಕ್ಷಗಳಿಂದ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ವಕ್ಫ್ ತಿದ್ದುಪಡಿ ಮಸೂದೆ ಅಂಗೀಕರಿಸಿರುವ ಕುರಿತು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ನೀಡಿದ ಹೇಳಿಕೆ, ಭಾರತದ ಸರಕುಗಳ ಮೇಲೆ ಅಮೆರಿಕ ಪ್ರತಿ ಸುಂಕ ವಿಧಿಸಿದ್ದು ಹಾಗೂ ಪಶ್ಚಿಮ ಬಂಗಾಳದಲ್ಲಿ 25 ಸಾವಿರ ಶಿಕ್ಷಕರ ನೇಮಕವನ್ನು ಸುಪ್ರೀಂ ಕೋರ್ಟ್ ಅಸಿಂಧುಗೊಳಿಸಿದ ವಿಚಾರಗಳು ಪ್ರಸ್ತಾಪಗೊಂಡಿದ್ದರಿಂದ, ಬಿಜೆಪಿ ಹಾಗೂ ವಿರೋಧ ಪಕ್ಷಗಳ ಸಂಸದರು ಪ್ರತಿಭಟನೆ ನಡೆಸಿದ್ದಕ್ಕೂ ಸಂಸತ್ ಶುಕ್ರವಾರ ಸಾಕ್ಷಿಯಾಯಿತು.

'ವಕ್ಫ್ ತಿದ್ದುಪಡಿ ಮಸೂದೆ ದೇಶದ ಸಂವಿಧಾನದ ಮೇಲಿನ ನಿರ್ಲಜ್ಜ ದಾಳಿ' ಎಂದು ಸೋನಿಯಾ ಗಾಂಧಿ ಗುರುವಾರ ಹೇಳಿದ್ದರು. ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿ ಆರಂಭಗೊಂಡಾಗ, ಸೋನಿಯಾ ಗಾಂಧಿ ಅವರ ಈ ಹೇಳಿಕೆ ಪ್ರಸ್ತಾಪಿಸಿದ ಬಿಜೆಪಿ ಸಂಸದರು, ಅವರ ವಿರುದ್ಧ ಘೋಷಣೆಗಳನ್ನು ಕೂಗಲು ಆರಂಭಿಸಿದರು.

ಇದಕ್ಕೆ ಪ್ರತಿಯಾಗಿ, ಕಾಂಗ್ರೆಸ್ ನೇತೃತ್ವದ ವಿಪಕ್ಷಗಳು, ಅಮೆರಿಕ ವಿಧಿಸಿರುವ ಪ್ರತಿಸುಂಕ ವಿಚಾರ ಪ್ರಸ್ತಾಪಿಸಿದಲ್ಲದೇ, ಸರ್ಕಾರ ಉತ್ತರಿಸಬೇಕು ಎಂದು ಪಟ್ಟು ಹಿಡಿದರು.

ಆಡಳಿತಾರೂಢ ಹಾಗೂ ವಿರೋಧ ಪಕ್ಷಗಳ ಸದಸ್ಯರಿಂದ ಗದ್ದಲ ತೀವ್ರಗೊಂಡ ಕಾರಣ, ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರು ಮಧ್ಯಾಹ್ನ 12ರ ವರೆಗೆ ಸದನವನ್ನು ಮುಂದೂಡಿದರು.

ಕಲಾಪ ಮತ್ತೆ ಆರಂಭಗೊಂಡಾಗ, ವಿಷಯ ಪ್ರಸ್ತಾಪಿಸಿದ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, 'ವಕ್ಫ್ ತಿದ್ದುಪಡಿ ಮಸೂದೆ ಕುರಿತು ಸಂಸತ್‌ನಲ್ಲಿ ವ್ಯಾಪಕ ಚರ್ಚೆಯಾಗಿದೆ. ರಾಜ್ಯಸಭೆಯಲ್ಲಿ ಗುರುವಾರ 12 ತಾಸು ಕಲಾಪ ನಡೆದಿದ್ದು, ಮಸೂದೆಗೆ ಅಂಗೀಕಾರ ಹಾಗೂ ಇತರ ವಿಷಯಗಳ ಚರ್ಚೆ ನಡೆದು, ದಾಖಲೆ ಸೃಷ್ಟಿಯಾಗಿದೆ' ಎಂದರು.

'ಆದಾಗ್ಯೂ ಈ ತಿದ್ದುಪಡಿ ಮಸೂದೆಯನ್ನು ಸಂವಿಧಾನದ ಮೇಲಿನ ದಾಳಿ ಎಂದು ಹೇಳುವುದು ಸರಿಯಲ್ಲ' ಎಂದು ರಿಜಿಜು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಲೋಕಸಭಾಧ್ಯಕ್ಷ ಓಂ ಬಿರ್ಲಾ, 'ಅಂತಹ ಹೇಳಿಕೆ ನೀಡಿದ್ದು ದುರದೃಷ್ಟಕರ' ಎಂದರು.

'ಲೋಕಸಭೆಯಲ್ಲಿ ಈ ತಿದ್ದುಪಡಿ ಮಸೂದೆ ಕುರಿತು 13.53 ಗಂಟೆ ಚರ್ಚೆ ನಡೆಸಲಾಗಿದೆ. ಮಸೂದೆ ಕುರಿತು ಮೂರು ಬಾರಿ ಮತದಾನವಾಗಿದ್ದು, ಸದನದ ನಿಯಮಗಳ ಪ್ರಕಾರವೇ ಅಂಗೀಕರಿಸಲಾಗಿದೆ' ಎಂದರು.

'ಮಧ್ಯರಾತ್ರಿ ವರೆಗೂ ವಿಸ್ತೃತ ಚರ್ಚೆ ನಂತರ ಮಸೂದೆಯನ್ನು ಅಂಗೀಕರಿಸಿದ ಮೇಲೂ, ಸದನದ ಕಲಾಪಗಳ ಕುರಿತು ಹಿರಿಯ ಸದಸ್ಯರೊಬ್ಬರು ಅವಹೇಳನಕಾರಿ ರೀತಿಯಲ್ಲಿ ಮಾತನಾಡುವುದು ಸರಿಯಲ್ಲ' ಎಂದು, ಸೋನಿಯಾ ಗಾಂಧಿ ಅವರ ಹೆಸರು ಉಲ್ಲೇಖಿಸದೆಯೇ ಓಂ ಬಿರ್ಲಾ ಹೇಳಿದರು.

**ಪ್ರತಿಭಟನೆ:** ಶೂನ್ಯ ವೇಳೆ ಆರಂಭಗೊಳ್ಳುತ್ತಿದ್ದಂತೆಯೇ, ಅಮೆರಿಕ ಶೇ 27ರಷ್ಟು ಪ್ರತಿ ಸುಂಕ ವಿಧಿಸಿರುವುದನ್ನು ಪ್ರಸ್ತಾಪಿಸಿದ ಕಾಂಗ್ರೆಸ್ ಸದಸ್ಯರು, ಸ್ಪೀಕರ್ ಪೀಠದ ಎದುರು ಪ್ರತಿಭಟನೆ ನಡೆಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಬಿರ್ಲಾ, 'ಈ ರೀತಿ ಪ್ರತಿಭಟಿಸುವುದು ಸಂಸದೀಯ ಪ್ರಜಾಪ್ರಭುತ್ವದ ಘನತೆಗೆ ವಿರುದ್ಧವಾದದ್ದು' ಎಂದು ಅಸಮಾಧಾನ ವ್ಯಕ್ತಪಡಿಸಿ ಸದನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದರು.

### ರಾಜ್ಯಸಭೆಯಲ್ಲೂ ಜಟಾಪಟಿ

ಪಶ್ಚಿಮ ಬಂಗಾಳದಲ್ಲಿ ಶಿಕ್ಷಕರ ಹಾಗೂ ಬೋಧಕೇತರ ಸಿಬ್ಬಂದಿ ನೇಮಕವನ್ನು ಅಸಿಂಧುಗೊಳಿಸಿ ಸುಪ್ರೀಂ ಕೋರ್ಟ್ ತೀರ್ಪು ನೀಡಿರುವುದನ್ನು ಬಿಜೆಪಿ ಸಂಸದರು ಪ್ರಸ್ತಾಪಿಸಿದರು. ಇದು, ಶೂನ್ಯ ವೇಳೆ ಹಾಗೂ ಪ್ರಶ್ನೋತ್ತರ ಅವಧಿಯನ್ನು ಎರಡು ಬಾರಿ ಮುಂದೂಡುವುದಕ್ಕೆ ಕಾರಣವಾಯಿತು.

ಬಿಜೆಪಿ ಸಂಸದ ಲಕ್ಷ್ಮೀಕಾಂತ ವಾಜಪೇಯಿ, ಸುಪ್ರೀಂ ತೀರ್ಪಿನ ಪಾಲನೆ ಮಾಡದೇ ಪಶ್ಚಿಮ ಬಂಗಾಳ ಸರ್ಕಾರ ಶಿಕ್ಷಕರ ನೇಮಕಾತಿ ಮಾಡುತ್ತಿದೆ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಟಿಎಂಸಿ ಸದನ ನಾಯಕ ಡೆರೆಕ್ ಓಬ್ರಯಾನ್, 'ಬಿಜೆಪಿ ಸಂಸದರು ಸಂಸತ್ ಕಲಾಪಕ್ಕೆ ಅಡ್ಡಿಪಡಿಸುತ್ತಿರುವುದನ್ನು ದೇಶದ ಜನತೆ ನೋಡುತ್ತಿದ್ದಾರೆ. ನನ್ನ ಅಭಿಪ್ರಾಯ ತಿಳಿಸಲು ಅವಕಾಶ ನೀಡದೇ, ಏರುದನಿಯಲ್ಲಿ ಘೋಷಣೆಗಳನ್ನು ಕೂಗುತ್ತಿದ್ದಾರೆ' ಎಂದರು.

### ಹಲವು ಭಾಷೆಗಳಲ್ಲಿ ಬೆದರಿಕೆ ಕರೆ: ಅನ್ವರ್ ಮಾಣಿಪ್ಪಾಡಿ

ಮಂಗಳೂರು: 'ವಕ್ಫ್ ತಿದ್ದುಪಡಿ ಮಸೂದೆಗೆ ಸಂಸತ್ತಿನ ಉಭಯ ಸದನಗಳಲ್ಲಿ ಅಂಗೀಕಾರ ಲಭಿಸಿದ ನಂತರ ನನಗೆ ಜೀವ ಬೆದರಿಕೆ ಕರೆಗಳು ಬಂದಿವೆ' ಎಂದು ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಮಾಜಿ ಅಧ್ಯಕ್ಷ ಅನ್ವರ್ ಮಾಣಿಪ್ಪಾಡಿ ಹೇಳಿದ್ದಾರೆ.

'ಗುರುವಾರ ರಾತ್ರಿ ಹಲವು ಬಾರಿ ಇಂಟರ್‌ನೆಟ್ ಕರೆಗಳು ಬಂದಿವೆ. ಕರೆ ಮಾಡಿದವರು ಇಂಗ್ಲಿಷ್, ಹಿಂದಿ, ಕನ್ನಡ, ತುಳು ಮತ್ತು ಮಲಯಾಳ ಭಾಷೆಗಳಲ್ಲಿ ಮಾತನಾಡಿದ್ದಾರೆ. ಅವರ ಪೈಕಿ ಒಬ್ಬ ವಿದೇಶಿ ಎಂಬುದು ಆತ ಮಾತನಾಡುವ ಶೈಲಿಯಿಂದ ಗೊತ್ತಾಗುತ್ತಿತ್ತು. ಎಲ್ಲರ ಮಾತಿನಲ್ಲೂ ಬೆದರಿಕೆಯ ಧಾಟಿ ಇತ್ತು. ನಿಮ್ಮನ್ನು ಸುಮ್ಮನೆ ಬಿಡುತ್ತೇವೆ ಎಂದುಕೊಳ್ಳಬೇಡಿ ಎಂದು ಒಬ್ಬ ಹೇಳಿದ್ದ' ಎಂದು ಅವರು ತಿಳಿಸಿದ್ದಾರೆ.

'ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷನಾಗಿದ್ದ ಸಂದರ್ಭದಲ್ಲಿ ನಾನು ವಕ್ಫ್ ಆಸ್ತಿ ಮತ್ತು ಅತಿಕ್ರಮಣಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಿದ್ದೆ. ಈಗ ವಕ್ಫ್ ತಿದ್ದುಪಡಿ ಮಸೂದೆಗೆ ಅಂಗೀಕಾರ ಸಿಕ್ಕಿದೆ. ಇದರಿಂದಾಗಿ ತಾಳ್ಮೆ ಕಳೆದುಕೊಂಡು ಬೆದರಿಕೆ ಕರೆ ಮಾಡಿರುವ ಸಾಧ್ಯತೆ ಇದೆ. ಪೊಲೀಸರಿಗೆ ಈ ಕುರಿತು ಮಾಹಿತಿ ನೀಡಿದ್ದೇನೆ. ಅವರು ಶೀಘ್ರ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದ್ದಾರೆ.

'ಅನ್ವರ್ ಮಾಣಿಪ್ಪಾಡಿ ಅವರಿಂದ ದೂರು ಬಂದಿಲ್ಲ. ಲಭ್ಯವಾದ ಮಾಹಿತಿ ಆಧರಿಸಿ ಪರಿಶೀಲಿಸಲಾಗುತ್ತಿದೆ' ಎಂದು ಮಂಗಳೂರು ಪೊಲೀಸ್ ಕಮಿಷನರ್ ಅನುಪಮ್ ಅಗ್ರವಾಲ್ ಸ್ಪಷ್ಟಪಡಿಸಿದ್ದಾರೆ.

### ಮಸೂದೆಗೆ ಬೆಂಬಲ: ಜೆಡಿಯು ತೊರೆದ ಮುಸ್ಲಿಂ ನಾಯಕರು

ಪಟ್ನಾ: ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಅಂಗೀಕರಿಸಲಾದ ವಕ್ಫ್ ತಿದ್ದುಪಡಿ ಮಸೂದೆಗೆ ಜೆಡಿಯು ಅಧ್ಯಕ್ಷ ಹಾಗೂ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಬೆಂಬಲಿಸಿದ್ದರಿಂದ ಬೇಸರಗೊಂಡು ಕೆಲ ಮುಸ್ಲಿಂ ನಾಯಕರು ಪಕ್ಷ ತೊರೆದಿದ್ದಾರೆ.

ಪಕ್ಷದ ರಾಜ್ಯ ಅಲ್ಪಸಂಖ್ಯಾತ ಘಟಕದ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯಸಭೆಯ ಮಾಜಿ ಸದಸ್ಯ ಗುಲಾಮ್ ರಸೂಲ್ ಬಲಿಯಾವಿ, ವಿಧಾನ ಪರಿಷತ್ ಸದಸ್ಯ ಗುಲಾಮ್ ಗೌಸ್, ಮೊಹಮ್ಮದ್ ತಬ್ರೇಜ್ ಸಿದ್ದಿಕಿ, ಮುಖಂಡ ಮೊಹಮ್ಮದ್ ಕಾಸಿಂ ಅನ್ಸಾರಿ ಜೆಡಿಯು ತೊರೆದಿರುವ ಪ್ರಮುಖರು.

'ನಿಮ್ಮಲ್ಲಿ ಮುಸ್ಲಿಮರು ಇಟ್ಟಿದ್ದ ನಂಬಿಕೆ ಛಿದ್ರವಾಗಿದೆ' ಎಂದು ನಿತೀಶ್ ಕುಮಾರ್ ಅವರಿಗೆ ಬರೆದ ಪತ್ರದಲ್ಲಿ ಗುಲಾಮ್ ರಸೂಲ್ ಹಾಗೂ ಗುಲಾಮ್ ಗೌಸ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ವಕ್ಫ್ ತಿದ್ದುಪಡಿ ಮಸೂದೆಗೆ ನೀವು ಬೆಂಬಲಿಸಿರುವುದು ಮುಸ್ಲಿಮರಿಗೆ ಆಘಾತ ತಂದಿದೆ' ಎಂದು ಅವರು ಹೇಳಿದ್ದಾರೆ.

ಈ ಬೆಳವಣಿಗೆಯಿಂದ ಜೆಡಿಯು ನಾಯಕತ್ವ ವಿಚಲಿತಗೊಂಡಂತೆ ಕಾಣುತ್ತಿಲ್ಲ.

'ಕೆಲ ಮುಸ್ಲಿಂ ಮುಖಂಡರು ಪಕ್ಷ ತೊರೆದಿದ್ದು, ಈ ಬೆಳವಣಿಗೆಯು ಪಕ್ಷದ ಮೇಲೆ ಯಾವುದೇ ಪರಿಣಾಮ ಉಂಟು ಮಾಡುವುದಿಲ್ಲ' ಎಂದು ಜೆಡಿಯು ನಾಯಕರು ಪ್ರತಿಕ್ರಿಯಿಸಿದ್ದಾರೆ.

ವಕ್ಫ್ ಮಸೂದೆಗೆ ಬೆಂಬಲಿಸುವ ಮೂಲಕ ಮುಖ್ಯಮಂತ್ರಿ ನಿತೀಶ್ ಕುಮಾರ್ 'ದ್ರೋಹ' ಎಸಗಿದ್ದಾರೆ ಎಂದು ದೂರಿದ್ದ ಕೆಲ ಮುಸ್ಲಿಂ ಧಾರ್ಮಿಕ ಮುಖಂಡರು ಹಾಗೂ ಸಂಘಟನೆಗಳ ನಾಯಕರು, ಅವರು ಪಕ್ಷದಿಂದ ಆಯೋಜಿಸಿದ್ದ ಇಫ್ತಾರ್ ಕೂಟವನ್ನು ಬಹಿಷ್ಕರಿಸಿದ್ದರು.

## ನೀಟ್ ವಿರೋಧಿ ಮಸೂದೆಗೆ ತಡೆ

ಪ್ರಜಾವಾಣಿ ವಾರ್ತೆ

> ಕೇಂದ್ರ ಸರ್ಕಾರವು ತಮಿಳುನಾಡು ವಿಧಾನಸಭೆಯು ಅಂಗೀಕರಿಸಿದ ಮಸೂದೆ ಮತ್ತು ಜನಾಭಿಪ್ರಾಯವನ್ನು ಕಡೆಗಣಿಸಿದೆ. ಜನರು ಇದನ್ನು ಗಮನಿಸುತ್ತಿದ್ದಾರೆ
> **ಎಂ.ಕೆ. ಸ್ಟಾಲಿನ್**, ತಮಿಳುನಾಡು ಮುಖ್ಯಮಂತ್ರಿ

ಚೆನ್ನೈ: 'ತಮಿಳುನಾಡು ವಿದ್ಯಾರ್ಥಿಗಳಿಗೆ ನೀಟ್‌ನಿಂದ ವಿನಾಯಿತಿ ನೀಡುವಂತೆ ವಿಧಾನಸಭೆ ಅಂಗೀಕರಿಸಿದ್ದ ಮಸೂದೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಒಪ್ಪಿಗೆ ಸೂಚಿಸದೆ, ತಡೆಹಿಡಿದಿದ್ದಾರೆ. ಈ ಬೆಳವಣಿಗೆ ದೇಶದ ಒಕ್ಕೂಟ ವ್ಯವಸ್ಥೆಯ ಕರಾಳ ಅಧ್ಯಾಯ' ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಶುಕ್ರವಾರ ಹೇಳಿದ್ದಾರೆ.

ನೀಟ್ ಹಾಜರಾತಿಯಿಂದ ತಮಿಳುನಾಡಿನ ವಿದ್ಯಾರ್ಥಿಗಳಿಗೆ ವಿನಾಯಿತಿ ಖಚಿತಪಡಿಸಿಕೊಳ್ಳಲು ಡಿಎಂಕೆ ಸರ್ಕಾರವು ಕಾನೂನು ಮಾರ್ಗ ಸೇರಿ ಎಲ್ಲ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುವ ಪ್ರಯತ್ನ ಮುಂದುವರಿಸಲಿದೆ. ಮುಂದಿನ ಹೆಜ್ಜೆಯ ಬಗ್ಗೆ ಚರ್ಚಿಸಲು ಇದೇ 9 ರಂದು ಸರ್ವಪಕ್ಷಗಳ ಶಾಸಕಾಂಗ ಪಕ್ಷದ ನಾಯಕರ ಸಭೆ ಕರೆಯಲಾಗಿದೆ ಎಂದು ಸ್ಟಾಲಿನ್ ವಿಧಾನಸಭೆಗೆ ತಿಳಿಸಿದರು.

'ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳು ಕೇಳಿದ ಎಲ್ಲ ಪ್ರಶ್ನೆಗಳಿಗೆ ರಾಜ್ಯ ಸರ್ಕಾರ ವಿವರಣೆಗಳನ್ನು ನೀಡಿದೆ. ಆದರೆ, ಇದನ್ನು ಸ್ವೀಕರಿಸದೆ, ಕೇಂದ್ರವು ಮಸೂದೆಗೆ ಒಪ್ಪಿಗೆ ನೀಡಲು ನಿರಾಕರಿಸಿದೆ' ಎಂದು ಸ್ಟಾಲಿನ್ ಹೇಳಿದ್ದಾರೆ.

2021ರ ವಿಧಾನಸಭಾ ಚುನಾವಣೆಗೂ ಮುನ್ನ ಡಿಎಂಕೆ ತಮಿಳುನಾಡಿನ ವಿದ್ಯಾರ್ಥಿಗಳಿಗೆ ನೀಟ್‌ನಿಂದ ವಿನಾಯಿತಿ ನೀಡುವ ಭರವಸೆ ಕೊಟ್ಟಿತ್ತು.

## 'ಎಂಪುರಾನ್' ನಿರ್ಮಾಪಕ ಕಚೇರಿಗಳಲ್ಲಿ ಇ.ಡಿ ಶೋಧ

ಕೊಚ್ಚಿ/ನವದೆಹಲಿ (ಪಿಟಿಐ): ನಟ ಮೋಹನ್‌ಲಾಲ್ ಅಭಿನಯದ 'ಎಲ್2: ಎಂಪುರಾನ್' ಚಿತ್ರದ ನಿರ್ಮಾಪಕ, ಕೇರಳದ ಉದ್ಯಮಿ ಗೋಕುಲಂ ಗೋಪಾಲನ್ ಅವರ ಚಿಟ್ ಫಂಡ್ ಕಂಪನಿಯ ಕಚೇರಿಗಳಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ) ಶುಕ್ರವಾರ ಶೋಧ ಕಾರ್ಯ ನಡೆಸಿತು.

ವಿದೇಶಿ ವಿನಿಮಯ ಕಾಯ್ದೆ (ಫೆಮಾ) ಉಲ್ಲಂಘಿಸಿರುವ ಪ್ರಕರಣ ಸಂಬಂಧ ಈ ಶೋಧ ಕಾರ್ಯ ಕೈಗೊಳ್ಳಲಾಗಿದೆ. ತಮಿಳುನಾಡು, ಕೇರಳ ಸೇರಿದಂತೆ ವಿವಿಧ ರಾಜ್ಯಗಳ ಐದು ಸ್ಥಳಗಳಲ್ಲಿ ಅಧಿಕಾರಿಗಳು ಶೋಧ ನಡೆಸಿದರು ಎಂದು ಮೂಲಗಳು ತಿಳಿಸಿವೆ.

ಚೆನ್ನೈನಲ್ಲಿರುವ ಕೋಡಂಬಾಕಂನ ಕಂಪನಿಯ ಕಚೇರಿ ಹಾಗೂ ನೀಲಾಂಕರೈನಲ್ಲಿರುವ ಗೋಪಾಲನ್ ಅವರ ಫಾರ್ಮ್‌ಹೌಸ್‌ನಲ್ಲಿಯೂ ಶೋಧ ನಡೆಸಲಾಗಿದೆ.

ಕೆಲವು ಅನಿವಾಸಿ ಭಾರತೀಯರ ಜೊತೆಗಿನ ₹1,000 ಕೋಟಿ ಮೊತ್ತದಷ್ಟು ಅನಧಿಕೃತ ವ್ಯವಹಾರ ನಡೆಸಿದ್ದ ಆರೋಪದ ಮೇಲೆ ಗೋಪಾಲನ್ ಹಾಗೂ ಅವರ ಕಂಪನಿ ಶ್ರೀ ಗೋಪಾಲನ್ ಚಿಟ್ ಆ್ಯಂಡ್ ಫೈನಾನ್ಸ್ ಕಂಪನಿ ಲಿಮಿಟೆಡ್ ಮೇಲೆ ಇ.ಡಿ ದಾಳಿ ನಡೆಸಿದೆ.

# 'ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಕೋರ್ಟ್‌ಗೆ'

## ವಕ್ಫ್ ತಿದ್ದುಪಡಿ ಮಸೂದೆ ಅಂಗೀಕಾರಗೊಂಡ ಬೆನ್ನಲ್ಲೇ ಕಾಂಗ್ರೆಸ್ ಘೋಷಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್‌ನಲ್ಲಿ ಅಂಗೀಕರಿಸಲಾಗಿರುವ ವಿವಾದಾತ್ಮಕ ವಕ್ಫ್ (ತಿದ್ದುಪಡಿ) ಮಸೂದೆಯ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಶೀಘ್ರವೇ ಕೋರ್ಟ್ ಮೆಟ್ಟಿಲೇರಲಾಗುವುದು ಎಂದು ಕಾಂಗ್ರೆಸ್ ಶುಕ್ರವಾರ ಹೇಳಿದೆ.

'ಸಮಾಜವನ್ನು ಶಾಶ್ವತವಾಗಿ ಧ್ರುವೀಕರಣಗೊಂಡ ಸ್ಥಿತಿಯಲ್ಲಿ ಇಡುವ ಬಿಜೆಪಿಯ ಉದ್ದೇಶಪೂರ್ವಕ ಕಾರ್ಯತಂತ್ರದ ಭಾಗವೇ ಈ ಮಸೂದೆ' ಎಂದೂ ಕಾಂಗ್ರೆಸ್ ಟೀಕಿಸಿದೆ.

'ಈ ಹಿಂದೆ ಪೌರತ್ವ ತಿದ್ದುಪಡಿ ಕಾಯ್ದೆ–2019, ಚುನಾವಣೆ ನಿರ್ವಹಣೆ ನಿಯಮಗಳು(2024) ಹಾಗೂ ಪೂಜಾಸ್ಥಳಗಳ ಕಾಯ್ದೆ–1991ಕ್ಕೆ ತಂದಿದ್ದ ತಿದ್ದುಪಡಿ ವಿರುದ್ಧ ಪಕ್ಷವು ಕಾನೂನಾತ್ಮಕ ಹೋರಾಟ ನಡೆಸಿತ್ತು' ಎಂದಿರುವ ಕಾಂಗ್ರೆಸ್, ಸಂವಿಧಾನದಲ್ಲಿ ಅಡಕವಾಗಿರುವ ತತ್ವಗಳು, ಅವಕಾಶಗಳ ಮೇಲೆ ನರೇಂದ್ರ ಮೋದಿ ನೇತೃತ್ವದ ಸರ್ಕಾರ ನಡೆಸಲಿರುವ ದಾಳಿಗಳಿಗೆ ಪ್ರತಿರೋಧ ಒಡ್ಡುವುದನ್ನು ಪಕ್ಷ ಮುಂದುವರಿಸಲಿದೆ' ಎಂದಿದೆ.

ವಕ್ಫ್ ತಿದ್ದುಪಡಿ ಮಸೂದೆ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗುವುದು ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ವಿಧಾನಸಭೆಯಲ್ಲಿ ಘೋಷಿಸಿದ ಮಾರನೇ ದಿನವೇ ಕಾಂಗ್ರೆಸ್‌ನಿಂದ ಈ ಹೇಳಿಕೆ ಹೊರಬಿದ್ದಿದೆ.




ವಕ್ಫ್ ತಿದ್ದುಪಡಿ ಮಸೂದೆ ಅಂಗೀಕಾರ ವಿರೋಧಿಸಿ ಎಸ್‌ಡಿಪಿಐ ಸದಸ್ಯರು ಬೆಂಗಳೂರಿನಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

'ಅಲ್ಪಸಂಖ್ಯಾತರಿಗೆ ತೊಂದರೆ ಕೊಡುವ ಉದ್ದೇಶದಿಂದಲೇ ವಕ್ಫ್ ತಿದ್ದುಪಡಿ ಮಸೂದೆ ರೂಪಿಸಲಾಗಿದೆ ಎಂಬ ಭಾವನೆ ದೇಶದೆಲ್ಲೆಡೆ ಮನೆ ಮಾಡಿದೆ. ಲೋಕಸಭೆಯಲ್ಲಿ ತಡರಾತ್ರಿ ಈ ಮಸೂದೆಯನ್ನು ಮತಕ್ಕೆ ಹಾಕಲಾಯಿತು. ಮಸೂದೆ ಪರವಾಗಿ 288 ಹಾಗೂ ವಿರುದ್ಧವಾಗಿ 232 ಮತಗಳು ಬಿದ್ದವು. ಇದು ಹೇಗೆ ಸಾಧ್ಯವಾಯಿತು? ಮಸೂದೆಯಲ್ಲಿ ನ್ಯೂನತೆಗಳಿವೆ ಎಂಬುದನ್ನು ಇದು ತೋರಿಸುತ್ತದೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

'ಮುಸ್ಲಿಮರನ್ನು ತುಳಿಯಲು ಈ ಮಸೂದೆ ಒಂದು ಆಯುಧವಾಗಿದ್ದು, ಅವರ ವೈಯಕ್ತಿಕ ಕಾನೂನುಗಳು ಹಾಗೂ ಆಸ್ತಿ ಹಕ್ಕುಗಳನ್ನು ಕಸಿಯುವ ಉದ್ದೇಶವನ್ನೂ ಈ ಮಸೂದೆ ಹೊಂದಿದೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಟೀಕಿಸಿದ್ದಾರೆ.

> ವಕ್ಫ್ ಜಮೀನುಗಳನ್ನು ವಶಪಡಿಸಿಕೊಂಡು, ಅವುಗಳನ್ನು ತನ್ನ ಬಂಡವಾಳಶಾಹಿ ಸ್ನೇಹಿತರಿಗೆ ಹಂಚುವ ವ್ಯವಸ್ಥೆಯೊಂದನ್ನು ಮೋದಿ ನೇತೃತ್ವದ ಸರ್ಕಾರ ರೂಪಿಸಿದೆ
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

## ಮಕ್ಕಳಿಂದ ಜಾಲತಾಣ ಬಳಕೆ ನಿಷೇಧ ಕೋರಿದ್ದ ಅರ್ಜಿ ವಜಾ

ನವದೆಹಲಿ(ಪಿಟಿಐ): 13 ವರ್ಷ ಒಳಗಿನ ಮಕ್ಕಳು ಸಾಮಾಜಿಕ ಮಾಧ್ಯಮಗಳನ್ನು ಬಳಸುವುದನ್ನು ನಿಷೇಧಿಸುವಂತೆ ಕೋರಿದ್ದ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿದೆ.

'ಈ ಬೇಡಿಕೆಯುಳ್ಳ ಮನವಿಪತ್ರವನ್ನು ಅರ್ಜಿದಾರರು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಸಲ್ಲಿಸಬಹುದು' ಎಂದು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಹಾಗೂ ಆಗಸ್ಟೀನ್ ಜಾರ್ಜ್ ಮಸೀಹ್ ಅವರು ಇದ್ದ ನ್ಯಾಯಪೀಠ ಹೇಳಿದೆ. 'ಇದು ನೀತಿ ನಿರೂಪಣೆಗೆ ಸಂಬಂಧಿಸಿದ ವಿಚಾರ. ಈ ಕುರಿತು ಕಾಯ್ದೆ ರೂಪಿಸುವಂತೆ ಸಂಸತ್‌ಗೆ ಮನವಿ ಮಾಡಿ' ಎಂದು ಅರ್ಜಿದಾರರ ಪರ ವಕೀಲರಿಗೆ ಹೇಳಿದ ಪೀಠ, ಅರ್ಜಿ ವಿಲೇವಾರಿ ಮಾಡಿತು. ಝೆಪ್ ಫೌಂಡೇಷನ್ ಈ ಕುರಿತು ಅರ್ಜಿ ಸಲ್ಲಿಸಿತ್ತು.

## 3 ರಾಜ್ಯಗಳಲ್ಲಿ ರಣಹದ್ದು ಸಂಖ್ಯೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ಚೆನ್ನೈ: ಕರ್ನಾಟಕ, ತಮಿಳುನಾಡು ಮತ್ತು ಕೇರಳದ ಏಳು ಹುಲಿ ಮೀಸಲು ಮತ್ತು ಅರಣ್ಯ ಪ್ರದೇಶಗಳಲ್ಲಿ ರಣಹದ್ದುಗಳ ಸಂಖ್ಯೆ ಗಮನಾರ್ಹವಾಗಿ ಹೆಚ್ಚಳವಾಗಿರುವುದು ಸಮೀಕ್ಷೆಯಲ್ಲಿ ಕಂಡುಬಂದಿದೆ.

ತೀರಾ ಅಳಿವಿನಂಚಿನಲ್ಲಿರುವ ಪಕ್ಷಿಗಳೆನಿಸಿರುವ ರಣಹದ್ದುಗಳ ಸಂಖ್ಯೆ 2023–24ರಲ್ಲಿ 320 ಇತ್ತು. ಈಗ ಇವುಗಳ ಸಂಖ್ಯೆ 390ಕ್ಕೆ ಏರಿಕೆಯಾಗಿದೆ ಎಂದು ಕ್ರೋಡೀಕೃತ ಸಮೀಕ್ಷೆ ಹೇಳಿದೆ.

ಕಳೆದ ಫೆಬ್ರುವರಿ 27 ಮತ್ತು 28ರಂದು ಕರ್ನಾಟಕದ ಬಂಡೀಪುರ ಹುಲಿ ಮೀಸಲು ಅರಣ್ಯ, ಬಿಆರ್‌ಟಿ ಹುಲಿ ಮೀಸಲು ಅರಣ್ಯ ಮತ್ತು ನಾಗರಹೊಳೆ ಹುಲಿ ಮೀಸಲು ಅರಣ್ಯ, ತಮಿಳುನಾಡಿನ ಮುದುಮಲೈ ಹುಲಿ ಮೀಸಲು ಅರಣ್ಯ, ಸತ್ಯಮಂಗಲದ ಹುಲಿ ಮೀಸಲು ಅರಣ್ಯ ಮತ್ತು ನೆಲ್ಲೈ ಅರಣ್ಯ ವಿಭಾಗ, ಕೇರಳದ ವಯನಾಡ್ ವನ್ಯಜೀವಿ ಅಭಯಾರಣ್ಯದಲ್ಲಿ ರಣಹದ್ದುಗಳ ಸಮೀಕ್ಷೆ ನಡೆಸಲಾಗಿದೆ.



ಸಣ್ಣ ಕೊಕ್ಕಿನ ರಣಹದ್ದು

ಗಣತಿ ವೇಳೆ, ಉದ್ದ ಕೊಕ್ಕಿನ ರಣಹದ್ದು, ಕೆಂಪುತಲೆಯ ರಣಹದ್ದು, ಈಜಿಪ್ಷಿನ ರಣಹದ್ದು, ಬಿಳಿ ಪುಕ್ಕದ ರಣಹದ್ದು ಹೀಗೆ ಐದು ಪ್ರಭೇದಗಳನ್ನು ದಾಖಲಿಸಿದೆ. ತಮಿಳುನಾಡಿನಲ್ಲಿ ಒಟ್ಟು 157 ರಣಹದ್ದುಗಳು ಕಂಡುಬಂದಿವೆ. ಇವುಗಳಲ್ಲಿ ಬಿಳಿ ಪುಕ್ಕದ ರಣಹದ್ದು ಅತ್ಯಂತ ಹೇರಳವಾಗಿರುವ ಪಕ್ಷಿ ಪ್ರಭೇದವಾಗಿದ್ದು, ಈ ಪ್ರಭೇದದ 110, ಉದ್ದ ಕೊಕ್ಕಿನ 31, ಕೆಂಪುತಲೆಯ 11 ಹಾಗೂ 5 ಈಜಿಪ್ಟ್ ರಣಹದ್ದುಗಳು ರಾಜ್ಯದ ಅಭಯಾರಣ್ಯಗಳಲ್ಲಿ ಕಂಡುಬಂದಿವೆ.

ಮುದುಮಲೈ ಹುಲಿ ಮೀಸಲು ಅರಣ್ಯದಲ್ಲಿ 119, ಸತ್ಯಮಂಗಲದಲ್ಲಿ 33, ಬಂಡಿಪುರದಲ್ಲಿ 77, ಬಿಆರ್‌ಟಿಯಲ್ಲಿ 8, ನಾಗರಹೊಳೆಯಲ್ಲಿ 23, ವಯನಾಡ್‌ನಲ್ಲಿ 125 ಹಾಗೂ ನೆಲ್ಲೈನಲ್ಲಿ 5 ರಣಹದ್ದುಗಳು ಕಂಡುಬಂದಿವೆ.

ಮುದುಮಲೈ ಹುಲಿ ಮೀಸಲು ಅರಣ್ಯವು ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಕೆಂಪು ತಲೆಯ ರಣಹದ್ದು ಗೂಡುಗಳನ್ನು ಹೊಂದಿರುವ, ರಣಹದ್ದುಗಳ ಗಮನಾರ್ಹ ಸಂಖ್ಯೆಯ ಸಂತಾನೋತ್ಪತ್ತಿಯ ನೆಲೆಯಾಗಿದೆ. ಇಲ್ಲಿ 60 ಸಕ್ರಿಯ ಗೂಡುಗಳನ್ನು ಹೊಂದಿರುವ 8 ಜಾಗಗಳಿವೆ. 120 ರಣಹದ್ದುಗಳಿರುವ ಅಂದಾಜು ಇದೆ ಎಂದು ಸಮೀಕ್ಷೆ ಹೇಳಿದೆ.

# ಆತ್ಮಹತ್ಯೆ: ಬಿಜೆಪಿಗೆ ಹೊಸ ಅಸ್ತ್ರ

ಒಂದನೇ ಪುಟದಿಂದ...

ಆತ್ಮಹತ್ಯೆಯ ವಿಷಯ ಶುಕ್ರವಾರ ಬೆಳಿಗ್ಗೆ ಗೊತ್ತಾಗುತ್ತಿದ್ದಂತೆಯೇ ಕೊಡಗು ಮತ್ತು ಬೆಂಗಳೂರಿನಲ್ಲಿ ಬಿಜೆಪಿ ನಾಯಕರು, ಹೋರಾಟದ ಹಾದಿ ಹಿಡಿದರು. ಮೃತ ಶರೀರ ಇಡಲಾಗಿದ್ದ ಡಾ. ಅಂಬೇಡ್ಕರ್ ಆಸ್ಪತ್ರೆಗೆ ಧಾವಿಸಿದ ವಿರೋಧ ಪಕ್ಷದ ನಾಯಕರಾದ ಆರ್. ಅಶೋಕ, ಛಲವಾದಿ ನಾರಾಯಣಸ್ವಾಮಿ ಮತ್ತು ಇತರ ನಾಯಕರು, ಕಾಂಗ್ರೆಸ್ ನಾಯಕರ ಬೆದರಿಕೆಯಿಂದ ವಿನಯ್ ಆತ್ಮಹತ್ಯೆ ಮಾಡಿಕೊಂಡಿದ್ದು, ಇದು ರಾಜಕೀಯ ದ್ವೇಷದ ಹತ್ಯೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಅತ್ತ ಕೊಡಗಿನಲ್ಲಿ ಕೂಡ ಬಿಜೆಪಿ ನಾಯಕರು–ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಕಾಂಗ್ರೆಸ್ ಕೂಡ ತನ್ನ ಶಾಸಕರ ಪರ ನಿಂತಿದ್ದು, ಆತ್ಮಹತ್ಯೆಯು ರಾಜಕೀಯ ಕದನವಾಗಿ ಮಾರ್ಪಾಟಾಗಿದೆ.

**ಪ್ರಕರಣವೇನು?:** ಸೋಮವಾರಪೇಟೆ ತಾಲ್ಲೂಕಿನ ಗೋಣಿಮರೂರು ಗ್ರಾಮದ ವಿನಯ್ ಅವರು ಪತ್ನಿ ಹಾಗೂ ಪುತ್ರಿಯ ಜತೆಗೆ ನಗರದ ಎಚ್‌ಬಿಆರ್ ಲೇಔಟ್‌ನಲ್ಲಿ ನೆಲಸಿದ್ದರು. ನಗರದ ಕಂಪನಿಯೊಂದರಲ್ಲಿ ಕಾರ್ಯಾಚರಣೆ ವಿಭಾಗದ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದರು. 'ಕೊಡಗಿನ ಸಮಸ್ಯೆಗಳು ಮತ್ತು ಪರಿಹಾರ' ಹೆಸರಿನ ವಾಟ್ಸ್ಆ್ಯಪ್ ಗ್ರೂಪ್ ಅಡ್ಮಿನ್ ಆಗಿದ್ದರು. ಅದರಲ್ಲಿ ಪೋಸ್ಟ್ ಮಾಡಲಾದ ಸಂದೇಶವೊಂದರ ಸಂಬಂಧ ಅವರ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

ನಾಗವಾರದ ಕಂಪನಿಯ ಗೋದಾಮಿನ ಫ್ಯಾನ್‌ಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು. ಆತ್ಮಹತ್ಯೆಯ ಸುದ್ದಿ ತಿಳಿಯುತ್ತಿದ್ದಂತೆಯೇ ಮೃತದೇಹ ಇರಿಸಿದ್ದ ಅಂಬೇಡ್ಕರ್ ಆಸ್ಪತ್ರೆಯ ಎದುರು ಜಮಾಯಿಸಿದ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು, ಪೊನ್ನಣ್ಣ, ಮಂಥರ್‌ಗೌಡ ಹಾಗೂ ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆಯ ಕೊಡಗು ಜಿಲ್ಲಾ ಅಧ್ಯಕ್ಷ ತನ್ನೀರಾ ಮೈನಾ ಅವರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಪಟ್ಟು ಹಿಡಿದರು. ಕೊಡಗು ಜಿಲ್ಲೆಯಿಂದ ಬಂದಿದ್ದ ಕಾರ್ಯಕರ್ತರೊಂದಿಗೆ ಬಿಜೆಪಿ ಮುಖಂಡರು ಸೇರಿ ಪ್ರತಿಭಟನೆ ನಡೆಸಿದರು.

ಪೊನ್ನಣ್ಣ, ಮಂಥರ್‌ಗೌಡ, ತನ್ನೀರಾ ಮೈನಾ ಅವರ ಕಿರುಕುಳ ಹಾಗೂ ಬೆದರಿಕೆಯಿಂದ ವಿನಯ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದಾಗಿ ಅವರ ಸಹೋದರ ಕೆ.ಎಸ್.ಜೀವನ್ ಅವರು ಹೆಣ್ಣೂರು ಠಾಣೆಗೆ ಶುಕ್ರವಾರ ಮಧ್ಯಾಹ್ನ ದೂರು ನೀಡಿದರು. ತನ್ನೀರಾ ಮೈನಾ ಮತ್ತು ಇತರರ ವಿರುದ್ಧ ಹೆಣ್ಣೂರು ಪೊಲೀಸರು ಎಫ್‌ಐಆರ್ ದಾಖಲಿಸಿದರು. ಶಾಸಕರ ಹೆಸರನ್ನು ಎಫ್‌ಐಆರ್‌ನಲ್ಲಿ ಉಲ್ಲೇಖಿಸದೇ ಇರುವುದು ಪೊಲೀಸರ ವಿರುದ್ಧ ಬಿಜೆಪಿ ಮುಖಂಡರ ಆಕ್ರೋಶ ಹೆಚ್ಚುವಂತೆ ಮಾಡಿತು. 'ಸರ್ಕಾರ ಹೇಳಿದಂತೆ ಕೇಳುತ್ತಿದ್ದೀರಾ' ಎಂದು ಪೊಲೀಸರ ವಿರುದ್ಧ ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

'ವಿನಯ್ ಅವರ ಮರಣ ಪತ್ರದಲ್ಲಿ ಶಾಸಕರಿಬ್ಬರ ಹೆಸರು ಉಲ್ಲೇಖಿಸಿದ್ದಾರೆ. ಪೊನ್ನಣ್ಣ ಹಾಗೂ ಮಂಥರ್‌ಗೌಡ ಅವರ ವಿರುದ್ಧವೂ ಎಫ್‌ಐಆರ್ ದಾಖಲಿಸಬೇಕು' ಎಂದು ಆಗ್ರಹಿಸಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹಾಗೂ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರ ನೇತೃತ್ವದಲ್ಲಿ ಆಸ್ಪತ್ರೆ ಎದುರು ಪ್ರತಿಭಟನೆ ತೀವ್ರ ಸ್ವರೂಪ ಪಡೆದುಕೊಂಡಿತು.

ವಿನಯ್ ಅವರು ಮರಣ ಪತ್ರದಲ್ಲಿ ಉಲ್ಲೇಖಿಸಿರುವ ಎಲ್ಲ ಅಂಶಗಳ ಕುರಿತೂ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಪೊಲೀಸರು ಭರವಸೆ ನೀಡಿದ ಮೇರೆಗೆ ರಾತ್ರಿ ಪ್ರತಿಭಟನೆ ಕೈಬಿಡಲಾಯಿತು. ಬಳಿಕ ಕುಟುಂಬದ ಸದಸ್ಯರಿಗೆ ಮೃತದೇಹ ಹಸ್ತಾಂತರ ಮಾಡಲಾಯಿತು. ಬಿಗಿ ಭದ್ರತೆಯಲ್ಲಿ ಮೃತದೇಹವನ್ನು ಸ್ವಗ್ರಾಮ ಗೋಣಿಮರೂರಿನತ್ತ ಕೊಂಡೊಯ್ಯಲಾಯಿತು.

**ದೂರಿನಲ್ಲಿ ಏನಿದೆ?:** 'ವಿನಯ್ ಸೋಮಯ್ಯ ಅವರು ಸಮಾಜಮುಖಿ, ಕ್ರಿಯಾಶೀಲ ವ್ಯಕ್ತಿ ಆಗಿದ್ದರು. ತಮ್ಮ ಹುಟ್ಟೂರಾದ ಕೊಡಗಿನ ಬಗ್ಗೆ ಹೆಚ್ಚಿನ ಕಾಳಜಿ ಹೊಂದಿದ್ದು, ತನ್ನ ತಾಯಿ ಹಾಗೂ ಸ್ನೇಹಿತರನ್ನು ಭೇಟಿಯಾಗಲು ಆಗಾಗ್ಗೆ ಊರಿಗೆ ಹೋಗುತ್ತಿದ್ದರು. ಫೆಬ್ರುವರಿಯಲ್ಲಿ ಕರೆ ಮಾಡಿ, ತನ್ನೀರಾ ಮೈನಾ ಮತ್ತು ಇತರರು 'ಕೊಡಗಿನ ಸಮಸ್ಯೆಗಳು ಮತ್ತು ಪರಿಹಾರ' ಹೆಸರಿನ ವಾಟ್ಸ್ಆ್ಯಪ್ ಗ್ರೂಪ್ ಅಡ್ಮಿನ್ ಆಗಿದ್ದಕ್ಕೆ ಸುಳ್ಳು ಆರೋಪ ಹೊರಿಸಿ ಎಫ್‌ಐಆರ್ ದಾಖಲಿಸಿದ್ದಾರೆ ಎಂಬುದಾಗಿ ಮಾಹಿತಿ ನೀಡಿದ್ದರು. ನಂತರ, ಹೈಕೋರ್ಟ್‌ನಲ್ಲಿ ಎಫ್‌ಐಆರ್‌ಗೆ ತಡೆ ತಂದಿರುವುದಾಗಿ ಹೇಳಿದ್ದರು' ಎಂದು ಜೀವನ್ ನೀಡಿದ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

'ಎಫ್‌ಐಆರ್‌ಗೆ ಹೈಕೋರ್ಟ್ ತಡೆ ನೀಡಿದ ಬಳಿಕವೂ ತನ್ನೀರಾ ಮೈನಾ ಹಾಗೂ ಇತರರು ಕಿರುಕುಳ ನೀಡುತ್ತಿದ್ದರು ಎಂದು ವಿನಯ್ ಹೇಳಿಕೊಂಡಿದ್ದರು. ಮಡಿಕೇರಿ ನಗರ ಠಾಣೆಯ ಪೊಲೀಸರು ಕುಟುಂಬದವರನ್ನು ಭೇಟಿ ಮಾಡಿ ವಿನಯ್ ಕುರಿತು ಮಾಹಿತಿ ನೀಡುವಂತೆ ಒತ್ತಡ ಹೇರುತ್ತಿದ್ದರು. ರೌಡಿಪಟ್ಟಿಗೆ ಸೇರಿಸುವುದಾಗಿ ಬೆದರಿಕೆ ಹಾಕುತ್ತಿದ್ದರು. ನಿರಂತರ ಒತ್ತಡ, ಕಿರುಕುಳ, ಬೆದರಿಕೆಯಿಂದ ವಿನಯ್ ಸೋಮಯ್ಯ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಎಫ್‌ಐಆರ್‌ನಲ್ಲಿ ವಿವರಿಸಲಾಗಿದೆ.

### ಮರಣ ಪತ್ರ: ಶಾಸಕರ ಹೆಸರು ಉಲ್ಲೇಖ?

ಒಂದನೇ ಪುಟದಿಂದ...

'ರಾಜಕೀಯ ದ್ವೇಷಕ್ಕೆ ನಮ್ಮ ಜೀವನದ ಜೊತೆ ಆಟವಾಡಿದ ತನ್ನೀರಾ ಮೈನಾ ಅವರು ನನ್ನ ಸಾವಿಗೆ ನೇರ ಹೊಣೆ' ಎಂದು ಬರೆಯಲಾಗಿದೆ.

'ನಮ್ಮ ಮೇಲೆ ಎಫ್‌ಐಆರ್ ಹಾಕಿಸಿ, ಕಿಡಿಗೇಡಿಗಳು ಅಂತ ಇಡೀ ಕೊಡಗಿಗೆ ವೈರಲ್ ಮಾಡಿದ್ದು ಕೂಡಾ ಇವನೇ. ಎಫ್‌ಐಆರ್ ಆದ ದಿನದಿಂದ ಜಾಮೀನು ಸಿಗುವ ತನಕ ನಾನು, ನನ್ನ ಅಮ್ಮನ ಜೊತೆಗೂ ಮಾತಾಡಿಲ್ಲ. ತನ್ನೀರಾ ಮೈನಾನ ಕಾರಣಕ್ಕಾಗಿ ಜೀವ ಕಳೆದುಕೊಳ್ಳುತ್ತಿರುವ ವ್ಯಕ್ತಿ ನಾನು ಮೊದಲಿಗನಲ್ಲ. ಸಂಬಂಧಪಟ್ಟ ಅಧಿಕಾರಿಗಳು ಆತ್ಮಹತ್ಯೆಯ ತನಿಖೆ ನಡೆಸಿ ಅಪರಾಧಿಗಳಿಗೆ ಶಿಕ್ಷೆ ಕೊಡಿಸಬೇಕು' ಎಂದು ಬರೆಯಲಾಗಿದೆ.

'ಆ ಗ್ರೂಪ್‌ನಲ್ಲಿರುವ ಯಾರನ್ನೇ ಕೇಳಿ, ನನ್ನ ಒಂದು ಮೆಸೇಜ್ ಕೂಡಾ ಯಾರ ತೇಜೋವಧೆ ಮಾಡುವ ಹಾಗೂ ಇರಲಿಲ್ಲ. ನಾವು ಅಭಿವೃದ್ಧಿ ಬಗ್ಗೆ ಪ್ರಶ್ನೆ ಮಾಡಿದ್ದಕ್ಕಾಗಿ ಕೆಲವು ರಾಜಕೀಯ ವಿರೋಧಿಗಳು ಷಡ್ಯಂತ್ರ ಮಾಡಿ ಎಫ್‌ಐಆರ್ ಹಾಕಿಸಿದ್ದರು' ಎಂದು ಉಲ್ಲೇಖಿಸಲಾಗಿದೆ.

'ಜಾಮೀನು ಸಿಕ್ಕಿದರೂ ವಿರಾಜಪೇಟೆಯ ಶಾಸಕ ಪೊನ್ನಣ್ಣನ ಆದೇಶದಂತೆ ಮಡಿಕೇರಿಯ ಪೊಲೀಸರು ನನ್ನನ್ನು ಹುಡುಕಾಟ ನಡೆಸುತ್ತಿದ್ದರು. ಕುಶಾಲನಗರದ ಸರ್ಕಾರಿ ಆಸ್ಪತ್ರೆಯ ವ್ಯವಸ್ಥೆಯ ಬಗ್ಗೆ ವಾಟ್ಸ್ಆ್ಯಪ್ ಗ್ರೂಪ್‌ನಲ್ಲಿ ಪ್ರಶ್ನಿಸಿದ್ದಕ್ಕೆ ಮಡಿಕೇರಿ ಶಾಸಕ ಮಂಥರ್‌ಗೌಡ ಗದರಿದ್ದರು. ಗ್ರೂಪ್‌ನಲ್ಲಿ ಹಾಕಿದರೆ ಸರಿ ಇರಲ್ಲ ಎಂದೂ ಹೇಳಿದ್ದರು' ಎಂದು ಉಲ್ಲೇಖಿಸಲಾಗಿದೆ.

'ವಿನಯ್ ಅವರ ಹೆಸರಿನಲ್ಲಿರುವ ಬರಹವನ್ನು ಪರಿಶೀಲಿಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

### ವಿನಯ್ ವಿರುದ್ಧದ ಪ್ರಕರಣ ಏನು?

ಒಂದನೇ ಪುಟದಿಂದ...

ದುಃಸ್ಥಿತಿಯಲ್ಲಿರುವ ಶೌಚಾಲಯದ ಚಿತ್ರದ ಮೇಲೆ, ಕೊಡವರ ಸಾಂಪ್ರದಾಯಿಕ ಉಡುಪು ಧರಿಸಿದ್ದ ಶಾಸಕ ಎ.ಎಸ್.ಪೊನ್ನಣ್ಣ ಅವರ ಚಿತ್ರ ಹಾಕಿ, 'ಸ್ವಚ್ಛ ಭಾರತ್', 'ಸ್ವಚ್ಛ ವಿರಾಜಪೇಟೆ', 'ಪೊನ್ನಣ್ಣ ಶೌಚಾಲಯ' ಎಂದು ಬರೆದು ರಾಜೇಂದ್ರ ಪಾಪು ಎಂಬುವವರು ಪೋಸ್ಟ್ ಹಾಕಿದ್ದರು. ಸಾಂಪ್ರದಾಯಿಕ ಉಡುಪು ಧರಿಸಿದ್ದವರಿಗೆ ಅವಮಾನ ಮಾಡಲಾಗಿದೆ ಎಂದು ಆರೋಪಿಸಿ ಕೊಡಗಿನಲ್ಲಿ ಪ್ರತಿಭಟನೆಗಳು ನಡೆದಿದ್ದವು.

ವಿನಯ್ ಅಂತ್ಯಸಂಸ್ಕಾರಕ್ಕೆ ಸ್ವಗ್ರಾಮ ಗೋಣಿಮರೂರಿನಲ್ಲಿ ಸಿದ್ಧತೆಗಳು ನಡೆದಿವೆ. ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ.

#### ಯಾವೆಲ್ಲಾ ಸೆಕ್ಷನ್‌ಗಳ ಅಡಿ ಪ್ರಕರಣ?

ತನ್ನೀರಾ ಮೈನಾ ಅವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 108 (ಆತ್ಮಹತ್ಯೆಗೆ ಪ್ರಚೋದನೆ), ಸೆಕ್ಷನ್ 3(5) (ಅಪರಾಧಿಕ ಸಂಚು), 351(2)(ಬೆದರಿಕೆ) ಹಾಗೂ 352ರ (ಉದ್ದೇಶ ಪೂರ್ವಕವಾಗಿ ಅವಮಾನ) ಅಡಿ ಹೆಣ್ಣೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



# 'ಮಿಸ್ಟರ್ ಭಾರತ್' ಇನ್ನು ನೆನಪು

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ: 'ಮೇರೆ ದೇಶ್ ಕಿ ಧರ್ತಿ ಸೋನಾ ಉಗಲೆ ಉಗಲೆ ಹೀರೇ ಮೋತಿ' (ಹೊನ್ನು, ಮುತ್ತು ಬೆಳೆವ ಭೂಮಿಯ ದೇಶ ನನ್ನದು) ಹಾಡು ಇವತ್ತಿಗೂ ಸ್ವಾತಂತ್ರ್ಯ ದಿನಾಚರಣೆ ದಿನ ಎಷ್ಟೋ ಕಡೆ ಅನುರಣಿಸುತ್ತದೆ. ಕಲ್ಯಾಣ್‌ಜಿ–ಆನಂದ್‌ಜಿ ಸ್ವರ ಸಂಯೋಜನೆಯ, ಮಹೇಂದ್ರ ಕಪೂರ್ ಕಂಠದ ಈ ಹಾಡು ಒಂದು ಬಗೆಯಲ್ಲಿ ನಟ ಮನೋಜ್ ಕುಮಾರ್ ಅವರ ದೇಶಭಕ್ತಿ ಭಾವದ ಸಂಕೇತದಂತೆ ಸ್ಥಾಯಿಯಾಗಿದೆ. 'ಉಪಕಾರ್' ಹಿಂದಿ ಚಿತ್ರದ ಹಾಡು ಇದು.

ದೇಶಭಕ್ತಿಯ ಸರಣಿ ಚಿತ್ರಗಳಲ್ಲಿ ಮನೋಜ್ ಅಭಿನಯಿಸಿದ್ದರು. 'ಮಿಸ್ಟರ್ ಭಾರತ್' ಎಂದು ಅವರು ಜನಜನಿತರಾದದ್ದು ಇದೇ ಕಾರಣಕ್ಕೆ. 'ಪೂರಬ್ ಔರ್ ಪಶ್ಚಿಮ್', 'ಶಹೀದ್', 'ರೋಟಿ ಕಪಡಾ ಔರ್ ಮಕಾನ್' ಅವರ ಅಭಿನಯದ ಪ್ರಮುಖ ಚಿತ್ರಗಳು.

ಲಾಲ್ ಬಹದ್ದೂರ್ ಶಾಸ್ತ್ರಿ ಅವರೊಟ್ಟಿಗೆ ನಡೆಸಿದ ಸಂವಾದದ ಫಲವಾಗಿ 'ಉಪಕಾರ್' ಸಿನಿಮಾ ಪರಿಕಲ್ಪನೆ ಹುಟ್ಟಿತ್ತು. ರಾಷ್ಟ್ರ ಪ್ರಶಸ್ತಿಗೆ ಭಾಜನವಾದ ಚಿತ್ರವಿದು.

ಮನೋಜ್ 1960, 1970ರ ದಶಕದಲ್ಲಿ ಜನಪ್ರಿಯತೆಯ ಉತ್ತುಂಗದಲ್ಲಿದ್ದರು. ಪ್ರೇಮ ಕಥಾನಕದ 'ಹಿಮಾಲಯ ಕಿ ಗೋದ್ ಮೈ', 'ಪತ್ಥರ್ ಕೆ ಸನಂ' ಚಿತ್ರಗಳಲ್ಲೂ ನಟಿಸಿದ್ದರು.

ಅವಿಭಜಿತ ಭಾರತದ, ಈಗಿನ ಪಾಕಿಸ್ತಾನದ ಜಂಡ್ಯಾಲ ಶೇರ್‌ಖಾನ್ ಗ್ರಾಮದಲ್ಲಿ ಪಂಜಾಬಿ ಹಿಂದೂ ಕುಟುಂಬದಲ್ಲಿ ಅವರು ಜನಿಸಿದ್ದರು. ಮೂಲ ಹೆಸರು ಹರಿ ಕೃಷನ್ ಗೋಸ್ವಾಮಿ. ದೇಶ ವಿಭಜನೆಯ ಬಳಿಕ ಕುಟುಂಬ 1947ರಲ್ಲಿ ದೆಹಲಿಗೆ ವಲಸೆ ಬಂದಿತ್ತು. ದೆಹಲಿ ವಿ.ವಿ.ಯಲ್ಲಿ ಪದವಿ ಶಿಕ್ಷಣದ ಬಳಿಕ ಮುಂಬೈಗೆ ತೆರಳಿದ್ದರು. ನಟ ದಿಲೀಪ್ ಕುಮಾರ್ ಅಭಿಮಾನಿಯಾಗಿದ್ದವರು ಮನೋಜ್. 'ದಿಲೀಪ್ ಕುಮಾರ್ ನಟನೆಯ 'ಶಬ್ನಮ್' ವೀಕ್ಷಿಸಿದ ಬಳಿಕ ಅವರಂತೆಯೇ ನಟನಾಗುವ ಬಯಕೆ ಹುಟ್ಟಿತು. ಆಗ ನನ್ನ ವಯಸ್ಸು 11' ಎಂದು ಪಿಟಿಐಗೆ 2021ರಲ್ಲಿ ನೀಡಿದ್ದ ಸಂದರ್ಶನದಲ್ಲಿ ಹೇಳಿಕೊಂಡಿದ್ದರು.

ಮುಂದೊಂದು ದಿನ ತಮ್ಮ ನಿರ್ಮಾಣದ 'ಕ್ರಾಂತಿ' ಚಿತ್ರದಲ್ಲಿ ದಿಲೀಪ್ ಕುಮಾರ್ ಅವರೇ ನಟಿಸುವಂತೆ ನೋಡಿಕೊಂಡರು. ದಿಲೀಪ್ ಕುಮಾರ್ ಅವರೊಂದಿಗೆ 'ಆದ್ಮಿ' ಚಿತ್ರದಲ್ಲೂ ನಟಿಸಿದ್ದರು.

2015ರಲ್ಲಿ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತರಾದರು. 'ಪದ್ಮಶ್ರೀ' ಗೌರವವೂ ಸಂದಿತ್ತು. ವಿ.ಶಾಂತಾರಾಮ್, ರಾಜ್‌ಕಪೂರ್ ಅವರಂತೆ ನಟನೆಗಿಂತಲೂ ನಿರ್ದೇಶನದ ಕಾರಣಕ್ಕೇ ಹೆಚ್ಚು ಹೆಸರಾದರು.


ಭಗತ್‌ಸಿಂಗ್ ಬದುಕಿನ ಕಥನವುಳ್ಳ 'ಶಹೀದ್' ಸಿನಿಮಾಗೆ ರಾಷ್ಟ್ರ ಪ್ರಶಸ್ತಿ ಸಂದಿತು. ಆಗ ಬಂದಿದ್ದ ಅಷ್ಟೂ ಹಣವನ್ನು ಭಗತ್ ಸಿಂಗ್ ಕುಟುಂಬದವರಿಗೆ ನೀಡಿದ್ದ ಕೊಡುಗೈ ಅವರದ್ದು. ಸಿತಾರ್ ನುಡಿಸುವುದನ್ನೂ ಕಲಿತಿದ್ದ ಅವರು ಶ್ವೇತವಸ್ತ್ರ ಇಷ್ಟಪಟ್ಟವರು. ಮನೆಯ ಬಣ್ಣ, ಕಾರಿನ ಬಣ್ಣವೂ ಬಿಳಿಯೇ ಆಗಿತ್ತು. ಸ್ವಚ್ಛ, ಶುದ್ಧತೆಯ ಸಂಕೇತ ಅದು ಎಂದೇ ಹೇಳುತ್ತಿದ್ದ ಅವರೀಗ ನೆನಪು.

### ಮನೋಜ್ ಕುಮಾರ್ ನಿಧನ

ಬಾಲಿವುಡ್‌ನ ಹೆಸರಾಂತ ನಟ, ನಿರ್ದೇಶಕ ಮನೋಜ್ ಕುಮಾರ್ (87) ಇಲ್ಲಿನ ಕೋಕಿಲಾಬೆನ್ ಅಂಬಾನಿ ಆಸ್ಪತ್ರೆಯಲ್ಲಿ ಶುಕ್ರವಾರ ನಿಧನರಾದರು.

ಅವರು ಕೆಲ ತಿಂಗಳಿಂದ ವಯೋಸಹಜ ಸಮಸ್ಯೆಗಳಿಂದ ಬಳಲುತ್ತಿದ್ದರು. 'ತಂದೆ ಯಾತನೆಯಿಂದ ಈಗ ಪಾರಾಗಿದ್ದಾರೆ' ಎಂದು ಮೃತರ ಪುತ್ರ, ನಟ ಕುನಾಲ್ ಪ್ರತಿಕ್ರಿಯಿಸಿದರು.

ಅಂತ್ಯಕ್ರಿಯೆ ಶನಿವಾರ ನಡೆಯಲಿದೆ. ಮೃತರಿಗೆ ಪತ್ನಿ ಶಶಿ, ಪುತ್ರರಾದ ವಿಶಾಲ್, ಕುನಾಲ್ ಅವರಿದ್ದಾರೆ.



> ರೈತರು, ಯೋಧರ ಪಾತ್ರಗಳಿಗೆ ಜೀವ ತುಂಬಿದ್ದರು. ಅವರ ಚಿತ್ರಗಳು ದೇಶಭಕ್ತಿಯ ಭಾವನೆ ಬೆಳೆಸಿದ್ದವು
> **ದ್ರೌಪದಿ ಮುರ್ಮು,** ರಾಷ್ಟ್ರಪತಿ

> ಮನೋಜ್ ಕುಮಾರ್ ಭಾರತ ಚಿತ್ರರಂಗದ ಪ್ರಮುಖ ನಟ. ದೇಶಭಕ್ತಿಯ ಪಾತ್ರಗಳಿಂದ ಅವರು ಚಿರಸ್ಮರಣೀಯರು
> **ನರೇಂದ್ರ ಮೋದಿ, ಪ್ರಧಾನಿ**

# ಕೆಪಿಸಿಸಿ ಅಧ್ಯಕ್ಷ: ಖಂಡ್ರೆ ಹೆಸರು ಮುನ್ನೆಲೆಗೆ

ಒಂದನೇ ಪುಟದಿಂದ...

ಸಿದ್ದರಾಮಯ್ಯ ಸಂಪುಟದಲ್ಲಿ ಎರಡು ಪ್ರಭಾವಿ ಖಾತೆಗಳನ್ನು ಹೊಂದಿರುವ ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷರಾಗಿ ಐದು ವರ್ಷ ಪೂರೈಸಿದ್ದಾರೆ. ಹಾಗಾಗಿ, ಅವರನ್ನು ಬದಲಾವಣೆ ಮಾಡಬೇಕು ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರು ಹೈಕಮಾಂಡ್ ಮೇಲೆ ಒತ್ತಡ ಹೇರಿದ್ದರು. ಸಚಿವ ಸ್ಥಾನದ ಜತೆಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನವನ್ನೂ ನಿಭಾಯಿಸಲು ಸಿದ್ಧ ಎಂದು ಇಬ್ಬರೂ ಸಂದೇಶ ರವಾನಿಸಿದ್ದರು.

ಕಾಂಗ್ರೆಸ್ ಸರ್ಕಾರಕ್ಕೆ ಎರಡು ವರ್ಷ ತುಂಬುವ ಹೊತ್ತಿಗೆ ಕೆಪಿಸಿಸಿ ಅಧ್ಯಕ್ಷರನ್ನು ಬದಲಾಯಿಸಬೇಕು ಎಂಬುದು ಸಿದ್ದರಾಮಯ್ಯ ಬಣದ ಕಾರ್ಯತಂತ್ರ. ಈ ಸಂಬಂಧ ಖಂಡ್ರೆ ಅವರೊಂದಿಗೆ ಸಿದ್ದರಾಮಯ್ಯ ಸಮಾಲೋಚಿಸಿದ್ದಾರೆ. ಆದರೆ, ಅಕ್ಟೋಬರ್‌ವರೆಗೆ ಮುಂದುವರಿಯಬೇಕು ಎಂಬುದು ಶಿವಕುಮಾರ್ ಹಂಬಲ. ಹೈಕಮಾಂಡ್ ಹೆಣೆದ ಸೂತ್ರದ ಪ್ರಕಾರ, ಅಧಿಕಾರ ಹಸ್ತಾಂತರದವರೆಗೆ ಗಾದಿಯಲ್ಲಿ ಮುಂದುವರಿಯಬೇಕು ಎಂಬುದು ಅವರ ಆಲೋಚನೆ.

'ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಬಿಬಿಎಂಪಿ ಚುನಾವಣೆಯವರೆಗೆ ಅಧ್ಯಕ್ಷನಾಗಿ ಮುಂದುವರಿಯುತ್ತೇನೆ' ಎಂದು ರಾಷ್ಟ್ರೀಯ ನಾಯಕರಲ್ಲಿ ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ ಎನ್ನಲಾಗಿದೆ. ಒಂದು ವೇಳೆ ಜಿಲ್ಲಾ ಹಾಗೂ ತಾ. ಪಂ. ಚುನಾವಣೆ ಘೋಷಣೆಯಾದರೆ ಅಧ್ಯಕ್ಷರ ಬದಲಾವಣೆ ಕೂಗೂ ತಣ್ಣಗಾಗುವ ಸಾಧ್ಯತೆ ಇದೆ.

ಖಂಡ್ರೆ ಅವರು ಈ ಹಿಂದೆ ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿದ್ದರು. ವೀರಶೈವ ಮಹಾಸಭಾದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯೂ ಆಗಿದ್ದಾರೆ. ಮಾರ್ಚ್ 28ರಂದು ನವದೆಹಲಿಗೆ ಬಂದಿದ್ದ ಖಂಡ್ರೆ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನು ಭೇಟಿ ಮಾಡಿ ಇಲಾಖೆಯಲ್ಲಿ ಎರಡು ವರ್ಷಗಳಲ್ಲಿ ಕೈಗೊಂಡ ಪ್ರಗತಿಯ ವರದಿ ಸಲ್ಲಿಸಿದ್ದರು. ಗುರುವಾರ ದೆಹಲಿಯಲ್ಲಿದ್ದ ಅವರು ಹಲವು ನಾಯಕರನ್ನು ಭೇಟಿ ಮಾಡಿ ಚರ್ಚೆ ನಡೆಸಿದರು.

'ಕೆಪಿಸಿಸಿ ಅಧ್ಯಕ್ಷನಾಗಲು ಸಿದ್ಧ. ಆದರೆ, ಕನಿಷ್ಠ ಒಂದು ವರ್ಷ ಸಚಿವ ಸ್ಥಾನದಲ್ಲಿ ಮುಂದುವರಿಸಬೇಕು' ಎಂದು ಖಂಡ್ರೆ ಷರತ್ತು ಒಡ್ಡಿದ್ದಾರೆ. ಇದಕ್ಕೆ ರಾಷ್ಟ್ರೀಯ ನಾಯಕರು ಸಕಾರಾತ್ಮಕವಾಗಿ ಸ್ಪಂದಿಸಿಲ್ಲ. ಸಚಿವ ಸಂಪುಟ ಪುನರ್ ರಚನೆಯ ಸಂದರ್ಭದಲ್ಲಿ ಸಚಿವ ಸ್ಥಾನ ತ್ಯಾಗ ಮಾಡಬೇಕಾದೀತು. ಈ ಕುರಿತು ಮುಖ್ಯಮಂತ್ರಿ ವಿವೇಚನೆಗೆ ಬಿಡಲಾಗುವುದು' ಎಂದು ಸೂಚ್ಯವಾಗಿ ತಿಳಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಮೇ ತಿಂಗಳಲ್ಲಿ ಕಾಂಗ್ರೆಸ್ ಸರ್ಕಾರಕ್ಕೆ ಎರಡು ವರ್ಷ ತುಂಬಲಿದೆ. ಆ ಬಳಿಕವೇ ಸಚಿವ ಸಂಪುಟ ವಿಸ್ತರಣೆ ಅಥವಾ ಪುನರ್ ರಚನೆ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಾಗಿ ಹೈಕಮಾಂಡ್ ನಾಯಕರು ಸಿದ್ದರಾಮಯ್ಯ ಅವರಿಗೆ ತಿಳಿಸಿದ್ದಾರೆ ಎಂದೂ ಮೂಲಗಳು ಹೇಳಿವೆ.

> ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ನನ್ನ ಬಳಿ ಯಾರೂ ಅಭಿಪ್ರಾಯ ಸಂಗ್ರಹಿಸಿಲ್ಲ. ಇದು ತಪ್ಪು ಮಾಹಿತಿ. ಅಧ್ಯಕ್ಷರ ಬದಲಾವಣೆ ಬಗ್ಗೆ ಚರ್ಚೆ ನಡೆದಿಲ್ಲ
> **ಎಚ್.ಕೆ.ಪಾಟೀಲ**, ಕಾನೂನು ಸಚಿವ

> ಕೆಪಿಸಿಸಿ ಅಧ್ಯಕ್ಷರ ಸ್ಥಾನಕ್ಕೆ ನನ್ನ, ಈಶ್ವರ ಖಂಡ್ರೆ ಹೆಸರು ಇದೆ ಎನ್ನುವುದನ್ನು ವರದಿಯಲ್ಲಿ ಗಮನಿಸಿದೆ. ಖಂಡ್ರೆ ಅವರನ್ನು ಪರಿಗಣಿಸಿದರೆ ನಮ್ಮ ಬೆಂಬಲವಿದೆ
> **ಸತೀಶ ಜಾರಕಿಹೊಳಿ**, ಲೋಕೋಪಯೋಗಿ ಸಚಿವ



ಮಿಚೆಲ್ ಮಾರ್ಷ್, ಏಡನ್ ಮರ್ಕರಂ ಅರ್ಧಶತಕ • ಪಾಂಡ್ಯಗೆ 5 ವಿಕೆಟ್ | ಮುಂಬೈಗೆ ನಿರಾಸೆ

# ಲಖನೌ ತಂಡಕ್ಕೆ ರೋಚಕ ಜಯ

**ಲಖನೌ (ಪಿಟಿಐ):** ಬೌಲಿಂಗ್‌ನಲ್ಲಿ ಐದು ವಿಕೆಟ್‌ಗಳ ಗೊಂಚಲು ಪಡೆದು ಮಿಂಚಿದ್ದ ನಾಯಕ ಹಾರ್ದಿಕ್ ಪಾಂಡ್ಯ ಅವರು ಬ್ಯಾಟಿಂಗ್‌ನಲ್ಲಿ ಮುಂಬೈ ಇಂಡಿಯನ್ಸ್ ತಂಡವನ್ನು ಗೆಲುವಿನ ದಡ ಸೇರಿಸುವ ಅವಕಾಶ ಹೊಂದಿದ್ದರು. ಆದರೆ, ಕೊನೆಯಲ್ಲಿ ಅವರನ್ನು ಕಟ್ಟಿಹಾಕಿದ ಲಖನೌ ಸೂಪರ್ ಜೈಂಟ್ಸ್ ಬೌಲರ್‌ಗಳು ಶುಕ್ರವಾರ ಐಪಿಎಲ್‌ನ ರೋಚಕ ಪಂದ್ಯದಲ್ಲಿ ತಮ್ಮ ತಂಡಕ್ಕೆ 12 ರನ್‌ಗಳ ಜಯ ತಂದುಕೊಟ್ಟರು.

ಕೊನೆಯ ಓವರ್‌ನ ಮೊದಲ ಎಸೆತವನ್ನು ಪಾಂಡ್ಯ ಕವರ್ಸ್ ಮೇಲೆ ಸಿಕ್ಸರ್‌ಗೆ ಎತ್ತಿದಾಗ ಮುಂಬೈ ಗೆಲುವಿಗೆ 15 ರನ್‌ಗಳು ಬೇಕಿದ್ದವು. ಆದರೆ ಆವೇಶ್ ಖಾನ್ ನಂತರದ ಐದು ಎಸೆತಗಳಲ್ಲಿ ಬರೀ ಮೂರು ರನ್ ನೀಡಿದರು. 18ನೇ ಓವರ್‌ನಲ್ಲಿ ದಿಗ್ವೇಶ್ ರಾಠಿ (21ಕ್ಕೆ 1) 11 ರನ್, 19ನೇ ಓವರ್‌ನಲ್ಲಿ ವೇಗದ ಬೌಲರ್ ಶಾರ್ದೂಲ್ ಠಾಕೂರ್ ಕೇವಲ 7 ರನ್ ನೀಡಿ ಎದುರಾಳಿ ತಂಡವನ್ನು ನಿಯಂತ್ರಿಸಿದರು.

ಏಕನಾ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಈ ಪಂದ್ಯದಲ್ಲಿ ಟಾಸ್ ಗೆದ್ದ ಪಾಂಡ್ಯ, ಎದುರಾಳಿ ತಂಡವನ್ನು ಆಡಲಿಳಿಸಿದರು. ಮಿಚೆಲ್ ಮಾರ್ಷ್ (60; 31ಎ, 4x9; 6x2) ಮತ್ತು ಏಡನ್ ಮರ್ಕರಂ(53:38 ಎ, 4x2, 6x4) ಅವರ ಅರ್ಧ-ಶತಕಗಳ ನೆರವಿನಿಂದ ಲಖನೌ ಸೂಪರ್ ಜೈಂಟ್ಸ್ ತಂಡ 8 ವಿಕೆಟ್‌ಗೆ 203 ರನ್‌ಗಳ ಉತ್ತಮ ಮೊತ್ತ ಗಳಿಸಿತು.

ಗುರಿಯನ್ನು ಬೆನ್ನಟ್ಟಿದ ಮುಂಬೈ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗೆ 191 ರನ್ ಗಳಿಸಿತು. 17 ರನ್‌ಗೆ ಆರಂಭಿಕ ಬ್ಯಾಟರ್‌ಗಳಾದ ವಿಲ್ ಜಾಕ್ಸ್ (5) ಮತ್ತು ರಯಾನ್ ರಿಕಲ್ಟನ್ (10) ಅವರನ್ನು ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದ್ದ ತಂಡಕ್ಕೆ ನಮನ್ ಧೀರ್ (46;24ಎ) ಮತ್ತು ಸೂರ್ಯಕುಮಾರ್ ಯಾದವ್ (67;43ಎ, 4x9, 6x1) ಅವರು ಆಸರೆಯಾದರು. ಅವರು ಮೂರನೇ ವಿಕೆಟ್ ಜೊತೆಯಾಟದಲ್ಲಿ 69 (35ಎ) ರನ್ ಸೇರಿಸಿದರು.

ನಮನ್ ಔಟಾದ ಬಳಿಕ ಸೂರ್ಯ ಅವರನ್ನು ಸೇರಿಕೊಂಡ ತಿಲಕ್ ವರ್ಮಾ (25;23ಎ) ನಾಲ್ಕನೇ ವಿಕೆಟ್‌ಗೆ 66 (48ಎ) ರನ್ ಗಳಿಸಿ ಗೆಲುವಿನ ಆಸೆ ಚಿಗುರಿಸಿದರು. ಈ ಮಧ್ಯೆ ಸೂರ್ಯಕುಮಾರ್ ಔಟಾಗುತ್ತಿದ್ದಂತೆ ಪಂದ್ಯವು ತಿರುವು ಪಡೆಯಿತು. ವೇಗವಾಗಿ ರನ್ ಗಳಿಸಲು ಪರದಾಡಿದ ತಿಲಕ್ 19ನೇ ಓವರ್‌ನಲ್ಲಿ 'ರಿಟೈರ್ಡ್ ಔಟ್' ಆದರು. ಪಾಂಡ್ಯ (28;16ಎ) ಈ ಒತ್ತಡದಲ್ಲಿ ಹೋರಾಟ ತೋರಿದರೂ ವೇಗವಾಗಿ ರನ್ ಗಳಿಸಲು ವಿಫಲರಾದರು. ಇದಕ್ಕೂ ಮೊದಲು ಲಖನೌ ತಂಡಕ್ಕೆ ಮಾರ್ಷ್ ಮತ್ತು ಮರ್ಕರಂ ಬಿರುಸಿನ ಆರಂಭ ಒದಗಿಸಿ 6.5 ಓವರುಗಳಲ್ಲಿ 76 ರನ್ ಸೇರಿಸಿದ್ದರು. ಸ್ಫೂರ್ತಿಯುತ ಬೌಲಿಂಗ್ ಪ್ರದರ್ಶನ ನೀಡಿದ ಪಾಂಡ್ಯ ಟಿ20 ಕ್ರಿಕೆಟ್‌ನಲ್ಲಿ ಮೊದಲ ಬಾರಿ ಐದು ವಿಕೆಟ್ ಪಡೆದರು. ಮೊದಲ ಸ್ಪೆಲ್‌ನಲ್ಲಿ ಅವರು ಲಯದಲ್ಲಿರುವ ಲಖನೌದ ಪ್ರಮುಖ ಆಟಗಾರ ನಿಕೋಲಸ್ ಪೂರನ್ (12) ಮತ್ತು ನಾಯಕ ರಿಷಭ್ ಪಂತ್ (2) ಅವರ ವಿಕೆಟ್‌ಗಳನ್ನು ಪಡೆದರು.

ಬಿರುಸಿನ ಆಟವಾಡುತ್ತಿದ್ದ ಆರಂಭ ಆಟಗಾರ ಮರ್ಕರಂ ಡೇವಿಡ್ ಮಿಲ್ಲರ್ (27) ಮತ್ತು ಆಕಾಶ್ ದೀಪ್ ಅವರನ್ನು ಎರಡನೇ ಸ್ಪೆಲ್‌ನಲ್ಲಿ ಪೆವಿಲಿಯನ್‌ಗೆ ಕಳುಹಿಸಿದರು.ನಾಲ್ಕು ಪಂದ್ಯಗಳಲ್ಲಿ ಮೂರನೇ ಅರ್ಧ ಶತಕ ಬಾರಿಸಿದ ಮಾರ್ಷ್ ಅವರ ವಿಕೆಟ್ ಅನ್ನು ಎಡಗೈ ಸ್ಪಿನ್ನರ್ ವಿಘ್ನೇಶ್ ಪುತ್ತೂರು ತಮ್ಮದೇ ಬೌಲಿಂಗ್‌ನಲ್ಲಿ ಕ್ಯಾಚ್ ಪಡೆಯುವ ಮೂಲಕ ಗಳಿಸಿದರು. ಪಂತ್ ಅವರ ವೈಫಲ್ಯ ಈ ಪಂದ್ಯದಲ್ಲೂ ಮುಂದುವರಿಯಿತು. ಇದು ಲಖನೌ ತಂಡಕ್ಕೆ ಮುಂಬೈ ವಿರುದ್ಧ ಏಳು ಪಂದ್ಯಗಳಲ್ಲಿ ಆರನೇ ಜಯ ಎನಿಸಿತು.

**ಸಂಕ್ಷಿಪ್ತ ಸ್ಕೋರು:** ಲಖನೌ ಸೂಪರ್ ಜೈಂಟ್ಸ್: 20 ಓವರುಗಳಲ್ಲಿ 8 ಕ್ಕೆ 203 (ಮಿಚೆಲ್ ಮಾರ್ಷ್ 60, ಏಡನ್ ಮರ್ಕರಂ 53, ಆಯುಷ್ ಬಡೋನಿ 30, ಡೇವಿಡ್ ಮಿಲ್ಲರ್ 27; ಟ್ರೆಂಟ್ ಬೌಲ್ಟ್ 28ಕ್ಕೆ1, ಅಶ್ವಿನಿ ಕುಮಾರ್ 39ಕ್ಕೆ1, ವಿಘ್ನೇಶ್ ಪುತ್ತೂರು 31ಕ್ಕೆ1, ಹಾರ್ದಿಕ್ ಪಾಂಡ್ಯ 36ಕ್ಕೆ5). ಮುಂಬೈ ಇಂಡಿಯನ್ಸ್: 20 ಓವರ್‌ಗಳಲ್ಲಿ 5ಕ್ಕೆ 191 (ನಮನ್ ಧೀರ್ 46, ಸೂರ್ಯಕುಮಾರ್ ಯಾದವ್ 67, ತಿಲಕ್ ವರ್ಮಾ 25, ಹಾರ್ದಿಕ್ ಪಾಂಡ್ಯ 28; ದಿಗ್ವೇಶ್ ರಾಠಿ 21ಕ್ಕೆ 1, ಶಾರ್ದೂಲ್ ಠಾಕೂರ್ 41ಕ್ಕೆ 1, ಆವೇಶ್ ಖಾನ್ 40ಕ್ಕೆ 1, ರವಿ ಬಿಷ್ಣೋಯಿ 40ಕ್ಕೆ 1). **ಫಲಿತಾಂಶ:** ಲಖನೌ ಸೂಪರ್ ಜೈಂಟ್ಸ್‌ಗೆ 12 ರನ್ ಜಯ. **ಪಂದ್ಯದ ಆಟಗಾರ:** ದಿಗ್ವೇಶ್ ರಾಠಿ



ಲಖನೌ ತಂಡದ ಮಿಚೆಲ್ ಮಾರ್ಷ್ ಮತ್ತು ಏಡನ್ ಮರ್ಕರಂ. ಪಿಟಿಐ ಚಿತ್ರ



ಹಾರ್ದಿಕ್ ಪಾಂಡ್ಯ

## ಗಾಯಾಳಾಗಿ ಆಡದ ರೋಹಿತ್ ಶರ್ಮಾ

**ಲಖನೌ (ಪಿಟಿಐ):** ಅನುಭವಿ ಆಟಗಾರ ರೋಹಿತ್ ಶರ್ಮಾ ಅವರು ಶುಕ್ರವಾರ ನೆಟ್ ಪ್ರಾಕ್ಟೀಸ್ ಸಮಯದಲ್ಲಿ ಮೊಣಕಾಲಿಗೆ ಚೆಂಡುಬಡಿದು ಗಾಯಾಳಾದ ಕಾರಣ ಲಖನೌ ಸೂಪರ್ ಜೈಂಟ್ಸ್ ಎದುರಿನ ಪಂದ್ಯದಲ್ಲಿ ಆಡಲು ಇಳಿಯಲಿಲ್ಲ ಮುಂಬೈ ಇಂಡಿಯನ್ಸ್ ನಾಯಕ ಹಾರ್ದಿಕ್ ಪಾಂಡ್ಯ ತಿಳಿಸಿದ್ದಾರೆ.

ರೋಹಿತ್ ಈ ಬಾರಿಯ ಐಪಿಎಲ್‌ನಲ್ಲಿ ಆಡಿದ ಮೂರೂ ಪಂದ್ಯಗಳಲ್ಲಿ ವಿಫಲರಾಗಿದ್ದು, 0, 8 ಮತ್ತು 13 ರನ್ ಗಳಿಸಿದ್ದರು.

ಟಾಸ್ ಸಮಯದಲ್ಲಿ ಮಾತನಾಡಿದ ಹಾರ್ದಿಕ್, ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರು ಸ್ಪರ್ಧಾತ್ಮಕ ಕ್ರಿಕೆಟ್‌ಗೆ ಯಾವಾಗ ಹಿಂತಿರುಗಲಿದ್ದಾರೆ ಎಂದು ಕೇಳಿದಾಗ 'ಅವರು ಶೀಘ್ರದಲ್ಲೇ ಮರಳಿದ್ದಾರೆ' ಎಂದಷ್ಟೇ ಉತ್ತರಿಸಿದರು.

**ವಿಶೇಷ ಜರ್ಸಿ ಪಡೆದ ಸೂರ್ಯ**

ಮುಂಬೈ ಇಂಡಿಯನ್ಸ್ ಪರ ನೂರನೇ ಪಂದ್ಯ ಆಡಿದ ಭಾರತ ಟಿ20 ತಂಡದ ಕಪ್ತಾನ ಸೂರ್ಯಕುಮಾರ್ ಯಾದವ್ ಅವರಿಗೆ ವಿಶೇಷ ಜರ್ಸಿ (ಪೋಷಾಕು) ನೀಡಲಾಯಿತು. ಅವರು ಮುಂಬೈ ಪರ ಈ ಮೈಲಿಗಲ್ಲು ತಲುಪಿದ ಎಂಟನೇ ಆಟಗಾರ.ರೋಹಿತ್, ಹಾರ್ದಿಕ್, ಕೀರನ್ ಪೊಲ್ಲಾರ್ಡ್, ಹರಭಜನ್ ಸಿಂಗ್, ಲಸಿತ್ ಮಾಲಿಂಗ, ಬೂಮ್ರಾ ಮತ್ತು ಅಂಬಟಿ ರಾಯುಡು ಅವರು ಈ ತಂಡದ ಪರ ನೂರಕ್ಕಿಂತ ಹೆಚ್ಚು ಪಂದ್ಯಗಳನ್ನು ಆಡಿದ್ದಾರೆ.

## ರೂಟ್ಸ್‌ಗೆ ಗೆಲುವು

**ಬೆಂಗಳೂರು:** ರೂಟ್ಸ್ ಎಫ್‌ಎಸ್ (ಬಿಡಿಎಫ್‌ಎ ಎ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಶುಕ್ರವಾರ ಡಿವೈಇಎಸ್ ಎಫ್‌ಸಿ ತಂಡದ ವಿರುದ್ಧ 3–0 ಗೋಲುಗಳಿಂದ ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ನಡೆದ ಇನ್ನೊಂದು ಪಂದ್ಯದಲ್ಲಿ ಬಿಟಿಎಂ ಎಫ್‌ಸಿ ತಂಡ 3–1ರಿಂದ ಎಜಿಒಆರ್‌ಸಿ ಎಫ್‌ಸಿ ತಂಡವನ್ನು ಮಣಿಸಿತು.




ಅಧ್ಯಕ್ಷ ಟ್ರಂಪ್ ವಿವಾದಾತ್ಮಕ ಸುಂಕ ನಕ್ಷೆ ಅನಾವರಣಗೊಳಿಸಿದ್ದಾರೆ

## ಋತುರಾಜ್‌ಗೆ ಗಾಯ: ಧೋನಿ ಸಾರಥ್ಯ?

**ಚೆನ್ನೈ (ಪಿಟಿಐ):** ಆರಂಭದಲ್ಲೇ ಹಿನ್ನಡೆ ಕಂಡಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡ ಶನಿವಾರ ನಡೆಯುವ ಐಪಿಎಲ್ ಪಂದ್ಯದಲ್ಲಿ ಅಜೇಯ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಎದುರಿಸಲಿದೆ. ಋತುರಾಜ್ ಗಾಯಕವಾಡ ಅವರು ಗಾಯಾಳಾಗಿರುವ ಕಾರಣ ಚೆನ್ನೈ ಸೂಪರ್ ಕಿಂಗ್ಸ್ ಸಾರಥ್ಯವನ್ನು ಅನುಭವಿ ಎಂ.ಎಸ್.ಧೋನಿ ವಹಿಸಿಕೊಳ್ಳುವ ಸಾಧ್ಯತೆಯಿದೆ.

ಪ್ರತಿಭಾನ್ವಿತ ಎಡಗೈ ಸ್ಪಿನ್ನರ್‌ಗಳಾದ– ಚೆನ್ನೈನ ನೂರ್ ಅಹ್ಮದ್ ಅವರ ತಂತ್ರಗಾರಿಕೆ ಮತ್ತು ಡೆಲ್ಲಿ ತಂಡದ ಕುಲದೀಪ್ ಯಾದವ್ ಅವರ ಕಲಾತ್ಮಕತೆ ಈ ಪಂದ್ಯದಲ್ಲಿ ಮೇಳೈಸುವ ನಿರೀಕ್ಷೆಯಿದೆ.

ಗುವಾಹಟಿಯಲ್ಲಿ ಮಾ. 30ರಂದು ರಾಜಸ್ಥಾನ ರಾಯಲ್ಸ್ ವಿರುದ್ಧದ ಪಂದ್ಯ ದಲ್ಲಿ ಋತುರಾಜ್ ಅವರ ಮೊಣಕೈಗೆ ಗಾಯವಾಗಿತ್ತು. ಹೀಗಾಗಿ ಶನಿವಾರ ಪಂದ್ಯದಲ್ಲಿ ಅವರು ಆಡುವುದು ಅನುಮಾನವಾಗಿದೆ.

ಬೆವರಿಳಿಸುವ ಚೆನ್ನೈನ ಉರಿ ಸೆಕೆಯಲ್ಲೇ ಮಧ್ಯಾಹ್ನ ಈ ಪಂದ್ಯ ನಡೆಯಲಿದೆ. ಇಲ್ಲಿನ ಪಿಚ್ ಸಾಂಪ್ರದಾಯಿಕ ವಾಗಿ ಸ್ಪಿನ್ನರ್ ಸ್ನೇಹಿ. ಗುಣಮಟ್ಟದ ದಾಳಿಯಿಂದ ಎದುರಾಳಿ ಗಳನ್ನು ತಬ್ಬಿಬ್ಬುಗೊಳಿಸಬಲ್ಲ ಕುಲದೀಪ್ 5.25ರ ಇಕಾನಮಿ ಹೊಂದಿದ್ದು ಡೆಲ್ಲಿ ತಂಡದ ಯಶಸ್ಸಿನಲ್ಲಿ ಅವರ ಪಾತ್ರ ಪ್ರಮುಖವಾಗಲಿದೆ. ಅಫ್ಗಾನಿಸ್ತಾನದ ಸ್ಪಿನ್ನರ್ ನೂರ್ ಅಹ್ಮದ್ ಕಡಿಮೆಯೇನಿಲ್ಲ. 6.83ರ ಇಕಾನಮಿ ಹೊಂದಿದ್ದು ಈಗಾಗಲೇ 9 ವಿಕೆಟ್ ಪಡೆದಿರುವುದು ಅವರ ಪ್ರಭಾವ ತೋರಿಸುತ್ತದೆ. ಈ ರಿಸ್ಟ್ ಸ್ಪಿನ್ನರ್‌ಗಳ ಬೌಲಿಂಗ್ ಶೈಲಿಯೂ ಭಿನ್ನ ರೀತಿಯದ್ದು.

ಬ್ಯಾಟಿಂಗ್ ಬಲ ಗಮನಿಸಿದರೆ ಡೆಲ್ಲಿ ಸ್ವಲ್ಪ ಮೇಲುಗೈ ಹೊಂದಿರುವಂತೆ ಕಾಣುತ್ತಿದೆ. ಅಶುತೋಷ್ ಶರ್ಮಾ, ವಿಪ್ರಜ್ ನಿಗಂ, ಅನುಭವಿ ಕೆ.ಎಲ್.ರಾಹುಲ್ ಅವರಿಂದ ಮಧ್ಯಮ ಕ್ರಮಾಂಕ ಬಲಿಷ್ಠವಾಗಿದೆ. ನಾಯಕತ್ವದ ಹೊಣೆ ಕಳಚಿರುವ ಕಾರಣ ರಾಹುಲ್ ಒತ್ತಡವಿಲ್ಲದೇ ಆಡುವ ಅವಕಾಶ ಹೊಂದಿದ್ದಾರೆ.

ಬೀಸಾಟವಾಡುವ ಶಿವಂ ದುಬೆ ಚೆನ್ನೈನ ಬ್ಯಾಟಿಂಗ್ ವಿಭಾಗದಲ್ಲಿ ಪ್ರಮುಖ ಪಾತ್ರ ಹೊಂದಿದ್ದಾರೆ. ಹಳೆ ಹುಲಿ– ವಿಕೆಟ್ ಕೀಪರ್ ಮಹೇಂದ್ರ ಸಿಂಗ್ ಧೋನಿ ಮೊದಲಿನ 'ಫಿನಿಷರ್' ಆಗಿ ಕಾಣುತ್ತಿಲ್ಲ. ಆರಂಭ ಆಟಗಾರ ರಾಹುಲ್ ತ್ರಿಪಾಠಿ ಈ ಬಾರಿ ಸಪ್ಪೆಯಾಗಿದ್ದಾರೆ. ಚೆನ್ನೈನ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಈ ಬಾರಿ 10 ಓವರುಗಳಿಂದ 99 ರನ್ ನೀಡಿದ್ದು ನಿರೀಕ್ಷಿತ ಯಶಸ್ಸು ಕಂಡಿಲ್ಲ


**ಪಂದ್ಯ ಆರಂಭ:** ಮಧ್ಯಾಹ್ನ 3.30



ಕುಲದೀಪ್

**ಬಲಾಬಲ**

| | |
|---|---|
| ಪಂದ್ಯ | 30 |
| ಚೆನ್ನೈ ಗೆಲುವು | 19 |
| ಡೆಲ್ಲಿ ಗೆಲುವು | 11 |



ನೂರ್ ಅಹ್ಮದ್

## ರಾಯಲ್ಸ್‌ಗೆ ಇಂದು ಕಿಂಗ್ಸ್ ಸವಾಲು

**ಮುಲ್ಲನಪುರ (ಪಿಟಿಐ):** ಭಾರತ ತಂಡದ ಆಟಗಾರ ಯಶಸ್ವಿ ಜೈಸ್ವಾಲ್ ಈ ಬಾರಿಯ ಐಪಿಎಲ್‌ನಲ್ಲಿ ಇನ್ನೂ ಲಯ ಕಂಡುಕೊಂಡಿಲ್ಲ. ಈ ಆವೃತ್ತಿಯಲ್ಲಿ ಉತ್ತಮ ಆರಂಭ ಮಾಡಿರುವ ಪಂಜಾಬ್ ಕಿಂಗ್ಸ್ ತಂಡವನ್ನು ಶನಿವಾರ ಎದುರಿಸ ಲಿರುವ ರಾಜಸ್ಥಾನ ರಾಯಲ್ಸ್ ತಂಡ, ಈ ಪಂದ್ಯದಲ್ಲಿ ಎಡಗೈ ಬ್ಯಾಟರ್ ಜೈಸ್ವಾಲ್ ಅವರು ಮಿಂಚುವರೆಂಬ ವಿಶ್ವಾಸದಲ್ಲಿದೆ.

ಮೂರು ಪಂದ್ಯಗಳ ಬಳಿಕ ಸಂಜು ಸ್ಯಾಮ್ಸನ್ ಅವರು ಮರಳಿ ನಾಯಕತ್ವ ವಹಿಸಿಕೊಳ್ಳಲಿದ್ದಾರೆ. ಅವರಿಗೆ ಕೀಪಿಂಗ್ ಮಾಡಲು ಎನ್‌ಸಿಎ ತಜ್ಞರ ತಂಡ ಇತ್ತೀಚೆಗೆ ಅನುಮತಿ ನೀಡಿದೆ. ಮೊದಲ ಮೂರು ಪಂದ್ಯಗಳಲ್ಲಿ ರಿಯಾನ್ ಪರಾಗ್ ನಾಯಕತ್ವ ವಹಿಸಿದ್ದರು. ಧ್ರುವ ಜುರೇಲ್ ಕೀಪಿಂಗ್ ಕೆಲಸ ಮಾಡಿದ್ದರು.

ಫೆಬ್ರುವರಿಯಲ್ಲಿ ಇಂಗ್ಲೆಂಡ್ ವಿರುದ್ಧ ಏಕದಿನ ಸರಣಿಯ ನಂತರ ಅವರು ಯಾವುದೇ ಪಂದ್ಯಗಳಲ್ಲಿ ಆಡಿಲ್ಲದಿರು ವುದು ಅವರ ಪರದಾಟಕ್ಕೆ ಕಾರಣ ಇರಬಹುದು. ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಅವರನ್ನು ಕಡೆಗಣಿಸ ಲಾಗಿತ್ತು. ಹಾಲಿ ಐಪಿಎಲ್‌ನಲ್ಲಿ ಜೈಸ್ವಾಲ್ ಗಳಿಸಿದ ಸ್ಕೋರ್ 1, 29 ಮತ್ತು 4.

ಇನ್ನೊಂದೆಡೆ ಪ್ರಬಲ ಪಂಜಾಬ್ ತಂಡ ಅನುಭವಿ ಶ್ರೇಯಸ್ ಅಯ್ಯರ್ ನೇತೃತ್ವದಲ್ಲಿ ಉತ್ತಮ ಪ್ರದರ್ಶನ ನೀಡು ತ್ತಿದೆ. ಅಯ್ಯರ್ ಸತತ ಎರಡು ಅರ್ಧಶತ ಕಗಳನ್ನು ಬಾರಿಸಿದ್ದಾರೆ. ಅವರ ಪವರ್ ಹಿಟ್ಟಿಂಗ್ ಸುಧಾರಿಸಿದೆ ಎಂಬುದನ್ನು ಅಂಕಿ ಅಂಶಗಳೇ ಬೊಟ್ಟುಮಾಡುತ್ತವೆ. ಹೋದ ವರ್ಷದ ಐಪಿಎಲ್‌ನ 16 ಪಂದ್ಯ ಗಳಲ್ಲಿ ಅವರು 13 ಸಿಕ್ಸರ್ ಬಾರಿಸಿದ್ದರು. ಈ ಬಾರಿ ಅವರು ಈಗಾಗಲೇ ಅದನ್ನು ಸರಿಗಟ್ಟಿದ್ದಾರೆ. ಕ್ಷೇತ್ರರಕ್ಷಣೆ ನಿಯೋಜನೆ, ಬೌಲಿಂಗ್ ಬದಲಾವಣೆಯಲ್ಲೂ ಜಾಣ್ಮೆ ಮೆರೆದಿದ್ದು, ನಾಯಕತ್ವದಲ್ಲೂ ಅವರು ಸೈ ಎನಿಸಿದ್ದಾರೆ.

ರಾಯಲ್ಸ್ ಬೌಲಿಂಗ್ ಎದು ರಾಳಿ ಗಳಿಗೆ ಭಯಹುಟ್ಟಿಸುವ ರೀತಿ ಯಲ್ಲಿಲ್ಲ. ಜೋಫ್ರಾ ಆರ್ಚರ್, ಮಹೀಶ ತೀಕ್ಷಣ, ಸಂದೀಪ್ ಶರ್ಮಾ, ಹಸರಂಗ ಮತ್ತು ತುಷಾರ ದೇಶಪಾಂಡೆ ಅವರು ಸ್ಥಿರ ಪ್ರದರ್ಶನ ನೀಡಿಲ್ಲ.

ಸಂಜು ನಾಯಕತ್ವಕ್ಕೆ ಮರಳಿ ರುವುದು ರಾಯಲ್ಸ್ ಬಲ ಹೆಚ್ಚಿಸಲಿದೆ. ಆದರೆ ಜೈಸ್ವಾಲ್ ಮತ್ತು ಧ್ರುವ್ ಜುರೇಲ್ ಲಯಕ್ಕೆ ಮರಳಿದರೆ ಒಳ್ಳೆಯ ಮೊತ್ತ ಪೇರಿಸಬಹುದು.

**ಪಂದ್ಯ ಆರಂಭ:** ರಾತ್ರಿ 7.30



ಯಶಸ್ವಿ



ಶ್ರೇಯಸ್

**ಬಲಾಬಲ**

| | |
|---|---|
| ಪಂದ್ಯ | 28 |
| ರಾಜಸ್ಥಾನಕ್ಕೆ ಜಯ | 16 |
| ಪಂಜಾಬ್‌ಗೆ ಜಯ | 12 |

**ಪಾಯಿಂಟ್ಸ್ ಪಟ್ಟಿ**

| | ತಂಡ | ಪಂದ್ಯ | ಜಯ | ಸೋಲು | ಅಂಕ | ಎನ್‌ಆರ್‌ಆರ್ |
|---|---|---|---|---|---|---|
| 1 | ಪಿಬಿಕೆಎಸ್ | 2 | 2 | 0 | 4 | 1.485 |
| 2 | ಡಿಸಿ | 2 | 2 | 0 | 4 | 1.320 |
| 3 | ಆರ್‌ಸಿಬಿ | 3 | 2 | 1 | 4 | 1.149 |
| 4 | ಜಿಟಿ | 3 | 2 | 1 | 4 | 0.807 |
| 5 | ಕೆಕೆಆರ್ | 4 | 2 | 2 | 4 | 0.070 |
| 6 | ಎಲ್‌ಎಸ್‌ಜಿ | 4 | 2 | 2 | 4 | -0.150 |
| 7 | ಎಂಐ | 4 | 1 | 3 | 2 | 0.309 |
| 8 | ಸಿಎಸ್‌ಕೆ | 3 | 1 | 2 | 2 | -0.771 |
| 9 | ಆರ್‌ಆರ್ | 3 | 1 | 2 | 2 | -1.112 |
| 10 | ಎಸ್‌ಆರ್‌ಎಚ್ | 4 | 1 | 3 | 2 | -1.612 |

**ಆರೇಂಜ್ ಕ್ಯಾಪ್**
ನಿಕೋಲಸ್ ಪೂರನ್ (ಎಲ್‌ಎಸ್‌ಜಿ) 201 ರನ್

**ಪರ್ಪಲ್ ಕ್ಯಾಪ್**
ನೂರ್ ಅಹ್ಮದ್ (ಸಿಎಸ್‌ಕೆ) 9 ವಿಕೆಟ್

ಎಸ್‌.ಎಂ. ಕೃಷ್ಣ ಸ್ಮರಣಾರ್ಥ ಓಪನ್ ಟೆನಿಸ್ ಟೂರ್ನಿ

## ಚಿರಾಗ್ ಸೆಮಿಗೆ: ಕರಣ್ ನಿರ್ಗಮನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಭಾರತದ ಚಿರಾಗ್ ದುಹಾನ್ ಅವರು ಶುಕ್ರವಾರ ನೇರ ಸೆಟ್‌ಗಳಲ್ಲಿ ಸ್ವದೇಶದ ಇಶಾಕ್ ಇಕ್ಬಾಲ್ ಅವರನ್ನು ಮಣಿಸಿ ಎಸ್.ಎಂ. ಕೃಷ್ಣ ಸ್ಮರಣಾರ್ಥ ಓಪನ್ ಟೆನಿಸ್ ಟೂರ್ನಿಯ ಸಿಂಗಲ್ಸ್ ಸೆಮಿಫೈನಲ್ ತಲುಪಿದರು.

ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆ (ಕೆಎಸ್‌ಎಲ್‌ಟಿಎ) ಆಶ್ರಯದಲ್ಲಿ ಕಬ್ಬನ್ ಪಾರ್ಕ್‌ನ ಎಸ್.ಎಂ.ಕೃಷ್ಣ ಟೆನಿಸ್ ಕ್ರೀ-ಡಾಂಗಣದಲ್ಲಿ ನಡೆಯುತ್ತಿರುವ ಐಟಿಎಫ್ ವಿಶ್ವ ಟೆನಿಸ್ ಟೂರ್ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಹರಿ ಯಾಣದ ಚಿರಾಗ್ 6-2, 7-6 (1) ರಿಂದ ಇಶಾಕ್ ಅವರನ್ನು ಹಿಮ್ಮೆಟ್ಟಿಸಿದರು.

21 ವರ್ಷ ವಯಸ್ಸಿನ ಚಿರಾಗ್ ನಾಲ್ಕರ ಘಟ್ಟದಲ್ಲಿ ಕಣದಲ್ಲಿ ಉಳಿದಿರುವ ಭಾರತದ ಏಕೈಕ ಭರವಸೆಯಾಗಿದ್ದಾರೆ. ಕಣದಲ್ಲಿದ್ದ ಭಾರತದ ಇತರ ಆಟಗಾರರಾದ ಕರಣ್ ಸಿಂಗ್ ಮತ್ತು ಆರ್ಯನ್ ಶಾ ಎಂಟರ ಘಟ್ಟದಲ್ಲಿ ಹೊರಬಿದ್ದರು.

ಅಗ್ರ ಶ್ರೇಯಾಂಕದ ಜೇ ಕ್ಲಾರ್ಕ್ 7-6 (5), 6-1ರಿಂದ ಐದನೇ ಶ್ರೇಯಾಂ ಕದ ಕರಣ್ ಅವರನ್ನು ಮಣಿಸಿ ದರು. ಕಳೆದ ವಾರ ಅಹಮದಾಬಾದ್‌ನಲ್ಲಿ ಕ್ಲಾರ್ಕ್ ವಿರುದ್ಧದ ಸೆಮಿಫೈನಲ್‌ನಲ್ಲಿ ಅನುಭವಿಸಿದ್ದ ಸೋಲಿಗೆ ಸೇಡು ತೀರಿಸಿಕೊಳ್ಳುವ ಛಲದಲ್ಲಿದ್ದ ಕರಣ್‌ಗೆ ಮತ್ತೆ ನಿರಾಸೆಯಾಯಿತು. ತೀವ್ರ ಪೈಪೋಟಿಯಿಂದ ಕೂಡಿದ್ದ ಮೊದಲ ಸೆಟ್ ಅನ್ನು ಟೈ ಬ್ರೇಕರ್‌ನಲ್ಲಿ ಗೆದ್ದ ಬ್ರಿಟನ್ ಆಟಗಾರ, ಎರಡನೇ ಸೆಟ್‌ನಲ್ಲಿ ನಿರಾಯಾಸವಾಗಿ ಮೇಲುಗೈ ಸಾಧಿಸಿ ಸೆಮಿಫೈನಲ್‌ಗೆ ಮುನ್ನಡೆದರು.

ಎರಡನೇ ಶ್ರೇಯಾಂಕದ ಒಲಿವರ್ ಕ್ರಾಫರ್ಡ್ 6-3, 6-0ಯಿಂದ ಆರನೇ ಶ್ರೇಯಾಂಕದ ಆರ್ಯನ್ ಅವರನ್ನು ಸದೆಬಡಿದರು. ಹೋದ ವಾರ ಅಹಮದಾಬಾದ್‌ನಲ್ಲಿ ಪ್ರಶಸ್ತಿ ಗೆದ್ದಿದ್ದ ಆರ್ಯನ್ ಅವರಿಗೆ ಒಲಿವರ್ ವಿರುದ್ಧ ಇದು ಸತತ ನಾಲ್ಕನೇ ಸೋಲು. ಈ ಹಿಂದಿನ ಮೂರು ಮುಖಾಮುಖಿಯಲ್ಲೂ ಬ್ರಿಟನ್ ಆಟಗಾರ ಜಯ ಸಾಧಿಸಿದ್ದರು. ಜಪಾನ್‌ನ ರುರ್ಕಿ ಮತ್ಸುಡಾ 6-4, 7-6 (3)ರ ನೇರ ಸೆಟ್‌ಗಳಿಂದ ರಷ್ಯಾದ ಮ್ಯಾಕ್ಸಿಮ್ ಝುಕೋವ್ ಅವರನ್ನು ಸೋಲಿಸಿ ಸೆಮಿಫೈನಲ್ ತಲುಪಿದರು.

**ಪ್ರಜ್ವಲ್-ನಿತಿನ್ ಫೈನಲ್‌ಗೆ:** ಡಬಲ್ಸ್‌ನ ಸೆಮಿಫೈನಲ್ ನಲ್ಲಿ ಮೈಸೂರಿನ ಎಸ್.ಡಿ. ಪ್ರಜ್ವಲ್ ದೇವ್ ಮತ್ತು ಅವರ ಜೊತೆಗಾರ ನಿತಿನ್ ಕುಮಾರ್ ಸಿನ್ಹಾ (ಕೋಲ್ಕತ್ತ) 6-0, 7-6 (5) ರಿಂದ ಸ್ವದೇಶದ ಪರೀಕ್ಷಿತ್ ಸೋಮಾನಿ ಮತ್ತು ಮನೀಷ್ ಸುರೇಶಕುಮಾರ್ ಅವರನ್ನು ಮಣಿಸಿ ಫೈನಲ್ ಪ್ರವೇಶಿಸಿದರು. ಈ ಜೋಡಿಯು ಪ್ರಶಸ್ತಿ ಸುತ್ತಿನಲ್ಲಿ ನಿಕ್ ಚಾಪೆಲ್ (ಅಮೆರಿಕ) ಮತ್ತು ಗ್ರಿಗೊರಿ ಲೊಮಾಕಿನ್ (ಕಜಕಿಸ್ತಾನ) ಅವರನ್ನು ಎದುರಿಸಲಿದೆ. ಚಾಪೆಲ್–ಗ್ರಿಗೊರಿ ಜೋಡಿಯು 6-1, 6-0ರಿಂದ ಆರ್ಯನ್ ಶಾ ಮತ್ತು ಕರಣ್ ಸಿಂಗ್ ಅವರನ್ನು ಮಣಿಸಿತು.



ಭಾರತದ ಚಿರಾಗ್ ದುಹಾನ್ ಆಟದ ವೈಖರಿ


ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

## ವಿಶ್ವ ಬಾಕ್ಸಿಂಗ್: ಫೈನಲ್‌ಗೆ ಹಿತೇಶ್

**ನವದೆಹಲಿ (ಪಿಟಿಐ):** ರಾಷ್ಟ್ರೀಯ ಚಾಂಪಿಯನ್ ಹಿತೇಶ್ ಅವರು ಬ್ರೆಜಿಲ್‌ನಲ್ಲಿ ನಡೆಯುತ್ತಿರುವ ವಿಶ್ವ ಬಾಕ್ಸಿಂಗ್ ಕಪ್‌ನ ಪುರುಷರ 70 ಕೆ.ಜಿ ವಿಭಾಗದಲ್ಲಿ ಪ್ರಶಸ್ತಿ ಸುತ್ತು ಪ್ರವೇಶಿಸಿದರು. ಇಲ್ಲಿ ಫೈನಲ್ ತಲುಪಿದ ಭಾರತದ ಮೊದಲ ಬಾಕ್ಸರ್ ಅವರಾಗಿದ್ದಾರೆ.

ಗುರುವಾರ ನಡೆದ ಸೆಮಿಫೈನಲ್ ಹಣಾಹಣಿಯಲ್ಲಿ ಹಿತೇಶ್ 5–0 ಅಂತರದಿಂದ ಒಲಿಂಪಿಯನ್ ಮಾಕನ್ ಟ್ರೋರ್ (ಫ್ರಾನ್ಸ್) ಅವರನ್ನು ಮಣಿಸಿದರು. ಪ್ರಶಸ್ತಿ ಸುತ್ತಿನಲ್ಲಿ ಅವರು ಇಂಗ್ಲೆಂಡ್‌ನ ಒಡೆಲ್ ಕಮಾರಾ ಅವರ ಸವಾಲನ್ನು ಎದುರಿಸಲಿದ್ದಾರೆ.

ಕಣದಲ್ಲಿದ್ದ ಭಾರತದ ಇತರ ಬಾಕ್ಸರ್‌ಗಳಾದ ಜಾದುಮಣಿ ಸಿಂಗ್ ಮಂಡೇಂಗ್‌ಬಮ್, ವಿಶಾಲ್ ಮತ್ತು ಸಚಿನ್ ಸೆಮಿಫೈನಲ್‌ನಲ್ಲಿ ಮುಗ್ಗರಿಸಿದರು. 50 ಕೆ.ಜಿ ವಿಭಾಗದಲ್ಲಿ ಜಾದುಮಣಿ ಭಿನ್ನತೀರ್ಪಿನ ಆಧಾರದಲ್ಲಿ (2–3) ಉಜ್ಬೇಕಿಸ್ತಾನದ ಅಸಿಲ್‌ಬೆಕ್ ಜಲಿಲೋವ್ ಅವರಿಗೆ ಶರಣಾದರು. ಮೂವರು ತೀರ್ಪುಗಾರರು ಜಲಿಲೋವ್ ಪರ ತೀರ್ಪು ನೀಡಿದರೆ, ಮತ್ತಿಬ್ಬರು ಜಾದುಮಣಿ ಅವರಿಗೆ ಪಾಯಿಂಟ್ಸ್ ಕೊಟ್ಟರು.



ಹಿತೇಶ್


## ಮೇ 24ಕ್ಕೆ ಪಂಚಕುಲಾದಲ್ಲಿ ಜಾವೆಲಿನ್ ಥ್ರೋ ಸ್ಪರ್ಧೆ

**ನವದೆಹಲಿ (ಪಿಟಿಐ):** ಬಹುನಿರೀಕ್ಷಿತ ವಿಶ್ವ ಜಾವೆಲಿನ್ ಥ್ರೋ ಸ್ಪರ್ಧೆಯು ಹರಿಯಾಣದ ಪಂಚಕುಲದಲ್ಲಿ ಮೇ 24ರಂದು ನಡೆಯಲಿದೆ. ಡಬಲ್ ಒಲಿಂಪಿಕ್ ಪದಕ ವಿಜೇತ ನೀರಜ್ ಚೋಪ್ರಾ ಅವರೊಂದಿಗೆ ವಿಶ್ವದ ಪ್ರಮುಖ ಜಾವೆಲಿನ್ ಥ್ರೋ ತಾರೆಯರು ಕಣಕ್ಕೆ ಇಳಿಯುವ ನಿರೀಕ್ಷೆಯಿದೆ.

ಪಂಚಕುಲಾದ ಥಾವ್ರೂ ದೇವಿಲಾಲ್ ಕ್ರೀಡಾಂಗಣದಲ್ಲಿ ನಡೆಯುವ 'ನೀರಜ್ ಚೋಪ್ರಾ ಕ್ಲಾಸಿಕ್' ಹೆಸರಿನ ಈ ಕೂಟಕ್ಕೆ ವಿಶ್ವ ಅಥ್ಲೆಟಿಕ್ಸ್‌ನಿಂದ 'ಎ' ಕೆಟಗರಿ ಸ್ಥಾನಮಾನ ದೊರಕಿದೆ. ಆದರೆ, ಈ ಕೂಟವನ್ನು ವಿಶ್ವ ಅಥ್ಲೆಟಿಕ್ಸ್ ವೆಬ್ ಸೈಟ್‌ನಲ್ಲಿ ತನ್ನ ಕಾಂಟಿನೆಂಟಲ್ ಪ್ರವಾಸದ ಭಾಗವಾಗಿ ಸೇರಿಸಿಲ್ಲ. ಈ ಕೂಟ ಸಂಘಟಿಸುವಲ್ಲಿ ನೀರಜ್ ಚೋಪ್ರಾ ವಹಿಸಿದ ಪಾತ್ರದಿಂದ ಅವರ ಹೆಸರನ್ನೇ ಇಡಲಾಗಿದೆ.

ವಿಶ್ವ ಅಥ್ಲೆಟಿಕ್ಸ್ ಅಧ್ಯಕ್ಷ ಸೆಬಾಸ್ಟಿಯನ್ ಕೋ ಅವರು ಜನವರಿಯಲ್ಲಿ ಈ ಕೂಟಕ್ಕೆ ಅನುಮೋದನೆ ನೀಡಿದ್ದರು. ಇದು ಭಾರತದಲ್ಲಿ ಉನ್ನತ ಮಟ್ಟದ ಕ್ರೀಡಾಕೂಟವನ್ನು ಆಯೋಜಿಸುವ ಸಾಮರ್ಥ್ಯಕ್ಕೆ ವೇದಿಕೆಯಾಗಿದೆ ಎಂದು ಅವರು ಹೇಳಿದ್ದರು.ಚೋಪ್ರಾ ಈ ಕ್ರೀಡಾಕೂಟದ ಸಂಘಟನಾ ಸಮಿತಿ-ಯಲ್ಲಿದ್ದಾರೆ. ಜೆಎಸ್‌ಡಬ್ಲ್ಯು ಸ್ಪೋರ್ಟ್ಸ್ ಮತ್ತು ಭಾರತ ಅಥ್ಲೆಟಿಕ್ಸ್ ಫೆಡರೇಷನ್ (ಎಎಫ್‌ಐ) ಜೊತೆಗೆ ಕೈಜೋಡಿಸಿ ರುವ ಅವರು ಈ ಕೂಟವನ್ನು ಭಾರತಕ್ಕೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

'ನೀರಜ್ ಅವರು ತಮ್ಮ ಜೂನಿಯರ್ ಶಿಬಿರದ ಹೆಚ್ಚಿನ ಸಮಯವನ್ನು ಕಳೆದ ಸ್ಥಳದಲ್ಲಿಯೇ ಈ ಕೂಟ ನಡೆಯುತ್ತಿದೆ. ಈ ಕ್ರೀಡಾಕೂಟವು ದೇಶದ ಅಥ್ಲೆಟಿಕ್ಸ್ ವರ್ಚಸ್ಸನ್ನು ಇನ್ನಷ್ಟು ವೃದ್ಧಿಸಲಿದೆ' ಎಂದು ಎಎಫ್‌ಐ ಅಧ್ಯಕ್ಷ ಬಹದ್ದೂರ್ ಸಿಂಗ್ ಸಾಗೂ ಹೇಳಿದ್ದಾರೆ.



ನೀರಜ್ ಚೋಪ್ರಾ

## ಬ್ಯಾಸ್ಕೆಟ್‌ಬಾಲ್: ಮಂಗಳೂರಿಗೆ ಜಯ

**ಬೆಂಗಳೂರು:** ಶಶಾಂಕ್ ರೈ ಮತ್ತು ಸೌಕಿನ್ ಶೆಟ್ಟಿ ಅವರ ಅಮೋಘ ಆಟದ ಬಲದಿಂದ ಮಂಗಳೂರು ಬಿ.ಸಿ ತಂಡವು ಶುಕ್ರವಾರ ಕರ್ನಾಟಕ ಗ್ರಾಮೀಣ ಬ್ಯಾಸ್ಕೆಟ್‌ಬಾಲ್ ಲೀಗ್‌ನ ಪಂದ್ಯದಲ್ಲಿ 95–68 ರಿಂದ ಮಲ್ಲಸಜ್ಜನ ಬಿ.ಸಿ ಧಾರವಾಡ ತಂಡವನ್ನು ಮಣಿಸಿತು.

ನಗರದ ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ನಡೆದ ಪಂದ್ಯದಲ್ಲಿ ವಿರಾಮದ ವೇಳೆಗೆ 50–36 ರಿಂದ ಮುನ್ನಡೆ ಪಡೆದಿದ್ದ ಮಂಗಳೂರು ತಂಡವು ಉತ್ತರಾರ್ಧದಲ್ಲೂ ಪಾರಮ್ಯ ಮೆರೆಯಿತು. ಶಶಾಂಕ್ ಮತ್ತು ಸೌಕಿನ್ ಕ್ರಮವಾಗಿ 18 ಮತ್ತು 17 ಅಂಕ ಗಳಿಸಿದರು. ಮಲ್ಲಸಜ್ಜನ ತಂಡದ ಮಂಜುನಾಥ 24 ಪಾಯಿಂಟ್ಸ್ ಕಲೆ ಹಾಕಿದರು.

ಇತರ ಪಂದ್ಯಗಳ ಫಲಿತಾಂಶ (ಲೀಗ್ ಹಂತ): ವಿಬಿಸಿ ಮಂಡ್ಯ 73–52ರಿಂದ ಪಿನಾಕಿನಿ ಗೌರಿಬಿದನೂರು ವಿರುದ್ಧ; ಕುವೆಂಪು ಬಿ.ಸಿ ಕಲಬುರ್ಗಿ 74–63ರಿಂದ ವೈಸಿಬಿಸಿ ಬಳ್ಳಾರಿ ವಿರುದ್ಧ; ವಿಜಯನಗರ ಬಿ.ಸಿ ಮೈಸೂರು 76–49ರಿಂದ ಇನ್‌ಸ್ಪೈರ್ ಬಿ.ಸಿ ಧಾರವಾಡ ವಿರುದ್ಧ ಜಯ ಸಾಧಿಸಿದವು.

## ಶೂಟಿಂಗ್ : ಚೈನ್ ಸಿಂಗ್‌ಗೆ ಕಂಚು

**ನವದೆಹಲಿ (ಪಿಟಿಐ):** ಏಷ್ಯನ್ ಗೇಮ್ಸ್ ಪದಕ ವಿಜೇತ ಶೂಟರ್ ಚೈನ್ ಸಿಂಗ್ ಅರ್ಜೆಂಟಿನಾದ ಬ್ಯೂನೊ ಏರ್ಸ್‌ನಲ್ಲಿ ನಡೆ ಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವ-ಕಪ್‌ನಲ್ಲಿ ಕಂಚು ಗೆದ್ದು ಭಾರತಕ್ಕೆ ಮೊದಲ ಪದಕ ತಂದುಕೊಟ್ಟಿದ್ದಾರೆ.

ಪುರುಷರ 50 ಮೀ. ರೈಫಲ್ ಪೊಸಿಷನ್ 3ರಲ್ಲಿ ಭಾರತದ ಚೈನ್ ಸಿಂಗ್ 443.7 ಅಂಕಗಳನ್ನು ಪಡೆದರು.ಮೂರು ವರ್ಷದಲ್ಲಿ ಚೈನ್ ಸಿಂಗ್‌ಗೆ ಇದು ಮೊದಲ ಪದಕವಾಗಿದೆ. ಹಂಗೇರಿಯ ಇಸ್ತಾವನ್. ಚಿನ್ನ (461.0 ಅಂಕ) ಗೆದ್ದರು.ವಿಶ್ವಕಪ್ ಶೂಟಿಂಗ್‌ನಲ್ಲಿ ಏಳನೇ ಬಾರಿಗೆ ಮೊದಲ ಸ್ಥಾನ ಪಡೆದರು. ಚೀನಾದ ಟಿಯಾನ್ ಜಿಯಾಮಿಂಗ್ (458.8 ಅಂಕ) ಬೆಳ್ಳಿ ಜಯಿಸಿದರು.

ಇದಕ್ಕೂ ಮುನ್ನ ಎರಡು ಬಾರಿಯ ಒಲಿಂಪಿಯನ್ ಐಶ್ವರ್ಯ ಪ್ರತಾಪ್ ಸಿಂಗ್ ತೋಮರ್, ನೀರಜ್ ಕುಮಾರ್ ಮತ್ತು ರಿಯೋ ಒಲಿಂಪಿಯನ್ ಚೈನ್ ಅವರು ಫೈನಲ್‌ಗೆ ಅರ್ಹತೆ ಪಡೆದಿದ್ದರು. ಅರ್ಹತಾ ಸುತ್ತಿನಲ್ಲಿ ಅನುಭವಿ ಚೈನ್ ಅವರನ್ನು ಹಿಮ್ಮೆಟಿಸಿ ಐಶ್ವರ್ಯ ಎರಡನೇ ಸ್ಥಾನ ಪಡೆದರು.

ಫೈನಲ್‌ನಲ್ಲಿ ನೀರಜ್ ಉತ್ತಮ ಆರಂಭ ಪಡೆದರು. ಐದು ಶಾಟ್‌ಗಳ ನಂತರವೂ ನೀರಜ್ ಎರಡನೇ ಸ್ಥಾನದಲ್ಲಿ ಮುಂದುವರೆದರು.

ಮಹಿಳೆಯರ 25 ಮೀ. ಪಿಸ್ತೂಲ್ ಕ್ವಾಲಿಫೈಯರ್ಸ್ ವಿಭಾಗದಲ್ಲಿ ಡಬಲ್ ಒಲಿಂಪಿಕ್ ಪದಕ ವಿಜೇತೆ ಮನು ಭಾಕರ್ ಮತ್ತು ಸಿಮ್ರನ್‌ಪ್ರೀತ್ ಉತ್ತಮ ಆರಂಭ ಪಡೆದರು. ಮನು ಭಾಕರ್ 291/300 ಅಂಕ ಪಡೆದು ನಾಲ್ಕನೆ ಸ್ಥಾನ ಮತ್ತು ಸಿಮ್ರಾನ್ 290 ಅಂಕ ಪಡೆದು ಆರನೇ ಸ್ಥಾನ ಪಡೆದರು. ಒಲಿಂಪಿಯನ್ ಸ್ಕೀಟ್ ಶೂಟರ್ ರೈಜಾ ದಿಲ್ಲಾನ್ (71 ಶಾಟ್) ಮೂರನೇ ಸುತ್ತಿನ ನಂತರ ಏಳನೆ ಸ್ಥಾನ ಪಡೆದರು.